ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೬ನೇ ಮಾರ್ಚಿ ೧೯೮೭, ಫಾಲ್ಗುಣ ೧೫ ೧೯೦೮ ಶಕ.
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ
೧೦ ಗಂಟೆಗೆ ಸಮಾವೇಶಗೊಂಡಿತು

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು]

ವಿತ್ತೀಯ ಕಾರ್ಯಕಲಾಪಗಳು

ಮಾನ್ಯ ಮುಖ್ಯ ಮಂತ್ರಿಗಳವರಿಂದ 1987-88ರ ಆಯ-ವ್ಯಯದ ಮೇಲೆ ನಡೆದ ಚರ್ಚೆಗೆ ಉತ್ತರ

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—ಸನ್ಮಾನ್ಯ ಸಭಾಧ್ಯಕ್ಷರೇ, ಈ ಸಲದ ಆಯವ್ಯಯದ ಮೇಲಿನ ಚರ್ಚೆ ಅನೇಕ ರೀತಿಗಳಲ್ಲಿ ಈ ಹಿಂದೆ ನಾಲ್ಕು ವರ್ಷಗಳಲ್ಲಿ ಆದಂತಹ ಚರ್ಚೆಗಿಂತ ಭಿನ್ನವಾಗಿತ್ತು. ಈ ಚರ್ಚೆಯಲ್ಲಿ ಭಾಗವಹಿಸಿದಂತಹ ಮಾನ್ಯ ಸದಸ್ಯರುಗಳವರು ಮುಖ್ಯವಾಗಿ ವಿರೋಧಿ ಪಕ್ಷದ ಸದಸ್ಯರುಗಳವರು ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಸೂಚನೆಗಳನ್ನು ಮಾಡಿದ್ದಾರೆ. ಮಾನ್ಯ ಬಂಗಾರಪ್ಪನವರೂ ಕೂಡ ಈ ಸಲ ವಿಷಯದಿಂದ ಬಹಳ ದೂರ ಹೋಗದೇ ವಿವೇಕಪೂರ್ಣವಾದಂತಹ ಭಾಷಣವನ್ನು ಮಾಡಿದ್ದಾರೆ.

ಈ ಸಲದ ಚರ್ಚೆಯಲ್ಲಿ ಮತ್ತೊಂದು ಎದ್ದು ಕಂಡು ಬಂದಂತಹ ಅಂಶ ಏನೆಂದರೆ, ವಿರೋಧಿ ಪಕ್ಷದಲ್ಲಿರತಕ್ಕಂಥ ಎಲ್ಲಾ ಅತಿರಥ ಮಹಾರಥರು ಚರ್ಚೆಯಲ್ಲಿ ಭಾಗವಹಿಸಿದ್ದುದು. ವಿರೋಧ ಪಕ್ಷದ ನಾಯಕರು ಮತ್ತು ನನ್ನ ಹಿಂದೆ ವಿತ್ತ ಮಂತ್ರಿಗಳಾಗಿದ್ದ ಮತ್ತು ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ಮೊಯಿಲಿಯವರು ಸಹ ಮಾತನಾಡಿದ್ದಾರೆ, ಅದು ಸ್ವಾಭಾವಿಕ. ಆಮೇಲೆ ಕೆ. ಹೆಚ್. ಪಾಟೀಲರು, ಬಸವಲಿಂಗಪ್ಪನವರು ಮಾನ್ಯ ಬಂಗಾರಪ್ಪನವರು. ಶ್ರೀನಿವಾಸರವರು ಇನ್ನುಳಿದ ವಿರೋಧ ಪಕ್ಷದ ಧುರೀಣರು ಮಾತನಾಡಿದ್ದಾರೆ. ಮಲ್ಲಿಕಾರ್ಜುನ ಖರ್ಗೆಯವರು ಮಾತ್ರ ಇದರಲ್ಲಿ ಭಾಗವಹಿಸಲಿಲ್ಲ ಬಹುಶಃ ಮತ್ತೊಂದು ದಿನಕ್ಕಾಗಿ ಅವರು ಕಾಯುತ್ತಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಈ ಸಲದ ಚರ್ಚೆಯ ಮತ್ತೊಂದು ಅಂಶ ಏನೆಂದರೆ ಆರ್ಥಿಕ ಪರಿಸ್ಥಿತಿಯ ಬಗ್ಗೆ ಹೆಚ್ಚು ಸದಸ್ಯರು ಮಾತನಾಡಿ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ನನ್ನ ಬಜೆಟ್ ಮೇಲೆ ಅವರೆಲ್ಲರ ಒಂದು ಸಾಮಾನ್ಯ ಆಕ್ಷೇಪ ಏನೆಂದರೆ, ನನ್ನ ಬಜೆಟ್ ಭಾಷಣದಲ್ಲಿ ಕೇಂದ್ರ ಸರ್ಕಾರದ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಅನೇಕ ಪುಟಗಳಷ್ಟು ವ್ಯಕ್ತಮಾಡಿದ್ದೇನೆ ಮತ್ತು ಕೇಂದ್ರ ಸರ್ಕಾರವನ್ನು ಟೀಕಿಸಿದ್ದೇನೆ ಎಂಬುದು. ನಾನು ನನ್ನ ಉತ್ತರವನ್ನು ಪ್ರಾರಂಭ ಮಾಡುವುದಕ್ಕಿಂತ ಮೊದಲು ಎರಡು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಅದರಲ್ಲಿ ಒಂದು, ತಿದ್ದುಪಡಿಯ ರೂಪವಾಗಿ ಬಜೆಟ್ ಭಾಷಣದ ೩೦ನೇಯ ಪುಟದಲ್ಲಿ ೫೩ನೇ ಪ್ಯಾರಾದ ಉಪ ಕಂಡಿಕೆ ೫ಸಿಯಲ್ಲಿ ಒಂದು ವಿಚಾರ ತಪ್ಪಾಗಿ ಪ್ರಿಂಟಾಗಿದೆ ಅದು Cotton whether ginned, or unginned shall be included in the category of "agricultural produce" and shall be exempt from entry tax with effect from 1st April 1987 ಎಂದು ಇದೆ ಅದು ೧-೪-೮೬ ಎಂದು ಆಗಬೇಕು. ಇದನ್ನು ನಾವು ಇಲ್ಲಿ ಸೇರಿಸುವ ಕಾರಣವೇನೆಂದರೆ, ಎಂಟ್ರಿ ಟ್ಯಾಕ್ಸ್‌ಗೆ ಸಂಬಂಧಪಟ್ಟಂತಹ ಮಸೂದೆಯನ್ನು ರಾಷ್ಟ್ರಪತಿಗಳಿಗೆ ಕಳಿಸಿದಾಗ ಅದರಲ್ಲಿ ರಾ ಕಾಟನ್ ಎಂಬ ಶಬ್ದ ಬಳಕೆಯಾಗಿತ್ತು. ರಾ ಕಾಟನ್ ಮತ್ತು ಜಿನ್ ಕಾಟನ್ ಇವೆರಡೂ ಬೇರೆ ಬೇರೆಯೋ ಅಥವಾ ಒಂದೇ

ಎಂದೂ ಪರಿಗಣಿಸಬೇಕೋ ಎಂಬ ಬಗ್ಗೆ ಸ್ಪಷ್ಟ ಅಭಿಪ್ರಾಯ ಇರಲಿಲ್ಲ. ಆದ್ದರಿಂದ ಗಿರಣಿ ಮಾಲೀಕರು ಜಿನ್ ಕಾಟನನ್ನು ಉಪಯೋಗಿಸುವಾಗ ಅದು ರಾ ಕಾಟನ್ ಅಲ್ಲ ಎಂದು ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಗಳು ಅಭಿಪ್ರಾಯ ಪಟ್ಟು ಅದು ಟ್ಯಾಕ್ಸ್‌ಗೆ ಅರ್ಹವಾದದ್ದು ಎಂದು ತಿಳಿಸಿದರು. ಆದರೆ ಗವರ್ನಮೆಂಟ್ ಆಫ್ ಇಂಡಿಯಾದವರು ಸ್ಪಷ್ಟೀಕರಣ ನೀಡಿ cotton, whether ginned or unginned ಅವು ಒಂದೇ ವಸ್ತು ಎಂದು ಪರಿಗಣಿಸಬೇಕೆಂದು ಹೇಳಿದ್ದರಿಂದ ನಾವು ಪೂರ್ವಾನ್ವಯಗೊಳಿಸಿ ಈ ರಿಯಾಯಿತಿ ಕೊಡಬೇಕಾಗಿದೆ. ಆದ್ದರಿಂದ ಈ ತಿದ್ದುಪಡಿಯನ್ನು ಇಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ ಹೇಳುವುದಾದರೆ ಮಾನ್ಯ ಮೊಯಿಲಿಯವರು ರೀ ಕ್ಲಾಸಿಫಿಕೇಷನ್ ಆಫ್ ಅಕೌಂಟ್ಸ್ ವಿಚಾರದಲ್ಲಿ ಹೇಳಿದರು, ಏತಕ್ಕೆ ಇದನ್ನು ಮಾಡಿದ್ದೀರಿ, ಇದು ಅರ್ಥವಾಗುತ್ತಿಲ್ಲ, ಇದರಿಂದ ಗೊಂದಲವಾಗಬಹುದು ಎಂದು ಹೇಳತಕ್ಕಂತಹ ಮಾತನ್ನು ಅವರು ಹೇಳಿದರು, ಇದಕ್ಕೆ ಸಂಬಂಧಪಟ್ಟಂತೆ ೩ನೇ ಪೇಜಿನಲ್ಲಿ ಇದೆ ಅದೇನೆಂದರೆ

> "Under Article 150 of the Constitution of India, the President of India has revised the structure of classification of transactions in the Government budget and accounts with effect from 1st April 1987. This has been done to secure maixmum correspondence between the accounting classification and the Plan heads of development. The coding system has also been revised to enable computerisation. This format has been approved by the Estimates Committee. The Budget for 1987—88 has been prepared in accordance with these guidelines." ಎಂದು

ಸೆಂಟ್ರಲ್ ಬಡ್ಜೆಟ್‌ನಲ್ಲಿ ಮಾನ್ಯ ಪ್ರಧಾನಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದಂತಹ ಒಂದು ಮಾತನ್ನು ನಾನು ಇಲ್ಲಿ ಓದಿ ಹೇಳಲು ಬಯಸುತ್ತೇನೆ, ಅದನ್ನು ಓದಿದರೆ ನಮ್ಮ ರಾಜ್ಯವೇ ಅಲ್ಲ ಕೇಂದ್ರ ಸರಕಾರ ಕೂಡ ಇದನ್ನು ಅಳವಡಿಸಿಕೊಳ್ಳುತ್ತಿದೆ ಎಂದು ಸ್ಪಷ್ಟವಾಗುತ್ತದೆ. ಅವರು ತಮ್ಮ ಭಾಷಣದಲ್ಲಿ ಏನು ಹೇಳಿದಾರೆಂದರೆ,

> "Revised accounting classification to bring about one to one correpondence between heads of accounts and heads of development used for Plan purposes is being introduced from 1-4-87 in consultation with the Comptroller and Auditor General of India. This will strengthen the planning process and help better monitoring. Equally important is obtaining timely feed-back from grass root levels regarding implementation of programmes and flow of benefits therefrom." ಎಂದು

ನಾವಿಬ್ಬರೂ ಮಾತನಾಡಿಕೊಂಡು ಏನೂ ಇದನ್ನು ಬರೆಯಲಿಲ್ಲ. ಇದರಲ್ಲಿ ಉಪಯೋಗಿಸಿರತಕ್ಕಂತಹ ಶಬ್ದ ಕೂಡ ಹೆಚ್ಚೂ ಕಡಿಮೆ ಒಂದೇ ಇದೆ. ಮೊಟ್ಟ ಮೊದಲನೆಯದಾಗಿ ನಾನು ಕ್ಲಾರಿಫಿಕೇಷನ್ ಅನ್ನು ಕೊಡುತ್ತಿದ್ದೇನೆ. ಆಯವ್ಯಯದ ಮೇಲೆ ಆದಂತಹ ಚರ್ಚೆಗೆ ಉತ್ತರ ಕೊಡುವುದಕ್ಕಿಂತ ಪೂರ್ವದಲ್ಲಿ ಪತ್ರಿಕೆಗಳಲ್ಲಿ ಏನು ಪ್ರತಿಕ್ರಿಯೆ ಬಂದಿದೆಯೆಂದು ಸ್ವಲ್ಪದರಲ್ಲಿ ಇಲ್ಲಿ ಉದಾಹರಿಸಿದರೆ ಅದು ಅಪ್ರಸ್ತುತ ಆಗಲಿಕ್ಕಿಲ್ಲವೆಂದು ನನಗನ್ನಿಸುತ್ತದೆ.

I am quoting an editorial from HINDU. It reads thus:

> "That the fresh does of taxes is intended to cover more than 56 percent of the overall deficit for the year Rs. 258.09 crores) is an earnest of the State Government's political

will to involve a wider comunity participation in the development efforts of the State."

Sir, the editorial of Economic Times, dated 2-3-87 observes thus;

"Karnataka Chief Minister Ramakrishna Aegde, taping every available source, has southg to mobilise additional resources to the tune of Rs. 145.54 crore through hikes in sales tax and excise duty and yet a budgetary deficit of Rs. 147.95 crore has been left uncovered for 1987-88. The present tax effort of Rs. 145.54 crore is the highest ever garnered in a Karnataka budget. The large deficit is inevitable in view of the huge reveune and production losses of Rs.448 crore and Rs, 2·803 crore respectively owing to four successive years of drought in the State. Further, it has become both a political and economic compulsion to set right the budgetary imbalance by raising internal resources. The pressure to raise resources of such magnitude has come primarily from two quarters. The Government has laid a great deal of emphasis on its new Panchayat Raj institutions In fact, the Chief Minister began his speech with a reference to these bodies. In order to provide these institutions with a measure of financial viability, these bodies have been given Rs. 950.91 crore"

In conclusion, it is further observed thus:

"With the Central investment in the State progressively declining and pressure building up to accelerate the pace of development in the context of the decentralisation of administration, Mr. Hegde has to tap all those sectors which have reaped the benefit of earlier investments. One only hopes that the State undertakings will play their legitimate role in generating resources. And the Chief Minister. it may be mentioned, would not miss any opportunity in enforcing measures of economy."

ಡಾ॥ ತಿಮ್ಮಯ್ಯನವರು ಒಬ್ಬ ಆರ್ಥಿಕ ತಜ್ಞರು, ಕರ್ನಾಟಕದವರು. ಅವರ ಅಭಿಪ್ರಾಯ ಇದರ ಬಗ್ಗೆ ಹೀಗಿದೆ. " Overall, Dr, Thimmaiah felt that the budget was a very bold attempt to set right the finances of the State. The criticism that the budget would increase prices was, he said, not warranted since the, Central Government was responsible for most inflationary potential The state government's final deficit could in actual practic be reduced from Rs. 147.54 crore to Rs.73 crore owing to the automatic buoyancy of revenue. On the negative side, he pointed

out that the Chief Minister had not been able to curb non plan expenditure'' ಮಾನ್ಯ ಅಧ್ಯಕ್ಷರೇ. ನನ್ನ ಬಜೆಟ್ ಭಾಷಣದ ಮೊದಲನೆಯ ಪ್ಯಾರಾದಲ್ಲಿ ನಾನು ಹೊಸದಾಗಿ ಸ್ಥಾಪನೆಯಾದ ಜಿಲ್ಲಾ ಪರಿಷತ್ತುಗಳ ಮತ್ತು ಮಂಡಲ ಪಂಚಾಯಿತಿಗಳ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದ ನನ್ನ ಭಾಷೆಯ ಬಗ್ಗೆ ಕೆಲವು ಮಾನ್ಯ ಸದಸ್ಯರು ಸಾಕಷ್ಟು ವ್ಯಂಗ್ಯವಾಗಿ ಟೀಕೆ ಮಾಡಿದ್ದಾರೆ ಅಲ್ಲಿ ಬಂದಂಥ ಪ್ರತಿನಿಧಿಗಳ ಕಣ್ಣಲ್ಲಿ ಮಿಂಚು ಇವರಿಗೆ ಹೇಗೆ ಕಂಡಿತು ಇದು ಒಂದು ತಮಾಷೆ ಆಗಿತ್ತು ಎಂದು ಹೀಗೆಲ್ಲಾ ಅವರವರ ಅಭಿಪ್ರಾಯವನ್ನು ಹೇಳಿದ್ದಾರೆ. ಆದರೆ ನಾನು ಕಂಡಂಥದ್ದನ್ನು ನಾನು ಕಂಡಹಾಗೆ ಬಣ್ಣಿಸಿದ್ದೇನೆ ಈಗ ನನ್ನ ಎದುರುಗಡೆ ಕುಳಿತಂಥ ನಮ್ಮ ಅನೇಕ ಜನ ಸ್ನೇಹಿತರಿಗೆ ಪಂಚಾಯತ್ ರಾಜ್ ಪದ್ಧತಿಯಲ್ಲಿ ಎಷ್ಟರ ಮಟ್ಟಿಗೆ ವಿಶ್ವಾಸ ಇದೆಯೋ ನನಗಂತೂ ಗೊತ್ತಿಲ್ಲ ಇವರ ಕಾಲದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಯಾವ ಸ್ಥಿತಿಯಲ್ಲಿದ್ದವು ಎಂದು ಹೇಳತಕ್ಕಂಥದ್ದು ಎಲ್ಲರಿಗೂ ಗೊತ್ತು. ಅನೇಕ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಆಡಳಿತವನ್ನು...

ಶ್ರೀ ಕೆ. ಹೆಚ್. ಪಾಟೀಲ್.—ಆವಾಗ ನೀವೇ ಅಧಿಕಾರದಲ್ಲಿ ಇದ್ದಿರಿ;

ಶ್ರೀ ರಾಮಕೃಷ್ಣ ಹೆಗಡೆ.—ಆಡಳಿತವನ್ನು ಜನತೆಯ ಕೈಲಿಂದ ಸರಕಾರ ತನ್ನ ಕೈಗೆ ತೆಗೆದುಕೊಂಡ ನೆನಪು ಇನ್ನೂ ಹಸಿರಾಗಿದೆ. ಆದ್ದರಿಂದ ಆ ಜನರ ಕಣ್ಣಲ್ಲಿ ಕಂಡಂತಹ ಆ ಬೆಳಕು ಇವರ ಕಣ್ಣಿಗೆ ಕಂಡಿರಲಿಕ್ಕಿಲ್ಲ ಸುಮಾರು ೬೦ ಸಾವಿರ ಜನ ಬಂದು ಒಳ್ಳೆಯ ಕೆಲಸ ಮಾಡಿ, ಎಂದರು. ಒಂದು ಮದುವೆ ಮಾಡಿದರೆ ಟೀ, ಕಾಫಿ ಬಂದವರೆಲ್ಲರಿಗೂ ಸಿಗುವುದಿಲ್ಲ ಅಂಥದ್ದರಲ್ಲಿ ಆ ಜನರು ಬಂದಾಗ ಯಾವುದೇ ರೀತಿಯ ಗಲಾಟೆಯೂ ಆಗಿಲ್ಲ. ಯಾವುದೇ ರೀತಿಯ ಅಶಾಂತಿಯನ್ನು ಅವರು ತೋರಿಸಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಯಾವುದು ಒಂದಾದರೂ ವಿರೋಧ ಇರಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅಷ್ಟೇ ಅಲ್ಲ. ಅವರ ಅನುಕೂಲತೆ ಬಗ್ಗೆ ನಾವು ಮಾಡಿದಂತಹ ವ್ಯವಸ್ಥೆಯಲ್ಲಿ ಕೆಲವು ನ್ಯೂನತೆಗಳು ಇರಬಹುದು. ಇಲ್ಲವೆಂದು ನಾನು ಹೇಳುವುದಿಲ್ಲ ಆದರೂ ಕೂಡ ಆ ಜನರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲಿಲ್ಲ. ಈ ವೇದಿಕೆಯ ಮೇಲೆ ಕುಳಿತುಕೊಳ್ಳುವಂತಹ ಅವರು ಕೂಡ ನಾವು ಹೇಳುವಂತಹ ನಿಲುವಿಗೆ ಒಪ್ಪಿಗೆ ಕೊಡಬಹುದು. ನಾನು ಹೇಳುವುದು ಅವರ ಭಾಷಣದಲ್ಲಿ ನೆನಪು ಇದ್ದರೆ ನೆನಪು ಮಾಡಿಕೊಳ್ಳಲಿ, ಇಲ್ಲದಿದ್ದರೆ ನೆನಪು ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಬಿಸಿಲಿನಲ್ಲಿ ನಾವು ನೀವು ಹೊಂದಿಕೊಳ್ಳುತ್ತಿದ್ದೇವೆ. ಅದಕ್ಕಾಗಿ ಒಂದು ಶಾಮಿಯಾನ ಹಾಕಿದರೆ ಬಹಳ ಒಳ್ಳೆಯದು:ಈ ರೀತಿ ನಾವು ಜನರ ಕೈಗೆ ಅಧಿಕಾರ ಕೊಟ್ಟಿರುವ ರೀತಿ ಸರಿಯಾದ ರೀತಿಯೆಂದು ತೋರಿಸಿದರು ಯಾವ ರೀತಿ ಆಡಳಿತ ಮಾಡಬೇಕು ಎನ್ನುವುದನ್ನು ಇವರಿಗ ಬಿಡಬೇಕು.ಹೌದು ಈ ಜನರಿಗೇ ಬಿಡಬೇಕು. ಅದಕ್ಕಾಗಿ ನಾವು ಅಲ್ಲಿ ನೆರೆದಿರತಕ್ಕಂಥಹ ಸಹೋದರ ಸಹೋದರಿಯರಿಗೆ ನಾನು ನನ್ನ ಮೆಚ್ಚಿಗೆಯನ್ನು ವ್ಯಕ್ತ ಮಾಡಿದೆ. ಒಂದು ಕಡೆ ಅನೇಕ ಮಾನ್ಯ ಸದಸ್ಯರು ಹೇಳಿದರು, ಮಾನ್ಯ ಕೆ. ಹೆಚ್ ಪಾಟೀಲ್‌ರವರೂ ಹೇಳಿದರು ಈ ರೀತಿಯ ಅಧಿಕಾರ ಮಾಡಲಿಕ್ಕೆ ಹಿಂದೆ ಲೋಕಲ್ ಬೋರ್ಡ್ ಇದ್ದವು ಎಂದು ಬ್ರಿಟಿಷರ ಕಾಲದಲ್ಲಿ ಸ್ಕೂಲ್ ಬೋರ್ಡ್ ಇದ್ದವು. ಆದರೆ ದುರ್ದೈವದ ವಿಚಾರ ಅಂದರೆ ಬ್ರಿಟಿಷರ ಕಾಲದಲ್ಲಿ ನಮ್ಮ ದೇಶದಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಯಾವ ಅಧಿಕಾರ ಇದ್ದವೋ, ಸ್ವಾತಂತ್ರ್ಯ ಬಂದಮೇಲೆ ಆ ಅಧಿಕಾರವನ್ನು ನಾವು ಕಸಿದುಕೊಂಡೆವು. ಈಗ ಈ ಅಧಿಕಾರವನ್ನು ನಾವು ಜನರಿಗೆ ವಾಪಸ್ ಕೊಡುತ್ತಿದ್ದೇವೆ. ಆ ಆ ಒಂದು ದಿನ ಐತಿಹಾಸಿಕ ದಿನವೆಂದು ಹೇಳಿದೆ, ಐತಿಹಾಸಿಕ ದಿನವೆಂದು ಏತಕ್ಕೆ ಆಯಿತು ಇತಿಹಾಸದ ಒಂದು ಹೊಸ ಪುಟ ಪ್ರಾರಂಭ ಆಯಿತು ನಾನು ಈ ಒಂದು ಮಹಾ ಪ್ರಯೋಗ ಯಶಸ್ವಿಯಾಗುತ್ತದೆಂಬ ನಂಬಿಕೆಯನ್ನು ವ್ಯಕ್ತ ಮಾಡಲು ಬಯಸುತ್ತೇನೆ. ಚುನಾವಣೆ ವಿಚಾರದಲ್ಲಿ ಶ್ರೀಮಾನ್ ಕೆ.ಹೆಚ್.ಶ್ರೀನಿವಾಸ್ ಮತ್ತು ಇನ್ನಿತರ ಮಾನ್ಯ ಸದಸ್ಯರು ನಾನಾ ದೃಷ್ಟಿಗಳಲ್ಲಿ ಅಸಮರ್ಥವಾದಂತಹ ಟೀಕೆಯನ್ನು ಇಲ್ಲಿ ಮಾಡಿದರು..

ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಅಸಮರ್ಥನೀಯವಾದಂತಹ ನೀತಿಯನ್ನು ಜಾರಿ ಮಾಡಿಲ್ಲ. ಆದ್ದರಿಂದ ಅದರ ಬಗ್ಗೆ ನಾನು ಉತ್ತರ ಕೊಡಲು ಹೋಗುವುದಿಲ್ಲ. ಆದರೂ ಚುನಾವಣೆಯ ಸಮಯ

ದಲ್ಲಿ ಹೆಂಡ ಹರಿಯಿತು. ಹಣ ಹರಿಯಿತು ಎಂದು ಹೇಳಿದರು. ಇದನ್ನು ನಾನು ಹೇಳುವುದು ಅಗತ್ಯವಿಲ್ಲ. ಕರ್ನಾಟಕ ಜನತೆಯು ರೀತಿನೀತಿ ಉತ್ತರ ದೇಶದ ಉತ್ತರ ಹಿಂದೂಸ್ತಾನದ ಜನತೆಗಿಂತ ಸ್ವಲ್ಪ ವ್ಯತ್ಯಾಸ ಇದೆ. ಇಲ್ಲಿ ಅಕಸ್ಮಾತ್ ಹೆಂಡ ಕುಡಿಸಿದರೂ ಅವರು ಹೇಗೆ ಓಟು ಮಾಡಬೇಕೋ ಆ ರೀತಿ ಮಾಡುತ್ತಾರೆ ಆದ್ದರಿಂದ ಅದರ ಪ್ರಭಾವ ನಾನು ಹೇಳಿದರೆ ಏನು ಪ್ರಯೋಜನ? ಚುನಾವಣೆ ಫಲಿತಾಂಶ ನಮ್ಮ ಪರವಾಗಿ ಆಗುತ್ತದೆಂಬ ಆತುರದಿಂದ ನಾವು ಚುನಾವಣೆ ಮಾಡಲಿಲ್ಲ. ಇಂತಹ ಹವ್ಯಾಸ ನಮಗೆ ಇಲ್ಲ. ಇದು ನಡೆಯುವುದೂ ಇಲ್ಲ.

(ಗೊಂದಲ)

ಮಾನ್ಯ ಅಧ್ಯಕ್ಷರೇ, ನನ್ನ ಎದುರಿಗಿರುವ ಎಲ್ಲ ಹಳೆಯ ಮಿತ್ರರಿಗೆ ಏನು ಹೇಳುತ್ತೇನೆಂದರೆ, ನನ್ನ ಭಾಷಣ ಮುಗಿಯಲಿ. ಆದಾದ ಮೇಲೆ ಏನು ಪ್ರಶ್ನೆ ಕೇಳಿದರೂ ಅದಕ್ಕೆ ಉತ್ತರವನ್ನು ಕೊಡುತ್ತೇನೆ, ಅದನ್ನು ಬಿಟ್ಟು ಈ ರೀತಿ ಮಧ್ಯೆ ಮಧ್ಯೆ ಪ್ರಶ್ನೆ ಕೇಳುತ್ತಾ ಹೋದರೆ ನನ್ನ ಉತ್ತರದ ಸರಪಳಿ ಕಿತ್ತುಹೋಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.— ನೀವು ಸಹ ನಮ್ಮನ್ನು ಕೆಣಕಬೇಡಿ.

ಶ್ರೀ ರಾಮಕೃಷ್ಣ ಹೆಗಡೆ.— ಇದು ಡಿಬೇಟ್ ಮಧ್ಯದಲ್ಲಿ ಇರಲೇಬೇಕಾದ ವಿಷಯ. ನೀವು ಮಾತನಾಡುವಾಗ ನಮ್ಮನ್ನು ಕೆಣಕಲಿಲ್ಲವೇ? ನೀವು ಮಾತನಾಡುವಾಗ ನಾನು ಕುಳಿತುಕೊಂಡು ಕೇಳಲಿಲ್ಲವೇ? ನಾನು ಮಾತನಾಡುವಾಗ ಕೆಲವು ಅಂಕಿಸಂಖ್ಯೆಗಳನ್ನು ಕೊಡಬೇಕಾಗಿದೆ ನೀವು ಮಾತನಾಡುವಾಗ ಒಂದೊಂದು ಮಾತನ್ನು ನಾನು ಕೇಳಿದೆ. ಆದ್ದರಿಂದ ನಾನು ಮಾತನಾಡುವಾಗ ಬೇರೆ ಯಾವರು ದಯವಿಟ್ಟು ಮಧ್ಯೆ ಬಾಯಿ ಹಾಕಬಾರದೆಂದು ನನ್ನ ನಿವೇದನೆ. ಮೊನ್ನೆ ನಡೆದ ಚುನಾವಣೆ ಸರಿಯಾಗಿ ನಡೆಯಿತೋ ಅಥವಾ ಇಲ್ಲವೋ ಅದು ಮುಖ್ಯವಲ್ಲ. ಜನರು ತಮ್ಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಅವರ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳೋಣ. ಇನ್ನು ಮುಂದೆ ಈ ಸಂಸ್ಥೆಗಳು ಚೆನ್ನಾಗಿ ನಡೆಯುವ ರೀತಿಯಲ್ಲಿ ಅವರಿಗೆ ಸಹಾಯ ಮಾಡೋಣ. ಇಡೀ ದೇಶ ಇದನ್ನು ಎದುರು ನೋಡುತ್ತಿದೆ ಎಂಬುದು ಅಕ್ಷರಶಃ ನಿಜ. ಇದು ಸತ್ಯಾಂಶ ವಿಚಾರ. ನಾವು ಎಲ್ಲರೂ ಸೇರಿ ಈ ಒಂದು ಕಾರ್ಯಕ್ರಮವನ್ನು ಪ್ರಯೋಗವನ್ನು ಯಶಸ್ವಿಯಾಗಿ ಮಾಡೋಣ. ಈಗ ಮಾನ್ಯ ಮೊಯಿಲಿ ಅವರು ಅನುಭವಸ್ಥರು. ಮೂರು ವರ್ಷಗಳ ಕಾಲ ನಮ್ಮ ರಾಜ್ಯದ ಅರ್ಥಮಂತ್ರಿಗಳಾಗಿದ್ದರು. ಅವರು ನನ್ನ ಭಾಷಣದಲ್ಲಿ ಹೇಳಿದಂತಹ ಕೆಲವು ಮಾತುಗಳನ್ನು ಹೇಳುವುದಕ್ಕೆ ಹೋಗಿದ್ದಾರೆ. ಅದರ ಬಗ್ಗೆ ನಾನು ಆಕ್ಷೇಪಣೆಯನ್ನು ಮಾಡುವುದಿಲ್ಲ. ಆದರೆ ಅವರು ತಮ್ಮ ಭಾಷಣದಲ್ಲಿ ತಿಳಿದೋ ಅಥವಾ ತಿಳಿಯದೆಯೋ ಬಹುಶಃ ತಿಳಿಯದೇ ಕೆಲವು ಸತ್ಯಕ್ಕೆ ದೂರವಾದಂಥ ಮಾತನ್ನು ಹೇಳಿದ್ದಾರೆ. ಅವರು ತಿಳಿದೇ ಹೇಳಿದ್ದಾರೆಂದು ಹೇಳಿದರೆ ಅದು ಒಂದು ಆರೋಪವಾದೀತು. ಆದ್ದರಿಂದ ನಾನು ಅವರು ತಿಳಿಯದೇ ಮಾತನಾಡಿದ್ದಾರೆಂದು ಹೇಳುತ್ತೇನೆ.

ಈಗ ಮುಳವಾಡಿ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ನ ಉದ್ಘಾಟನೆ ಮಾಡಲು ಮಾನ್ಯ ನೀರಾವರಿ ಮಂತ್ರಿಗಳು ಮತ್ತು ನಾನು ಬಿಜಾಪುರ ಜಿಲ್ಲೆಗೆ ಹೋದಾಗ ಅದರ ಅಡಿಗಲ್ಲು ಸಮಾರಂಭವಾಯಿತು. "ಮುಳವಾಡಿಗೆ ಈಗ ದುಡ್ಡು ಎಲ್ಲಿ ಕೊಟ್ಟಿದ್ದೀರಿ. ಅದನ್ನು ಮೋಸ ಮಾಡಿದ್ದೀರಿ ಎಂದು ಹೇಳಿದ್ದೀರಿ" ಆದರೆ ಮಾನ್ಯ ಮೊಯಿಲಿಯವರಿಗೆ ಬಹುಶಃ ಗೊತ್ತಿಲ್ಲ. ಇದು ಅಪ್ಪರ್ ಕೃಷ್ಣ ಯೋಜನೆಯ ಒಂದು ಭಾಗ, ಅದಕ್ಕಿಂತ ಮೊದಲು ತುಮಕೂರು ಚೀಫ್ ಇಂಜಿನಿಯರ್ ಆಫೀಸ್‌ನ ಟ್ರಾನ್ಸ್‌ಫೇರ್ ಮಾಡಿ ಉದ್ಘಾಟನೆ ಮಾಡಿದರು. "ಈ ತುಮಕೂರು ಕಾಲುವೆಗೆ ದುಡ್ಡು ಎಲ್ಲಿದೆ.? ಈಗ ಕೇವಲ ಹತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಎಂದು ಹೇಳಿದ್ದೀರಿ" ಈ ಹತ್ತು ಲಕ್ಷ ರೂಪಾಯಿಗಳನ್ನು ಚೀಫ್ ಇಂಜಿನಿಯರ್ ಆಫೀಸ್ ಖರ್ಚಿಗಾಗಿ ಕೊಟ್ಟಿರತಕ್ಕಂಥಾದ್ದು. ಹೇಮಾವತಿಯ ಒಟ್ಟು ನಾಲೆಗಳಲ್ಲಿ ಈ ಎರಡೂ ಸೇರಿವೆ. ಅದರಲ್ಲಿ ಒಂದು ಗೂರೂರು ನಾಲೆ. ಈ ಎರಡಕ್ಕೂ ಸೇರಿ ೫೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈಗ ತುಮಕೂರು ನಾಲೆಗೆ ಈ ವರ್ಷ ಸುಮಾರು ೧೫ ಲಕ್ಷ ಸಿಕ್ಕುತ್ತದೆ. ಆದರೆ ಅದಕ್ಕೆ ಹತ್ತು ಲಕ್ಷ ಮಾತ್ರ ಕೊಟ್ಟಿದ್ದೀರಿ ಎಂದು ನೀವು ಹೇಳಿದ್ದೀರಿ. ಅದು ಪೇಪರ್‌ನಲ್ಲಿ ಬಂದಿದೆ.

"ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ನೀವು ಹೋದವರ್ಷದಲ್ಲಿ ಅಂದರೆ ೧೯೮೬–೮೭ರಲ್ಲಿ ಸುಮಾರು ೬೨.೮ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ ಬರುವ ವರ್ಷಕ್ಕೆ ಕೇವಲ ೭೨ ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ ಎಂದು ಹೇಳಿದರು" ಇದಂತೂ ಸತ್ಯಕ್ಕೆ ದೂರವಾದುದು.

ಇನ್ನು ಯುಕೆಪಿಗೆ ನಾವು ಒಟ್ಟು ಕೊಟ್ಟಿರತಕ್ಕಂಥದ್ದು ಒಂದು ನೂರು ಕೋಟಿ ರೂಪಾಯಿಗಳು ಈ ೭೨ ಕೋಟಿಯನ್ನು ಒಂದು ಕಡೆ ತೋರಿಸಿದ್ದೇವೆ. ಅಲ್ಲಿ ಜಮೀನು ಅಕ್ವೈರ್ ಮಾಡತಕ್ಕಂಥದ್ದಕ್ಕೆ ಪ್ರತ್ಯೇಕವಾಗಿ ದುಡ್ಡನ್ನು ಒದಗಿಸಿದ್ದೇವೆ. ಮತ್ತೆ ೧೫ ಕೋಟಿಗಳಷ್ಟು ಅಲ್ಲಿಯು ಕೆನಾಲ್ ಅಭಿವೃದ್ಧಿಗೆ ಪ್ರತ್ಯೇಕವಾಗಿ ತೋರಿಸಿದ್ದೇವೆ. ಅಲ್ಲಿಗೆ ಒಂದು ನೂರು ಕೋಟಿ ರೂಪಾಯಿಗಳು ಯುಕೆಪಿಗೆ ನಮ್ಮ ಬಜೆಟ್‌ನಲ್ಲಿ ಇದೆ. ಇದು ಅವರಿಗೆ ಬಹುಶಃ ಗೊತ್ತಿಲ್ಲದೇ ಇರುವುದರಿಂದ ಈ ಒಂದು ವಿಚಾರವನ್ನು ಅವರು ಪ್ರಸ್ತಾಪ ಮಾಡಿರಬಹುದು.

ನಮ್ಮ ಹಿಂದಿನ ಅರ್ಥಮಂತ್ರಿಗಳು ಅವರ ಕಾಲದಲ್ಲಿ ಮತ್ತು ನಮ್ಮ ಕಾಲದಲ್ಲಿ ಬಜೆಟ್‌ನಲ್ಲಿ ಬೇರೆ ಬೇರೆ ಬಾಬುಗಳಿಗೆ ಒದಗಿಸಿದಂತ ಹಣದ ಬಗ್ಗೆ ಮಾತನಾಡುತ್ತಾ ನಿಮ್ಮ ಕಾಲದಲ್ಲಿ ಅಂದರೆ ನಮ್ಮನ್ನು ತೋರಿಸಿ, ಎಲ್ಲಾ ಬಾಬುಗಳಿಗೆ ಹಣ ಕಡಿಮೆಯಾಗಿದೆ ಎಂದು ಹೇಳಿದ್ದಾರೆ

ಮಾನ್ಯ ಅಧ್ಯಕ್ಷರೇ, ಈ ಅಭಿವೃದ್ಧಿ ವೆಚ್ಚದಲ್ಲಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರನ್ನು ಮತ್ತು ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರನ್ನು ಹೋಲಿಸಿ ನೋಡಿ ಹಣ ಕಡಿಮೆಯಾಗಿರತಕ್ಕಂಥ ಮಾತನ್ನು ಅವರು ತಮ್ಮ ಭಾಷಣದಲ್ಲಿ ಹೇಳಿದರು. ಬಹುಶಃ ತಿಳಿಯದೇ ಕೆಲವು ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದಾರೆ. ತಿಳಿದು ಆಡಿದ್ದಾರೆಂದು ಹೇಳಿದರೆ ಅದು ಆರೋಪವಾಗುತ್ತದೆ. ತಿಳಿಯದೆ ಹೇಳುವುದು ಸರಿಯಲ್ಲ. ಅಜ್ಞಾನ ಗುರುತರವಾದ ಅಪರಾಧ. ತಿಳಿಯದೆ ಮಾಡಿದ್ದಾರೆ

ಶ್ರೀ ಕೆ. ಹೆಚ್. ಪಾಟೀಲ್.— ತಿಳಿಯದೇ ಯಾರೂ ಮಾತನಾಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬುದ್ಧಿವಂತಿಕೆ ಒಬ್ಬರ ಗುತ್ತಿಗೆ ಅಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಮೊಯಿಲಿಯವರಿಗೆ ಗೊತ್ತಿರುವಂತೆ ನಾವು ಏನು ಸಾಲವನ್ನು ಕೇಂದ್ರಕ್ಕೆ ಮರುಪಾವತಿ ಮಾಡಬೇಕು, ಆ ಸಾಲದ ಭಾರ ಪ್ರತಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಹೋಗುತ್ತಿದೆ. ಅದನ್ನು ನಾನು expenditure ನಲ್ಲಿ ಸೇರಿಸುವುದು ಅಗತ್ಯವಾಗಿದೆ. ಅದನ್ನು ನಾವು ಬೇರೆ ಕಡೆ ಸೇರಿಸಲು ಆಗುವುದಿಲ್ಲ. Non development expenditure ಹೆಚ್ಚು ಆದರೇನಂತೆ; ಈಗ ಸಾಲಪತ್ರಗಳನ್ನು ತೆಗೆದುಕೊಂಡರೆ ೧೯೮೦–೮೧ರಲ್ಲಿ ಕರ್ನಾಟಕದಲ್ಲಿ Non development expenditure ೩೧.೫ ಆದರೆ ದೇಶದ ಇನ್ನಿತರ ಎಲ್ಲಾ ರಾಜ್ಯಗಳನ್ನೂ ಸೇರಿಸಿದರೂ All India/ ೩೩,೭೧ ಇದ್ದರೆ ೧೯೮೪–೮೫ರಲ್ಲಿ ೩೬ ಪರ್ಸೆಂಟ್ ಇತ್ತು. All India/ ಯಾವ ಪರ್ಸೆಂಟೇಜ್ ಇದೆಯೋ ಅದೇ ಅನುಪಾತದಲ್ಲಿ ಕರ್ನಾಟಕದಲ್ಲೂ ಬೆಳೆದಿದೆ. ಆದ್ದರಿಂದ ಇದರ ಬಗ್ಗೆ ಹೆಚ್ಚು ಚಿಂತನೆ ಮಾಡತಕ್ಕ ಕಾರಣ ಇಲ್ಲವೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಈಗ ನೀರಾವರಿ ಯೋಜನೆ ತೆಗೆದುಕೊಂಡರೆ, ಮಾನ್ಯ ಮೊಯಿಲಿಯವರ ಕಾಲದಲ್ಲಿ ಅಂದರೆ ೧೯೮೦–೮೧ರಲ್ಲಿ ಈ ಸಣ್ಣ ನೀರಾವರಿ ಯೋಜನೆಗಳೂ ಸೇರಿದಂತೆ ಒಟ್ಟು ಪ್ಲಾನ್‌ನಲ್ಲಿ ೧೧೪.೪೬ ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು, ಇದರಲ್ಲಿ ಕಾವೇರಿಗೆ ೨೫ ಕೋಟಿ ೧೩ ಲಕ್ಷಗಳು. ೧೯೮೧–೮೨ರಲ್ಲಿ ೧೮.೭೭ ಕೋಟಿಗಳು, ಕಾವೇರಿಗೆ ೨೫.೫೫ ಕೋಟಿಗಳು. ಅಂದರೆ ಸ್ವಲ್ಪವೂ ಕೂಡ ಹೆಚ್ಚು ಕೊಟ್ಟಿಲ್ಲ. ೧೯೮೨–೮೩ರಲ್ಲಿ ೧೨೭ ಕೋಟಿಗಳು. ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕಾವೇರಿಗೆ ೧೦ ಕೋಟಿ ರೂಪಾಯಿಗಳನ್ನು ನಾವು ಹೆಚ್ಚು ಕೊಟ್ಟಿದ್ದೇವೆ. ಅದರ ಬಗ್ಗೆ ಚರ್ಚೆಯಾಗಿದೆ ಮತ್ತು ಇನ್ನಿತರ ನೀರಾವರಿ ಯೋಜನೆಗಳಿಗೆ ಸುಮಾರು ೧೦ರಿಂದ ೧೨ ಕೋಟಿ ರೂಪಾಯಿಗಳನ್ನು ಹೆಚ್ಚು ಕೊಟ್ಟಿದ್ದೇವೆ. ಆದ್ದರಿಂದ ಈ ಹಿಂದಿನ ವರ್ಷಕ್ಕಿಂತ ೧೦ಕೋಟಿ ರೂಪಾಯಿ ಇದರಲ್ಲಿ ಹೆಚ್ಚಾಗಿದೆ. ಕಾವೇರಿಗೆ ೩೫.೪೩ ಕೋಟಿಗಳಲ್ಲಿ ೧೦ ಕೋಟಿ ಹೆಚ್ಚಾಗಿದೆ ಆದರೆ ಆಯವ್ಯಯದಲ್ಲಿ ಕೊಟ್ಟಿರುವ ಮೊತ್ತ ೨೫ ಕೋಟಿ ಮಾತ್ರ ೧೯೮೩–೮೪ ಪ್ಲಾನ್‌ನ ಮೊತ್ತ ೧೪೧.೯೮ ಕೋಟಿಗಳು. ಇದರಲ್ಲಿ ಕಾವೇರಿಗೆ ೪೬.೧೬ ಕೋಟಿಗಳು. ೧೯೮೪.೮೫ರ ಪ್ಲಾನ್‌ನ ಮೊತ್ತ ೧೬೧.೮೬ ಕೋಟಿಗಳು. ಇದರಲ್ಲಿ ಕಾವೇರಿಗೆ ೬೫.೫೬ ಕೋಟಿಗಳು.

೧೯೮೫–೮೬ರಲ್ಲಿ ೧೭೯ ಕೋಟಿ ರೂಪಾಯಿ ೪೪ ಲಕ್ಷ. ಇದರಲ್ಲಿ ಕಾವೇರಿಗೆ ೭೦ ಕೋಟಿ ರೂಪಾಯಿ. ೧೯೮೬–೮೭ರಲ್ಲಿ ಒಟ್ಟು ೨೨೧ ಕೋಟಿ ರೂಪಾಯಿ ೮೯ ಲಕ್ಷ, ಇದರಲ್ಲಿ ಕಾವೇರಿಗೆ ೭೦ ಕೋಟಿ ರೂಪಾಯಿ, ಅಂದರೆ ಮಾನ್ಯ ವೀರಪ್ಪಮೊಯ್ಲಿ ಅವರು ಅರ್ಥಮಂತ್ರಿಗಳಾಗಿದ್ದಾಗ ಯೋಜನೆ ಕೆಳಗೆ, ನೀರಾವರಿಗೆ ಎಷ್ಟು ಹಣವನ್ನು ಒದಗಿಸಿದ್ದರೋ ಅದಕ್ಕಿಂತ ಎರಡು ಪಟ್ಟು ಹೆಚ್ಚು ಹಣವನ್ನು ನಾವು ಬಡ್ಜೆಟ್‌ನಲ್ಲಿ ಒದಗಿಸಿದ್ದೇವೆ. ಮತ್ತು ಕಾವೇರಿಗೆ ೪ ಪಟ್ಟು ಹೆಚ್ಚು ಹಣವನ್ನು ಒದಗಿಸಿದ್ದೇವೆ.

ಅವರು ಇದ್ದಾಗ ಕಾವೇರಿಗೆ ೨೫ ಕೋಟಿ ರೂಪಾಯಿಗಿಂತ ಹೆಚ್ಚಾಗಿ ಒಂದು ಕಾಸೂ ಕೊಡಲಿಲ್ಲ. ಈ ವರ್ಷ ನಾವು ೧೦೦ ಕೋಟಿ ರೂಪಾಯಿ ಒದಗಿಸಿದ್ದೇವೆ. ಮಾನ್ಯ ಅಧ್ಯಕ್ಷರೆ, ನನ್ನ ಮೇಲೆ ಪುನಃ ಪುನಃ ಒಂದು ಆರೋಪ ಬರುತ್ತಾ ಇದೆ. ಏನೆಂದರೆ ಈ ಬಜೆಟ್ಟಿನ ವಿಚಾರದಲ್ಲಿ ರಾಜ್ಯದ ವಿಚಾರದಲ್ಲಿ ಹಣಕಾಸಿನ ಪರಿಸ್ಥಿತಿ ಬಗ್ಗೆ ಹೇಳುವುದನ್ನು ಬಿಟ್ಟು ದೇಶದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ ಎಂದು, ಮತ್ತು ಕೇಂದ್ರ ಸರ್ಕಾರದ ಬಜೆಟ್ ಬಗ್ಗೆ ಟೀಕೆ ಮಾಡುತ್ತಿದ್ದಾರೆ ಎಂದು. ಹಾಗೂ ಅಲ್ಲಿನ ಡಿಫಿಸಿಟ್ ಫೈನಾನ್ಸ್ ಬಗ್ಗೆ ಹೆಚ್ಚಾಗಿ ನಿಂದನೆ ಮಾಡುತ್ತಿದ್ದಾರೆ ಎಂದು. ಈ ಬಗ್ಗೆ ನಾನು ನನ್ನ ಮಾನ್ಯ ಸ್ನೇಹಿತರಲ್ಲಿ ಒಂದೇ ಒಂದು ಪ್ರಶ್ನೆಯನ್ನು ಕೇಳಲು ಬಯಸುತ್ತೇನೆ. ಏನೆಂದರೆ, ಕರ್ನಾಟಕ ಅಂತ ಹೇಳುವುದು ಒಂದು ರಾಷ್ಟ್ರವೋ ಅಥವಾ ಒಂದು ರಾಜ್ಯವೋ, ಕರ್ನಾಟಕ ಅನ್ನುವುದು ಒಂದು ಪ್ರತ್ಯೇಕ ರಾಷ್ಟ್ರವಾಗಿದ್ದರೆ ನಮ್ಮ ಸುತ್ತ ಮುತ್ತ ಇರತಕ್ಕಂಥಾ ಸರ್ಕಾರಗಳು ಕೇಂದ್ರ ಸರ್ಕಾರದ ಬಗ್ಗೆ ಪ್ರಸ್ತಾಪ ಮಾಡತಕ್ಕಂಥಾ ಪ್ರಮೇಯವೇ ಬರುತ್ತಾ ಇರಲಿಲ್ಲ. ಆದರೆ ಇದು ರಾಷ್ಟ್ರದ ಒಂದು ಭಾಗವಾಗಿರುವುದರಿಂದ ಅಥವಾ ಆಗಿರುವವರೆಗೆ ದೇಶದ ಆರ್ಥಿಕ ಪರಿಸ್ಥಿತಿ......

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಹೇಳುವುದನ್ನು ನೋಡಿದರೆ ಆ ರೀತಿ ಆಗಬಹುದು, ಅಥವಾ ಆಗದೇ ಇರಬಹುದು ಅನ್ನುವ ಅರ್ಥ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಆಗಿರುವವರೆಗೆ ಎಂದರೆ ಆಗದೇ ಇರಬಹುದು, ಆಗಬಹುದು ಅನ್ನುವ ಅಭಿಪ್ರಾಯ ಬರುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಹುಷಾರಾಗಿರಿ.

ಶ್ರೀ ರಾಮಕೃಷ್ಣ ಹೆಗಡೆ.—ಆಗಲಿ, ಕರ್ನಾಟಕ ರಾಜ್ಯ ಈ ದೇಶದ ಒಂದು ಭಾಗವಾಗಿರುವುದರಿಂದ ದೇಶದ ಒಟ್ಟು ಆರ್ಥಿಕ ಪರಿಸ್ಥಿತಿಯ ಪ್ರಭಾವ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಆಗುತ್ತದೆ. ಇವೆರಡೂ ಒಂದಕ್ಕೊಂದು ತೀರಾ ಹತ್ತಿರ ಸಂಬಂಧವಿರತಕ್ಕಂಥಾ ವಿಚಾರಗಳು, ಕರ್ನಾಟಕ ಒಂದು ನಡುಗಡ್ಡೆ ಅಲ್ಲ. ಉದಾಹರಣೆ ಕೊಡುವುದಾದರೆ, ಮಾನ್ಯ ಅಧ್ಯಕ್ಷರೇ, ಇನ್‌ಫ್ಲೇಷನ್ ವಿಚಾರಕ್ಕೆ ಬಂದರೆ ಈ ಹಣದುಬ್ಬರ ಹೇಗಾಗುತ್ತದೆ? ಸನ್ಮಾನ್ಯ ಬಂಗಾರಪ್ಪನವರು ಹೇಳಿದರು, ಕರ್ನಾಟಕದಲ್ಲಿ ರೂಪಾಯಿಯ ಬೆಲೆ ಕಟ್ಟಿದರೆ ಕಡಿಮೆ ಎಂದು. ಅವರಿಗೆ ಯಾರು ಮಾಹಿತಿ ಕೊಟ್ಟರೋ ಗೊತ್ತಿಲ್ಲ. ಬೆಂಗಳೂರು ವಿಚಾರ ತೆಗೆದುಕೊಂಡರೆ ನಿಜ. ಬೆಂಗಳೂರಿನ ಇಂಡೆಕ್ಸ್ ಬಗ್ಗೆ ಇಡೀ ಕರ್ನಾಟಕ ರಾಜ್ಯದ್ದು ತೆಗೆದುಕೊಂಡರೆ ತುಲನೆ ಮಾಡಿ ನೋಡಿದರೆ ಹೆಚ್ಚು ಇದೆ, ಇಡೀ ರಾಷ್ಟ್ರದ್ದು ತುಲನೆ ಮಾಡಿ ನೋಡಿದರೆ ಕಡಿಮೆ ಇದೆ. ಈ ವಿಚಾರವಾಗಿ ನಾನು ಈ ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದೇನೆ. ಉದಾಹರಣೆಗೆ ಡಿಫಿಸಿಟ್ ಫೈನಾನ್ಸ್ ಇರುವುದರಿಂದ ಏಳನೇ ಯೋಜನಾ ಆಯೋಗದವರು ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯವರು ಸುಮಾರು ೧೪ ಸಾವಿರ ಕೋಟಿ ರೂಪಾಯಿ ಡಿಫಿಸಿಟ್ ಅನ್ನು ಇದರಲ್ಲಿ ಅಪ್ರೂವ್ ಮಾಡಿದ್ದಾರೆ, ಇದರ ಒಟ್ಟು ಸೈಜ್ ಅಂದರೆ ಗಾತ್ರ ಫೈನಾನ್ಸ್ ಮಾಡಲಿಕ್ಕೆ ಕಳೆದ ಎರಡು ವರ್ಷದಲ್ಲಿ ನೋಡಿದರೆ ಈವೊತ್ತೇ ರಿವೈಸ್ಡ್ ಎಸ್ಟಿಮೇಟ್ ಆಗಿ ಬಂದಿರತಕ್ಕದ್ದು. ಈ ಎರಡು ವರ್ಷಗಳಲ್ಲಿ ೧೩ ಸಾವಿರ ಕೋಟಿಗಿಂತಲೂ ಹೆಚ್ಚು ಡಿಫಿಸಿಟ್ ಬಜೆಟ್ ಬಂದಿದೆ. ೫ ವರ್ಷಗಳಲ್ಲಿ ಆಗಬೇಕಾಗಿದ್ದ ಡಿಫಿಸಿಟ್ ಫೈನಾನ್ಸ್ ಕೇವಲ ಎರಡು ವರ್ಷಗಳಲ್ಲಿ ಆಗಿದೆ. ಈ ವರ್ಷ ಕೇಂದ್ರದ್ದು ೫ ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚು ಕೊರತೆ ಆಗುತ್ತದೆ. ಆದರೆ ರಾಜ್ಯ ಸರ್ಕಾರ ಏನಾದರೂ ಡೆಫಿಸಿಟ್ ಫೈನಾನ್ಸ್ ಮಾಡುತ್ತಿದೆಯೋ? ಮಾನ್ಯ ಬಂಗಾರಪ್ಪನವರು ನಮ್ಮದು ಡಿಫಿಸಿಟ್ ಫೈನಾನ್ಸ್ ಎಂದು ಹೇಳಿದರು. ಆದರೆ ಅದು ಎಲ್ಲಿದೆ? ಈ ವಿಚಾರ ಮಾನ್ಯ ಮೊಯಿಲಿ ಅವರಿಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ, ಅವರು ಈ ಹಿಂದೆ ಆರ್ಥಿಕ ಮಂತ್ರಿಗಳಾಗಿದ್ದರು. ಡಿಫಿಸಿಟ್ ಫೈನಾನ್ಸ್ ಮಾಡುವುದು ಯಾವಾಗ? ಅದು ನಮ್ಮ ಕಾರಣದಿಂದ ಯಾವಾಗ ಆಗುತ್ತದೆ ಎಂದರೆ, ನಾವು ಇಲ್ಲಿ ಓವರ್ ಡ್ರಾಫ್ಟ್ ತೆಗೆದುಕೊಂಡಾಗ ಆಗುತ್ತದೆ. ಆದರೆ ಇವೊತ್ತು ಅದಕ್ಕೆ ಅವಕಾಶ ಇಲ್ಲ. ಕೇಂದ್ರ ಸರ್ಕಾರದ ಹೊಸ ನೀತಿಯಿಂದಾಗಿ ನಾವು ಒಂದು ಕಾಸನ್ನು ಸಹ ಓವರ್ ಡ್ರಾಫ್ಟ್ ಆಗಿ ತೆಗೆದುಕೊಳ್ಳುವಂತಿಲ್ಲ. ಒಂದು ವಾರಕ್ಕಿಂತ ಹೆಚ್ಚು ಕಾಲ ಒಂದು ರೂಪಾಯಿ ಓವರ್ ಡ್ರಾಫ್ಟ್ ಇದ್ದರೂ ಸಹ ರಿಜರ್ವ್ ಬ್ಯಾಂಕಿನವರು ನಮ್ಮ ಚೆಕ್‌ನ್ನು ತಿರಸ್ಕಾರ ಮಾಡುತ್ತಾರೆ. ಆದ್ದರಿಂದ ಇವೊತ್ತು ಕೇಂದ್ರ ಸರ್ಕಾರದಲ್ಲಿ ಏನು ಡಿಫಿಸಿಟ್ ಫೈನಾನ್ಸ್ ಇದೆ, ಅದಕ್ಕೆ ಯಾವ ರಾಜ್ಯ ಸರ್ಕಾರಗಳೂ ಸಹ ಕಾರಣವಲ್ಲ. ಈ ಹಿಂದೆ ನಾವು ಅಧಿಕಾರಕ್ಕೆ ಬಂದಾಗ ಇದಕ್ಕೆ ನಾವೂ ಸಹ ಕಾರಣರಾಗಿದ್ದೆವು. ಏಕೆಂದರೆ, ಆಗ ೨೦೦ ಕೋಟಿ ರೂಪಾಯಿಗಳಷ್ಟು ಓವರ್ ಡ್ರಾಫ್ಟ್ ಇತ್ತು. ಈಗ ಅದನ್ನು ಕೇಂದ್ರ ಸರ್ಕಾರದವರು ಅಲ್ಪಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿದ್ದಾರೆ. ಆ ಸಾಲವನ್ನು ಇವೊತ್ತಿಗೂ ಸಹ ಕೊಡುತ್ತಿದ್ದೇವೆ.

ಆದರೆ ಇಂದು ಆ ಪರಿಸ್ಥಿತಿ ಇಲ್ಲ. ಕೇಂದ್ರ ಸರ್ಕಾರದವರು ಇಷ್ಟೊಂದು ದೊಡ್ಡ ಮೊತ್ತದ ಡಿಫಿಸಿಟ್ ಫೈನಾನ್ಸ್ ಏತಕ್ಕೆ ಮಾಡಬೇಕು? ಅವರು ಇದಕ್ಕೆ ಡಿಫೆನ್ಸ್ ಎಕ್ಸ್‌ಪೆಂಡಿಚರ್ ಕಾರಣ ಎಂದು ಹೇಳುತ್ತಾರೆ. ಇದು ಹೋಲಿ-ಕೌವ್ ಆಗಿದೆ. ಇದರ ಖರ್ಚಿನ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಸಹ ಚರ್ಚೆ ಆಗುವುದಿಲ್ಲ. ಏಕೆಂದರೆ, ಇದು ರಾಷ್ಟ್ರದ ರಕ್ಷಣೆ ಮತ್ತು ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ವಿಚಾರವಾಗಿದೆ. ಮಾನ್ಯ ಸದಸ್ಯರಾದ ಮೊಯಿಲಿ ಅವರು ನಮ್ಮದು ಲಂಗು ಲಗಾಮು ಇಲ್ಲದ ಬಡ್ಜೆಟ್ ಎಂದು ಹೇಳಿದರು. ಅದಕ್ಕೆ ನಾನು ಆ ಮೇಲೆ ಬರುತ್ತೇನೆ. ಆದರೆ ನಾವೇನಾದರೂ ಕೇಂದ್ರ ಸರ್ಕಾರದವರ ಈಗಿನ ಅರ್ಥ ವ್ಯವಸ್ಥೆಯನ್ನು ಅಂದರೆ ಲಂಗು ಲಗಾಮು ಇಲ್ಲದ ಅರ್ಥ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇ ಆದರೆ ನಾವು ಶಾಶ್ವತವಾಗಿ ವಿದೇಶಿ ಸಾಲದ ಸುಳಿಯಲ್ಲಿ ಸಿಲುಕಿ ಕೊಳ್ಳಬೇಕಾಗುತ್ತದೆ ಇದನ್ನು ಕೇಂದ್ರ ಸರ್ಕಾರದವರು ತಿಳಿದುಕೊಳ್ಳಬೇಕು. ಈ ಮಾತನ್ನು ಹೇಳಿದರೆ ಕೇಂದ್ರದ ವಿರುದ್ಧ ನಾವು ಟೀಕೆ ಮಾಡಿದಂತೆ ಆಗುವುದಿಲ್ಲ. ನಾನು ಹೇಳಿರುವುದರಲ್ಲಿ ಏನಾದರೂ ಕುಹಕವಾದ ಮಾತುಗಳು ಇವೆಯೇ ಅಥವಾ ಡಾಸ್ಟಿಕ್ ಆಗಿ ಹೇಳಿದಂಥ ಮಾತುಗಳು ಇವೆಯೇ? ನಾನು ಇದನ್ನು ಒಳ್ಳೆಯ ಭಾವನೆಯಿಂದ ಹೇಳಿದ್ದೇನೆ. ಈ ಮೊದಲು ಒಂದೇ ಕಾಂಗ್ರೆಸ್ ಪಕ್ಷವಿದ್ದಾಗ ನಾನು ೭ ಬಡ್ಜೆಟ್‌ಗಳನ್ನು ಮಂಡನೆ ಮಾಡಿದ್ದೇನೆ. ಈಗ ೫ ಬಡ್ಜೆಟ್‌ಗಳನ್ನು ಮಂಡನೆ ಮಾಡಿದ್ದೇನೆ. ಒಟ್ಟು ೧೨ ಬಡ್ಜೆಟ್‌ನ್ನು ನಾನು ಮಂಡನೆ ಮಾಡಿದ್ದೇನೆ. ಈ ಸಂದರ್ಭದಲ್ಲಿ ನಾನು ಒಂದು ಸಣ್ಣ ವಿಚಾರವನ್ನು ಹೇಳಬೇಕೆಂದಿದ್ದೇನೆ. ಏನೆಂದರೆ ಕೆಲವು ದಿವಸಗಳ ಹಿಂದೆ ಮಾನ್ಯ ವೀರಪ್ಪ ಮೊಯ್ಲಿ ಅವರ ಗುರುಗಳಾಗಿದ್ದ ಶ್ರೀ ಪ್ರಣಬ್ ಮುಖರ್ಜಿ ಅವರು ನನಗೆ ಭೇಟಿ ಆಗಿದ್ದರು. ಅವರು ಅರ್ಥಮಂತ್ರಿ ಆಗಿರುವವರೆಗೆ ಮಾನ್ಯ ಮೊಯ್ಲಿ ಅವರು ಅವರಿಗೆ ಬಹಳ ಅಂದರೆ ಬಹು ಅತ್ಯಂತ ಸಮೀಪವಾಗಿದ್ದರು. ಅವರಿಗೆ ಇವರನ್ನು ಕಂಡರೆ ಬಹಳ ಇಷ್ಟ. ಅವರು ನನಗೆ ಏನು ಹೇಳಿದರೆಂದರೆ, ಜನತಾ ಪಕ್ಷದ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಮೇಲೆ ೩ ವರ್ಷಗಳ ಬಡ್ಜೆಟ್‌ನ್ನು ನೋಡಿದ್ದೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಈಗ ಅವರು ನಿಮ್ಮನ್ನು ಹೊಗಳುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಅವರ ಮನಸ್ಸಿನಲ್ಲಿರುವುದನ್ನು ವ್ಯಕ್ತ ಮಾಡಿದರು ಈ ಹಿಂದಿನ ಮೂರು ವರ್ಷಗಳ ಬಡ್ಜೆಟ್‌ಗಳನ್ನು ನಾನು ತರಿಸಿ ನೋಡಿದೆ. I have found, you have been taking a consistent stand; I mustcompliment you for that ಎಂದು ಹೇಳುವಂಥ ಮಾತನ್ನು ಅವರು ನನಗೆ ಹೇಳಿದರು. ನೀವು ಅವರು ಕಾಂಗ್ರೆಸ್ ಪಕ್ಷದಲ್ಲಿದ್ದಾಗ ನಮ್ಮ ಬಗ್ಗೆ ದೂರನ್ನು ಕೊಟ್ಟಿದ್ದಿರಿ. ಈ ಕಾರಣದಿಂದ ಮೂರು ವರ್ಷಗಳ ಬಡ್ಜೆಟ್‌ನ್ನು ತರಿಸಿ ನೋಡಿದೆ ಎಂದು ಅವರು ನನಗೆ ಹೇಳಿದರು. ಆದ್ದರಿಂದ ಈ ಬಗ್ಗೆ ಒಂದಲ್ಲ ಒಂದು ಕಾಲದಲ್ಲಿ ನಿಮ್ಮ ಕಣ್ಣು ತೆರೆಯುತ್ತದೆಂದು ನಾನು ಆಸೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹೊಸ ನೀರು, ಹೊಸ ಸ್ನೇಹ, ಆದ್ದರಿಂದ ನೀವು ಸ್ವಲ್ಪ ಎಚ್ಚರದಿಂದ ಇರಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಕೇಂದ್ರದ ವಿರುದ್ಧ ಎಲ್ಲಿಯೂ ನಿಂದನೆ ಮಾಡುವುದಕ್ಕೆ ಹೋಗಿಲ್ಲ. ಎಲ್ಲಿಯೂ ಕೆಟ್ಟ ಶಬ್ದಗಳನ್ನು ಉಪಯೋಗ ಮಾಡಿಲ್ಲ ಎಲ್ಲಿಯೂ ಅವರ ವಿರುದ್ಧ ಪ್ರಚಾರ ಮಾಡಿಲ್ಲ. ನಾನು ರಚನಾತ್ಮಕವಾದಂಥ ಸೂಚನೆಗಳನ್ನು ಕೊಟ್ಟಿದ್ದೇನೆ. ಇದನ್ನು ಸ್ವೀಕಾರ ಮಾಡುವುದು ಅಥವಾ ಬಿಡುವುದು ಅವರಿಗೆ ಬಿಟ್ಟಿದ್ದು.

ನಾನು ಈಗ ಒಂದು ಜವಾಬ್ದಾರಿ ಸ್ಥಾನದಲ್ಲಿರುವುದರಿಂದ ಇದನ್ನು ಹೇಳುವುದು ನನ್ನ ಕರ್ತವ್ಯವೆಂದು ತಿಳಿದು ಈ ಮಾತನ್ನು ಹೇಳುವಂಥ ಪ್ರಸಂಗ ಬಂತು. ಈಗ ಆ ವಿಚಾರದಲ್ಲಿ ಒಂದು ಪ್ರಖ್ಯಾತ ಎಕನಾಮಿಕ್ ಟೈಮ್ಸ್‌ನಲ್ಲಿದೆ. 'ಡಿಫಿಸಿಟ್ ಅಂಡ್ ಡೆವಲಪ್‌ಮೆಂಟ್'' ಎಂದು ಹೇಳತಕ್ಕಂಥ ಒಂದು ಎಡಿಟೋರಿಯಲ್ ಬಂದಿದೆ. ಇದನ್ನು ತಾವು ತಿಳಿದುಕೊಳ್ಳಬೇಕು ಎಂದು ಇಲ್ಲಿ ಓದಲಿಕ್ಕೆ ಬಯಸುತ್ತೇನೆ.

> ''For 1986-87, against interest payment of Rs. 8,700 crore provided for in the budget the payment according to the revised figure is Rs. 9,550 crore.''

ಇಂಟರೆಸ್ಟ್ ಪೇಮೆಂಟ್. ನಾನು ಸಾಲದ ಪರವಾಗಿ ಎಂದು ಹೇಳಿದೆನಲ್ಲ, ಅದನ್ನು ತಿಳಿದುಕೊಳ್ಳಿ. ೮೭೦೦ ಕೋಟಿ ಎಂದು ಏನು ಬಡ್ಜೆಟ್‌ನಲ್ಲಿ ತೋರಿಸಿದರೋ ಅದಕ್ಕೆ ಪ್ರತಿಯಾಗಿ ೯,೫೫೦ ಕೋಟಿ ರೂಪಾಯಿಗಳನ್ನು ಕೊಡಬೇಕಾದ ಪ್ರಸಂಗ ಬಂತು ಇಂಟರೆಸ್ಟ್ ಪೇಮೆಂಟ್ For 1987-88, the interest provision is Rs. 10.650 crores. 1987--88ಕ್ಕೆ ಕೊಟ್ಟಿರುವ ಇಂಟರೆಸ್ಟ್ ೧೦,೬೫೦ ಕೋಟಿ. The Government's net market borrowing is to increase by just over Rs. 1.000 crores to Rs. 6,300 crores in 1987-88. The additional market borrowing will barely cover the additiona interest outgo, a sure indicator of a movement towards a debt trap. All this point to an enlargement of the central deficit (as also the overall deficit of the central and states) in the coming year beyond the budgeted figures'' ನನ್ನ ಬಡ್ಜೆಟ್ ಭಾಷಣದಲ್ಲಿ ೨-೩ ವಿಚಾರಗಳನ್ನು ನಾನು ಪ್ರಸ್ತಾಪಿಸಿದ್ದೇನೆ. ಮಾನ್ಯ ಸದಸ್ಯರೆಲ್ಲರೂ ಗಂಭೀರವಾಗಿ ವಿಚಾರ ಮಾಡಬೇಕು. ಇದು ನಮ್ಮ ರಾಜ್ಯದ ಹಿತದೃಷ್ಟಿ ಇಲ್ಲದೆ ಕೇಂದ್ರ ಮತ್ತು ರಾಜ್ಯದ ಸೌಹಾರ್ದಯುತವಾದ ಸಂಬಂಧವನ್ನು ಸ್ಥಾಪಿಸುವ ಉದ್ದೇಶದ ಬಗ್ಗೆ ಇದೆಯೋ ಅಥವಾ ಬೇರೆ ಯಾವ ವಿಚಾರದಲ್ಲಿದೆ ಎನ್ನುವುದನ್ನು ತಾವು ದಯವಿಟ್ಟು ಗಮನಿಸಬೇಕು. ನಾನು ಅದರಲ್ಲಿ ಏನು ಹೇಳಿದ್ದೇನೆಂದರೆ, ಕೇಂದ್ರದ ಸಾರ್ವಜನಿಕ ವಲಯದ ಸಂಸ್ಥೆಗಳಿವೆ. ಅಂದರೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಅದು ಐ.ಟಿ.ಐ ಹೌದು ಮತ್ತು ಇನ್ನು ೩ ಬೇರೆ ಬೇರೆ ನಿಗಮಗಳು ಏನಿವೆ ಅವುಗಳಿಗೆ ಬಾಂಡ್ಸ್ ಮುಖಾಂತರ ಸಾಲ ಎತ್ತತಕ್ಕಂಥ ಒಂದು ಹೊಸ ನೀತಿಯನ್ನು ಒಪ್ಪಿಕೊಂಡು ಅವರಿಗೆ ಆ ಸೌಲತ್ತನ್ನು ಕಳೆದ ವರ್ಷ ಕೇಂದ್ರ ಸರ್ಕಾರದವರು ಕೊಟ್ಟರು. ಇದು ಅವತ್ತಿನವರೆಗೆ ಇರಲಿಲ್ಲ. ನಾವು ಯಾವುದೇ ರೀತಿಯ ಮಾರ್ಕೆಟ್ ಬಾರೋಯಿಂಗ್ ಸ್ವಲ್ಪ ಹೆಚ್ಚು ಮಾಡಿ ಎಂದು ಹೇಳಿದರೆ ಪ್ಲಾನಿಂಗ್ ಕಮಿಷನ್‌ನವರು ಮತ್ತು ಕೇಂದ್ರ ಸರ್ಕಾರದ ಅರ್ಥ ಖಾತೆಯವರು ಅದಕ್ಕೆ ಒಪ್ಪುವುದಿಲ್ಲ. ಯು.ಪಿ.ಯಲ್ಲಿ ಎಷ್ಟು ಬ್ಯಾಂಕುಗಳಲ್ಲಿ ಠೇವಣಿ ಇದೆಯೋ, ಅದರಲ್ಲಿ ಶೇಕಡ ೬೦ಕ್ಕಿಂತ ಕಡಿಮೆ ಬಟವಾಡೆ ಆಗುತ್ತದೆ ಆದರೆ ಕರ್ನಾಟಕದಲ್ಲಿ ಸೆಂಟ್‌ಪರ್ಸೆಂಟ್ ಆಗುತ್ತದೆ ಎಂದು ಮಾನ್ಯ ಮೊಯ್ಲಿಯವರು ಹೇಳಿದರು. ಸೆಂಟ್ ಪರ್ಸೆಂಟ್ ಅಲ್ಲ, ೮೯-೯೦ ಪರ್ಸೆಂಟ್ ಇರಬಹುದು ಆದರೆ ಈ ಹಣ ಇದೆಯಲ್ಲಾ ಇದು ನಮ್ಮ ಜನರಿಂದ ಶೇಖರಣೆಯಾಗುತ್ತದೆ ಎನ್ನುವುದನ್ನು ತಾವು ಮರೆಯಕೂಡದು. ಆಮೇಲೆ ಲೋನ್ ಮೇಳದ ಬಗ್ಗೆ ನಮ್ಮ ಪಾರ್ಟಿಯಿಂದ ಒಂದು ಪ್ರಕಟಣೆ ಏನು ಹೊರಗೆ ಬಂದಿದೆ, ಅದರ ಮೇಲೆ ಬಹಳ ಟೀಕೆ ಮಾಡಿದರು. ಅದರಲ್ಲಿ ಟೀಕೆ ಮಾಡುವುದು ಏನಿದೆ? ಅದು ವಸ್ತುಸ್ಥಿತಿ ಅಲ್ಲವೇ, ಅದನ್ನು ನಾವು ತಿಳಿದುಕೊಳ್ಳಬೇಡವೇ ? ಇಲ್ಲಿ ಸುದ್ದಿ ಬೇರೆ, ಲೇಖನ ಬೇರೆ ಲೇಖನ ಇರತಕ್ಕ ಅಭಿಪ್ರಾಯವನ್ನು ಹೇಳುತ್ತದೆ. ಇದು ನಿಮಗೆ ಸರಿಯಿಲ್ಲದೇ ಇದ್ದರೆ ಆ ಮಾತು ಬೇರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಲೋನ್ ಮೇಳದ ವಿಚಾರದಲ್ಲಿ ಮಾತ್ರ ಪ್ರಕಟವಾಗಿಲ್ಲ ಬೇರೆ ಬೇರೆ ವಿಚಾರಗಳ ಬಗ್ಗೆಯೂ ಪ್ರಕಟವಾಗಿದೆ.

SRI RAMAKRISHNA HEGDE.—Mr. S. Mohan, Madras High Court Judge ಬಗ್ಗೆ ಬಂದಿದೆ, ''To-day he called upon the bank employees to ensure that the benefit of the loan mela reach the commonman for whom it was intended. The manner in which the loan melas are now done is not at all the commendable. Is it a publicity stunt ? Does it properly reach the needy poor, he asked. The officers and the staff of the bank should handle with utmost care and concern all monetary transactions. The money that you handle is not yours You are just the custodian of public funds, he said while inaugurating the 10th Conference of the Federations of Bank of India Officers Association''

ಶ್ರೀ ಎಸ್. ಬಂಗಾರಪ್ಪ.—ಅದು ಕೂಡ ಒಪಿನಿಯನ್ ತಾನೇ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ರಾಜಕೀಯ ಮುಖಂಡರು ಅಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ,—ಅವರು ಅರ್ಥಶಾಸ್ತ್ರಜ್ಞರಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇದರ ಅರ್ಥ ಏನೆಂದರೆ, ರಾಜ್ಯ ಸರ್ಕಾರಗಳಿಗೆ ಕೇಂದ್ರದಿಂದ ಸಿಗತಕ್ಕಂಥ ಆರ್ಥಿಕ ನೆರವು, ಅನುಕೂಲತೆ ವರ್ಷೇ ವರ್ಷೇ ಸಣ್ಣ ಸಣ್ಣದಾಗುತ್ತಾ ಹೋಗುತ್ತಿದೆ. ಕ್ಷೀಣಿಸುತ್ತಾ ಹೋಗುತ್ತಿದೆ. ಅವನ್ನೇ ಕೇಳಬೇಕೆಂಬ ವಿಚಾರವನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೆ ಕಾರಣರು ಯಾರು ?

ಶ್ರೀ ರಾಮಕೃಷ್ಣ ಹೆಗಡೆ.—ಇದರ ಬಗ್ಗೆ ಮತ್ತೊಂದು ಉದಾಹರಣೆ ಕೊಡುತ್ತೇನೆ. ನಮ್ಮಲ್ಲಿ ನೀರಾವರಿ ಯೋಜನೆಗಳಿಂದ ಉತ್ಪಾದನೆ ಹೆಚ್ಚಾಗುತ್ತದೆ. ಉತ್ಪಾದನೆಯಾಗುವುದರಲ್ಲಿ ಸ್ವಲ್ಪ ಭಾಗವನ್ನು ನಮ್ಮ ರೈತರು ಉಳಿಸಿ, ಆ ಹಣವನ್ನು ಬ್ಯಾಂಕಿನಲ್ಲಿ ಇಟ್ಟಿರುತ್ತಾರೆ. ಅದು ಅವರದ್ದೇ ಹಣ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ರೈತರು ಬ್ಯಾಂಕಿನಲ್ಲಿ ಹಣ ಎಲ್ಲಿ ಇಟ್ಟಿರುತ್ತಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಗುಂಡ್ಲುಪೇಟೆಯಲ್ಲಿ ಇಲ್ಲ. ನೀರಾವರಿ ಎಲ್ಲಿ ಇರುತ್ತದೆ, ಅಲ್ಲಿ ರೈತರು ಬ್ಯಾಂಕುಗಳಲ್ಲಿ ಹಣ ಇಟ್ಟಿರುತ್ತಾರೆ. ಆ ಹಣದ ಮೇಲೆ ಸ್ವಲ್ಪವಂಟ್ಟಿಗೆ ನಮ್ಮ ಕ್ಲೈಂ ಹಾಕಿಕೊಂಡರೆ ತಪ್ಪೇನು ? ಕರ್ನಾಟಕ ಪವರ್ ಕಾರ್ಪೊರೇಷನ್, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ, ಇಂಡಸ್ಟ್ರೀಸ್ ಅಂಡರ್‌ಟೇಕಿಂಗ್ಸ್‌ಗೆ ಬೇಕಾದ ಹಣದ ಅನುಕೂಲತೆಗಾಗಿ ಬಾಂಡಿನ ಅನುಕೂಲತೆ ಮಾಡಿಕೊಡಿ ಎಂದು ಬರೆದರೆ, ಅದಕ್ಕೆ ಒಪ್ಪಲಿಲ್ಲ. ಒಟ್ಟು ಸಂಪನ್ಮೂಲಗಳನ್ನು ಲೆಕ್ಕಾಚಾರ ಹಾಕಿ 7ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಖರ್ಚು ಮಾಡಬೇಕಾಗುತ್ತದೆಂಬುದನ್ನು ನಿರ್ಧರಿಸಬೇಕಾಗುವುದರಿಂದ ಇದರಲ್ಲಿ ರಾಜ್ಯಸರ್ಕಾರಕ್ಕೆ ಬಾಂಡ್‌ನ ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಈ ಬಗ್ಗೆ ಹಿಂದಿನ ಕೇಂದ್ರ ವಿತ್ತ ಮಂತ್ರಿಗಳಾಗಿದ್ದ ವಿ.ಪಿ. ಸಿಂಗ್‌ರವರಿಗೆ ಒಂದು ಪತ್ರ ಬರೆದಿದ್ದೆ. ಕೇಂದ್ರ ಸರ್ಕಾರದ ನೌಕರರಿಗೆ 4ನೇ ಪೇ ಕಮೀಷನ್ ಶಿಫಾರಸ್ಸು ಬಂದಮೇಲೆ ಅವರಿಗೆ ಒಂದು ಪತ್ರ ಬರೆದೆ. ಈ ವಿಚಾರದಲ್ಲಿ ಕೊನೆ ನಿರ್ಣಯವಾಗುವುದಕ್ಕೆ ಮೊದಲು ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಸಭೆ ಕರೆಯಿರಿ, ಇಲ್ಲದಿದ್ದರೆ ಮುಖ್ಯಮಂತ್ರಿಗಳ ಸಭೆ ಕರೆಯಿರಿ ನಮ್ಮ ಸಲಹೆಗಳನ್ನು ತೆಗೆದುಕೊಳ್ಳಿ ಇಲ್ಲದಿದ್ದರೆ ಅದರ ಪರಿಣಾಮ, ದುಷ್ಪರಿಣಾಮ ಇಡೀ ದೇಶದ ಮೇಲಾಗುತ್ತದೆ. ಅದೊಂದು ರೀತಿ ಚೈನ್ ರಿಯಾಕ್ಷನ್ ಇದ್ದಹಾಗೆ. ಕೇಂದ್ರ ಸರ್ಕಾರ ತನ್ನ ನೌಕರರಿಗೆ ಸಂಬಳ ಸಾರಿಗೆ ಹೆಚ್ಚು ಕೊಡತಕ್ಕ ನಿರ್ಣಯ ಮಾಡಿದರೆ, ಎಲ್ಲಾ ರಾಜ್ಯಗಳಲ್ಲೂ ಕೂಡ ಅಲ್ಲಿಯ ಸರ್ಕಾರೀ ಕರ್ಮಚಾರಿಗಳು ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಾರೆ.

ಆಗ ನಾವು ಅದನ್ನು ತಿರಸ್ಕಾರ ಮಾಡತಕ್ಕದು ಕಷ್ಟವಾಗುತ್ತದೆ. ಇದರ ಬಗ್ಗೆ ಅವರಿಗೆ ಪತ್ರ ಬರೆದರೆ ಅವರು ನನಗೆ ಏನು ಉತ್ತರ ಬರೆದರು ಗೊತ್ತೇನು ? ಇದು ನಿಜವಾಗಿಯೂ ಖೇದಕರವಾದುದು. ನಮ್ಮ ಮನಸ್ಸಿಗೆ ಬಂದಂತೆ ನಾವು ಮಾಡುತ್ತೇವೆ, ನಿಮಗೆ ಸಾಧ್ಯ ಇದ್ದರೆ ಮಾಡಿ, ಸಾಧ್ಯ ಇಲ್ಲದೇ ಇದ್ದರೆ ಬಿಡಿ, ಅದಕ್ಕಾಗಿ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯನ್ನು ಕರೆಯುವುದಿಲ್ಲ, ಮುಖ್ಯಮಂತ್ರಿಗಳ ಸಭೆಯನ್ನು ಕರೆಯುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ.

SRI M. VEERAPPA MOILY.—Otherwise, where is the sanctity for Commissions ?

ಶ್ರೀ ರಾಮಕೃಷ್ಣಹೆಗಡೆ.—ಕಮಿಟಿ ಸ್ಯಾಂಕ್ಟಿಟಿ ಬಗ್ಗೆ ಪ್ರಶ್ನೆ ಮಾಡಲಿಲ್ಲ. ಆದರೆ ಕೊನೇ ತೀರ್ಮಾನ ಆಗುವುದಕ್ಕಿಂತಲೂ ಮೊದಲು, ಇದು ನಮ್ಮ ರಾಜ್ಯಸರ್ಕಾರದ ಕರ್ಮಚಾರಿಗಳು, ಕೇಂದ್ರಸರ್ಕಾರದ ಕರ್ಮಚಾರಿಗಳ ಮಟ್ಟದಲ್ಲಿಯೇ ನಮಗೆ ಸಂಬಳ ಸಾರಿಗೆ ಬೇಕೆಂದು ಬಯಸಿದರೆ ಅದು ಅವರ ಅಪರಾಧ ಏನು ? ಏತಕ್ಕಾಗಿ ಈ ಒಂದು ತಾರತಮ್ಯ ಪಕ್ಷಪಾತ ಮಾಡಬೇಕು ? ಕೇಂದ್ರ ಸರ್ಕಾರದ ಹತ್ತಿರ ಎಲ್ಲಾ ಸಂಪನ್ಮೂಲ ಇದ್ದಾಗ ರಾಜ್ಯ ಸರ್ಕಾರ ಕೇಂದ್ರವನ್ನು ಅವಲಂಬಿಸಬೇಕಾಗುತ್ತದೆ. ನಾನು ಸ್ಯಾಂಕ್ಟಿಟಿ ಬಗ್ಗೆ ಪ್ರಶ್ನೆ ಮಾಡಲಿಲ್ಲ.

SRI M. VEERAPPA MOILY.—You could have volunteered yourselves to give evidence before the Pay Commission. ನಮ್ಮ ಫೈನಾನ್ಸ್ ಆಯಿತು,

ಅದನ್ನು ಇಲ್ಲಿ ಡಿಸ್‌ಕಸ್ ಮಾಡಿ ಇಂಪ್ಲಿಮೆಂಟ್ ಮಾಡಬೇಕಿತ್ತು. ಅದನ್ನು ನಿರ್ಲಕ್ಷ್ಯ ಮಾಡತಕ್ಕ ಪ್ರಶ್ನೆಯನ್ನು ಏತಕ್ಕೆ ಇಲ್ಲಿ ತೋರಿಸಿದಿರಿ. ಹಾಗಾದರೆ, Commissions have their own sanctity.

ಶ್ರೀ ರಾಮಕೃಷ್ಣ ಹೆಗಡೆ.—ರಿವಿಜನ್ ಆಫ್ ಪೇ ಸ್ಕೇಲ್ ಬಗ್ಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒಟ್ಟಿಗೆ ಕುಳಿತುಕೊಂಡಾಗ ಚರ್ಚೆ ಮಾಡಬಹುದಿತ್ತು.

SRI M. VEERAPPA MOILY.—You could have been more democratic here.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ಡೆಮಾಕ್ರಸಿ ಪ್ರಶ್ನೆ ಇಲ್ಲ. It is a question of principle of financial management. ಇದರಲ್ಲಿ ರಾಜಕೀಯ ಇಲ್ಲ, ಡೆಮಾಕ್ರಸಿ ಇಲ್ಲ. ನಾನು ಒಂದು ಉದಾಹರಣೆ ಕೊಟ್ಟೆ. ಈ ಒಂದು ವಿಚಾರವನ್ನು ನಾವು ಬಡ್ಜೆಟ್ಟಿನಲ್ಲಿ ಹೇಳಿದರೆ ಅದು ನಿಮ್ಮ ಅಭಿಪ್ರಾಯದಲ್ಲಿ ಟೀಕೆ ಆಗುತ್ತದೆ, ಆದರೆ ಅದು ಟೀಕೆ ಆಗುವುದಿಲ್ಲ. ಇನ್ನು ನೀರಾವರಿ ವಿಚಾರದಲ್ಲಿ ಹೇಳಬೇಕೆಂದರೆ, ಕಳೆದ ಎಂಟು ಹತ್ತು ವರ್ಷಗಳಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದೇವೆ ಎಂದು ಇಲ್ಲಿ ಹೇಳಿದ್ದೇನೆ. ಮೊನ್ನೆ ಮಾನ್ಯ ಮೊಯಿಲಿಯವರು ತಮ್ಮ ಭಾಷಣದಲ್ಲಿ ಹರಿಜನ ಗಿರಿಜನರಿಗಾಗಿ ನೀವು ಅನ್ಯಾಯ ಮಾಡಿದ್ದೀರಿ, ಹಿಂದುಳಿದ ವರ್ಗದವರಿಗೆ ಸಾಕಷ್ಟು ಹಣವನ್ನು ಕೊಟ್ಟಿಲ್ಲ ಎಂದು ಹೇಳತಕ್ಕ ಮಾತನ್ನು ಹೇಳಿದರು. ಈಗ ಅದನ್ನು ಓದಿ ಹೇಳುವುದಕ್ಕೆ ಮೊದಲು ವಿದ್ಯುಚ್ಛಕ್ತಿ ವಿಚಾರದಲ್ಲಿ ಹಿಂದೆ ಮತ್ತು ಇಂದು ಎಷ್ಟೆಷ್ಟು ಖರ್ಚು ಆಗಿದೆ ಎಂದು ಹೇಳಬೇಕಾಗಿದೆ. ೧೯೮೦-೮೧ನೇ ಇಸವಿಯಲ್ಲಿ ೧೦೨ ಕೋಟಿ ರೂಪಾಯಿ ನಾವು ಖರ್ಚು ಮಾಡಿದ್ದರೆ ಕಳೆದ ವರ್ಷ ೨೧೩ ಕೋಟಿ ರೂಪಾಯಿಗಳನ್ನು ನಾವು ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ಬಡ್ಜೆಟ್‌ನಲ್ಲಿ ಒದಗಿಸಿದ್ದೇವೆ. ಅಂದರೆ ಈ ಬಾಬಿನಲ್ಲೂ ಕೂಡ ಎರಡಕ್ಕಿಂತಲೂ ಹೆಚ್ಚು ಪಟ್ಟು ಹಣವನ್ನು ನಾವು ಒದಗಿಸಿದ್ದೇವೆ. ಸೋಷಿಯಲ್ ಅಂಡ್ ಕಮ್ಯುನಿಟಿ ಸರ್ವೀಸಸ್‌ಗೆ ನಾನು ಮೊದಲೇ ಹೇಳಿದ ಹಾಗೆ ಮಾನ್ಯ ಮೊಯಿಲಿಯವರು ಅರ್ಥಮಂತ್ರಿಗಳಾಗಿದ್ದಾಗ ೭೨ ಕೋಟಿ ರೂಪಾಯಿಗಳನ್ನು ಒದಗಿಸಿದ್ದರು, ಆದರೆ ೧೯೮೪-೮೫ರಲ್ಲಿ ನಾವು ೩೧೫ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ.

ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ರಾಜ್ಯದಲ್ಲಿರತಕ್ಕ ಹಿಂದುಳಿದ ವರ್ಗಗಳ ಜನರಿಗೆ ನಾವು ಹೆಚ್ಚು ಹಣವನ್ನೊದಗಿಸಿದ್ದೇವೊ ಅಥವಾ ಇಲ್ಲವೊ, ಎಂಬುದನ್ನು ಇವತ್ತು ಅವರೇ ಯೋಚನೆ ಮಾಡಿ ಅನಂತರ ನನಗೆ ಹೇಳಲಿ. ಮಾನ್ಯ ಸದಸ್ಯರಾದ ವೀರಪ್ಪ ಮೋಯ್ಲಿಯವರು ಮತ್ತೊಂದು ಟೀಕೆಯನ್ನು ಮಾಡಿದ್ದಾರೆ. ಅದೇನೆಂದರೆ, ನಾನು ಅರ್ಥಮಂತ್ರಿಯಾಗಿದ್ದಾಗ ಪ್ರತಿವರ್ಷವೂ ರೆವಿನ್ಯೂ ಸರ್‌ಪ್ಲಸ್ ಇರುತ್ತಿತ್ತು, ನೀವು ಅರ್ಥಮಂತ್ರಿ ಆದಮೇಲೆ ಪ್ರತಿವರ್ಷವೂ ರೆವಿನ್ಯೂ ಡಿಫಿಸಿಟ್ ಆಗುತ್ತಿದೆ ಎಂದು, ಆದರೆ ಈ ರೆವಿನ್ಯೂ ಡೆಫಿಸಿಟ್ ಪ್ರತಿವರ್ಷವೂ ಅಲ್ಲ. ತಾವು ಇದನ್ನು ನೋಡಬೇಕು. ಒಂದೆರಡುಸಾರಿ ರೆವಿನ್ಯೂ ಡೆಫಿಸಿಟ್ ಆದುದೂ ಹೌದು. ಅದಕ್ಕೆ ಮುಖ್ಯ ಕಾರಣ ಎಂದರೆ ಕಳೆದ ೩ ವರ್ಷಗಳಿಂದ ಸತತವಾಗಿ ಉಂಟಾದಂಥ ಬರಗಾಲ ಪರಿಸ್ಥಿತಿ......

ಶ್ರೀ ಎಸ್. ಬಂಗಾರಪ್ಪ.—ಅದು ನಿಮಗೆ ಒಂದು ವರ ಆಯಿತಲ್ಲಾ ಹೆಗಡೆಯವರೇ......

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಅಭಿಪ್ರಾಯದಲ್ಲಿ ಬರ ಬರಲಿಲ್ಲ ಎಂದು ಹೇಳುವುದಾದರೆ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಬರ ಎಂಬುದೇ ನಿಮಗೆ ಒಂದು ವರವಾಯಿತಲ್ಲಾ ಅಂತ ನಾವು ಹೇಳುತ್ತಿರುವುದು......

ಶ್ರೀ ರಾಮಕೃಷ್ಣ ಹೆಗಡೆ.—ಸೇಲ್ಸ್ ಟ್ಯಾಕ್ಸ್ ಮತ್ತು ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ರೇಟ್ ಆಫ್ ಗ್ರೋತ್‌ವನ್ನ ಕಾಲದಲ್ಲಿ ಹೆಚ್ಚಿಗೆ ಇತ್ತು, ನಿಮ್ಮ ಕಾಲದಲ್ಲಿ ಕಡಿಮೆ ಆಗಿದೆ ಎಂದು ಮಾನ್ಯ ಮೊಯ್ಲಿಯವರು ಹೇಳಿದ್ದಾರೆ. ಇದು ಒಂದುರೀತಿಯ ಟ್ವಿಸ್ಟ್ ಮಾಡಿ ಹೇಳತಕ್ಕ ವಿಚಾರ. ನೀವು ಪರ್ಸೆಂಟೇಜ್‌ನ್ನು ಲೆಕ್ಕ ಹಾಕಿ ನೋಡಿ, ಆಗ ನಿಮಗೇ ಗೊತ್ತಾಗುತ್ತದೆ. ೭೯-೮೦ನೇ ಸಾಲಿನಲ್ಲಿ ೧೯೯ ಕೋಟಿ ಸೇಲ್ಸ್ ಟ್ಯಾಕ್ಸ್ ಮತ್ತು ಎಂಟ್ರಿ ಟ್ಯಾಕ್ಸ್ ಇದ್ದರೆ ಮುಂದಿನ ವರ್ಷ ೮೭೫ ಕೋಟಿಯಷ್ಟು ಬಂದಿದೆಯೆಂದು ತಾವೇ ಅಂದಾಜು ಮಾಡಿ ಹೇಳಿದ್ದೀರಿ. ಇದು ೩ ಪಟ್ಟು ಹೆಚ್ಚಾಗಿದೆ. ವರ್ಷದಿಂದ

ವರ್ಷಕ್ಕೆ ಗ್ರೋತ್ ಆಫ್ ರೇಟ್ ಹೆಚ್ಚಾಗಿದೆಯೋ ... ಕಡಿಮೆ ಆಗಿದೆಯೋ ಎಂಬುದನ್ನು ಇಲ್ಲಿ ನೀವೇ ನೋಡಿಕೊಳ್ಳಬಹುದು. ಇದನ್ನು ನಾನು ಹೇಳಬೇಕಾದಿವೆ. ಇದನ್ನು ನೀವು ಟ್ವಿಸ್ಟ್ ಮಾಡಿ ಹೇಳುವುದಾದರೆ ನಾನೂ ಕೂಡ ಟ್ವಿಸ್ಟ್ ಮಾಡಿಯೇ ಹೇಳಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ನಿಮ್ಮ ಸೇಲ್ಸ್ ಟ್ಯಾಕ್ಸ್ ಆಫೀಸರ್‌ಗಳಿಗೆ ಹೇಳಿದರೆ ಅವರು ಏನು ಕೆಲಸ ಮಾಡುತ್ತಾರೆ ಗೊತ್ತೇ ?

ಶ್ರೀ ಎಸ್. ಬಂಗಾರಪ್ಪ.—ಆದರೆ ನೀವು ಮಾತ್ರ ನಿಮ್ಮ ಟ್ವಿಸ್ಟಿಂಗ್‌ನ್ನು ಬೇರೆ ಯಾರಿಗೂ ಬಿಟ್ಟು ಕೊಟ್ಟಿಲ್ಲವಲ್ಲಾ, ಅದು ಮೆಚ್ಚತಕ್ಕದ್ದು.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ, ಟ್ಯಾಕ್ಸ್‌ನ ವಿಚಾರದಲ್ಲಿ ಅನೇಕ ಟೀಕೆಗಳು ಬಂದವು. ಅದರಲ್ಲಿ ಬಹಳ ಮುಖ್ಯವಾಗಿ ಸೈಕಲ್‌ನಮೇಲೆ ಟ್ಯಾಕ್ಸ್ ಹಾಕತಕ್ಕ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಈರೀತಿ ಸೈಕಲ್‌ಗಳಮೇಲೆ ಟ್ಯಾಕ್ಸ್ ಹಾಕುವುದು ಸರಿಯಲ್ಲ ಎಂದು ಹೇಳತಕ್ಕ ಮಾತನ್ನು ಹೇಳಿದರು. ಕಾಫಿ ಟೀ, ವಿಚಾರದಲ್ಲಿ ನಾನು ನನ್ನ ಬಜೆಟ್ ಭಾಷಣದಲ್ಲೇ ಹೇಳಿದ್ದೇನೆ. ಟ್ಯಾಕ್ಸ್‌ನ್ನು ಹಾಕುವ ಸಂದರ್ಭದಲ್ಲಿ ನಾನು ೪ ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹಾಕಿದ್ದೇನೆಂದು ಹೇಳಿದ್ದೇನೆ.

ಮತ್ತೆ ಇದನ್ನು ಹಾಕುವಾಗ ಸುತ್ತಮುತ್ತಲಿನ ರಾಜ್ಯಗಳಲ್ಲಿ ಯಾವ ರೇಟ್ ಇದೆ ಎಂದು ಹೇಳುವುದನ್ನೂ ಕೂಡ ಗಮನದಲ್ಲಿಟ್ಟುಕೊಂಡು ಮಾಡಿದ್ದೇವೆ. ಯಾವುದೇ ರಾಜ್ಯದಲ್ಲಿ ಸೈಕಲ್ ಮೇಲೆ ಸೇಲ್ಸ್ ಟ್ಯಾಕ್ಸ್ ಎಕ್ಸೆಮ್ಷನ್ ಇರುವುದಿಲ್ಲ. ಆಂಧ್ರದಲ್ಲೂ ಕೂಡ ಇಲ್ಲ. ತೆಲುಗುದೇಶಂ ಪಾರ್ಟಿ ಸಿಂಬಲ್ ಸೈಕಲ್ ಆಗಿರುತ್ತದೆ. ಆದರೆ ಅಲ್ಲೂ ಕೂಡ ಸೇಲ್ಸ್‌ಟ್ಯಾಕ್ಸ್ ಎಕ್ಸೆಮ್ಷನ್ ಇಲ್ಲ. ನಾವು ಹಿಂದೆ ತೆಗೆದುಹಾಕಿದ್ದು ನಿಜ. ಇಂದು ನಮಗೆ ಪ್ರತಿಯೊಂದು ಬಾಬಿನಲ್ಲಿ ಕಡಿಮೆ ಬರಲಿ, ಹೆಚ್ಚು ಬರಲಿ ಉತ್ಪಾದನೆಯಾಗಬೇಕು ಆದಾಯವು ಹೆಚ್ಚಾಗಬೇಕು ಎನ್ನುವ ನಿರ್ಧಾರವನ್ನು ಮಾಡಿ ಈ ತೀರ್ಮಾನ ತೆಗೆದುಕೊಂಡಿದ್ದೇವೆ. ಒಂದು ಕಾಲದಲ್ಲಿ ಅಂದರೆ ೬೦–೭೦ ವರ್ಷಗಳ ಹಿಂದೆಯಲ್ಲಾ, ೧೦–೧೨ ವರ್ಷಗಳ ಹಿಂದೆ ಸೈಕಲ್ ಕಿಮ್ಮತ್ತು ಇನ್ನೂರು ರೂಪಾಯಿಗಳು ಇದ್ದದ್ದು ಈವತ್ತು ಒಂಬೈನೂರು ರೂಪಾಯಿಗಳು ಆಗಿದೆ. ಇದು ಭಾರ ಆಗುವುದಿಲ್ಲವೆ ? ಭಾರ ಆಗುತ್ತದೆ. ನೀವು ಯಾವುದೇ ಒಂದು ಅನುಕೂಲವನ್ನು ಸರ್ಕಾರದಿಂದ ಪಡೆದುಕೊಳ್ಳುವಾಗ ಸಮಾಜದ ಪ್ರತಿಯೊಂದು ವರ್ಗವೂ ತಮ್ಮ ತಮ್ಮ ಶಕ್ತಿಗೆ ಅನುಸಾರವಾಗಿ ತ್ಯಾಗ ಮಾಡಬೇಕು ಎನ್ನುವ ಉದ್ದೇಶದಿಂದ ಈ ಕ್ರಮ ತೆಗೆದುಕೊಂಡಿದ್ದೇವೆ. ಮತ್ತೆ ನಮ್ಮಲ್ಲಿ ನೀರಾವರಿ ಕರಿಗೆ, ಡ್ರೈಲ್ಯಾಂಡ್ ಡೆವಲಪ್‌ಮೆಂಟ್‌ಗೆ ಸರ್‌ಚಾರ್ಜ್ ಹೆಚ್ಚು ಹಾಕಿದ್ದೀರಿ, ಇದು ಬಹಳ ಹೆಚ್ಚು ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಇಡೀ ಭಾರತ ದೇಶದಲ್ಲಿ ಕರ್ನಾಟಕದಲ್ಲಿರತಕ್ಕಂಥ ನೀರಾವರಿ ತೆರಿಗೆ ಅತ್ಯಂತ ಕಡಿಮೆಯಾದೆಂದು ಹೇಳಲಿಕ್ಕೆ ನಾನು ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಗೋಧಿಗೆ ೪೪ ರೂಪಾಯಿಗಳು, ಬತ್ತಕ್ಕೆ ೪೯ ರಿಂದ ೭೪, ಜೋಳಕ್ಕೆ ೪೪, ಹತ್ತಿಗೆ ೪೪, ಕಬ್ಬಿಗೆ ೧೯೮ ರಿಂದ ೨೯೬. ಈಗ ಮಹಾರಾಷ್ಟ್ರದಲ್ಲಿ ಗೋಧಿಗೆ ೭೫, ಬತ್ತಕ್ಕೆ ೫೦, ಜೋಳಕ್ಕೆ ೬೦, ಹತ್ತಿಗೆ ೩೫ ರಿಂದ ೪೦೦, ಕಬ್ಬಿಗೆ ೭೫೦ ಗುಜರಾತಿನಲ್ಲಿ ಗೋಧಿಗೆ ೧೫೦.

ಶ್ರೀ ಎಚ್. ಡಿ. ಚೌಡಯ್ಯ.—ತಾವು ಹೇಳುತ್ತಿರುವುದು ಹೆಕ್ಟೇರ್‌ಗೋ ಅಥವಾ ಎಕರೆಗೋ?

ಶ್ರೀ ರಾಮಕೃಷ್ಣ ಹೆಗಡೆ.—ಒಂದು ಹೆಕ್ಟೇರ್‌ಗೆ.

ಶ್ರೀ ಎಚ್. ಡಿ. ಚೌಡಯ್ಯ.—ಕರ್ನಾಟಕದಲ್ಲಿ ಹೇಳುವುದು ಒಂದು ಎಕರೆಗೆ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ ಹೆಕ್ಟೇರ್‌ಗೆ ಹೇಳುತ್ತಿರುವುದು. ಸೆಂಟ್ರಲ್ ವಾಟರ್ ಕಮಿಷನ್‌ನ ಡೈರೆಕ್ಟರ್ ಆಫ್ ಸ್ಟಾಟಿಸ್ಟಿಕ್ಸನ ಮುಂದೆ ಇರತಕ್ಕಂಥ ಅಂಕಿಅಂಶಗಳಿಂದ ಇದನ್ನು ಹೇಳುತ್ತಿದ್ದೇನೆ. ಗುಜರಾತಿನಲ್ಲಿ ೧೫೦ ಗೋಧಿಗೆ, ಬತ್ತಕ್ಕೆ ೧೦೦ ರಿಂದ ೩೦, ಜೋಳಕ್ಕೆ ೪೦, ಹತ್ತಿಗೆ ೨೦೦ ಮತ್ತು ಕಬ್ಬಿಗೆ ೭೫ ರಿಂದ ೫೨೫. ರಾಜಸ್ಥಾನದಲ್ಲಿ ಇದು ೭೪–೯೮–೪೪–೮೮–೧೪೩. ಉತ್ತರ ಪ್ರದೇಶದಲ್ಲಿ ೫೬–??–೩೦ ರಿಂದ ೧೧೮ ಅಲ್ಲಿ ಜೋಳ ಬೆಳೆಯುವುದಿಲ್ಲ, ಹತ್ತಿಗೆ ೪೬ ಕಬ್ಬಿಗೆ ೯೦ ರಿಂದ ೧೯೦, ಈಗ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಒಂದಮೇಲೆ ನಾವು ನಮ್ಮರಾಜ್ಯದ ರೈತರಿಗೆ ಅನೇಕ ವಿಧವಾದ ಸವಲತ್ತುಗಳನ್ನು ಕೊಟ್ಟಿದ್ದೇವೆ, ಒಂದು ಮಹತ್ವದ

ಸವಲತ್ತು ಎಂದರೆ ನೀರಾವರಿ ಮತ್ತು ಸೈಕಲ್ ಮೇಲೆ ಕಳೆದ ಐದು ವರ್ಷಗಳಿಂದ ಯಾವುದೇ ರೀತಿಯ ತೆರಿಗೆಯನ್ನು ಅವರಿಂದ ವಸೂಲು ಮಾಡುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ಒಂದು ಯೋಗ್ಯವಾದ ವಾದವನ್ನು ರೈತ ಸಂಘದವರು ಮಾಡಿದರು. ಆ ವಾದ ಏನೆಂದರೆ ಹೊಸ ಕಾರ್ಖಾನೆಗಳನ್ನು ಮತ್ತು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲಿಕ್ಕೆ ಅನೇಕ ರೀತಿಯ ಉತ್ತೇಜನ ಕೊಡುತ್ತಿದ್ದೀರಿ, ಸೇಲ್ಸ್ ಟ್ಯಾಕ್ಸ್ ಎಕ್ಸೆಂಪ್‌ಷನ್ ಕೊಡುತ್ತಿದ್ದೀರಿ, ಡೆವಲಪ್‌ಮೆಂಟ್ ಲೋನ್ ಅಥವಾ ಗ್ರ್ಯಾಂಟ್ ಎಂದು ಕೊಡುತ್ತಿದ್ದೀರಿ, ಅದೇ ಅನುಕೂಲತೆಯನ್ನು ರೈತರಿಗೆ ಏತಕ್ಕೆ ಕೊಡ ಕೂಡದು ಎಂದು. ಇದು ಯೋಗ್ಯವಾದ ವಾದ. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಆದ್ದರಿಂದ, ಮೊದಲನೆಯ ೫ ವರ್ಷ ಅಂದರೆ ಜಮೀನು ಮಟ್ಟ ಮಾಡಿಕೊಂಡು ನೀರನ್ನು ಉಪಯೋಗ ಮಾಡತಕ್ಕದ್ದನ್ನು ಕಲಿತುಕೊಂಡು, ಇದೆಲ್ಲ ಮಾಡಿ ಮುಗಿಯುವವರೆಗೆ ಯಾವುದೇ ರೀತಿಯ ತೆರಿಗೆಯ ಭಾರವನ್ನು ಹಾಕಕೂಡದು ಎಂದು ತೀರ್ಮಾನ ಮಾಡಿ ಅದನ್ನು ಎಕ್ಸೆಮ್ಟ್ ಮಾಡಿದ್ದೇವೆ. ನಾವು ನೀರಿನ ಅಭಿವೃದ್ಧಿ ತೆರಿಗೆಯನ್ನು ಕೂಡ ಹಾಕುವುದಿಲ್ಲ, ಅದನ್ನು ರದ್ದು ಮಾಡಿದ್ದೇವೆ. ಒಂದೇ ಒಂದು ಮಾತನ್ನು ತಾವು ನೆನಪಿಡಬೇಕೆಂದು ನಾನು ಬಯಸುತ್ತೇನೆ. ಅದನ್ನು ಈಗಾಗಲೇ ನನ್ನ ಭಾಷಣದಲ್ಲಿ ಹೇಳಿದ್ದೇನೆ. ಏಕೆಂದರೆ ನೀರಾವರಿ ಮೇಲೆ ಏನು ಹಣವನ್ನು ನಿಯೋಜಿಸಿದ್ದೇವೆ, ನಮಗೆ ಆ ಹಣದ ಮೇಲೆ ಬೀಳತಕ್ಕ ಬಡ್ಡಿ ಏನು ಬೇಕಾಗಿಲ್ಲ, ಬಡ್ಡಿಯನ್ನು ನಾವೇ ಸೇರಿಸಿಕೊಡುತ್ತೇವೆ. ಹಣವನ್ನು ವಾಪಸ್ಸು ಕೊಡಬೇಕು. ಅದನ್ನು ನಾವು ಕೊಡುತ್ತೇವೆ. ಆದರೆ ನೀರಾವರಿ ಯೋಜನೆಗಳನ್ನು ಸುಸ್ಥಿತಿಯಲ್ಲಿಡಲು ಬೇಕಾದ ಖರ್ಚಿಗೆ ಹಣ ಕೊಡಬೇಕೋ ಬೇಡವೋ ? ಆದರೆ ಅದು ದುರ್ದೈವದಿಂದ ನಡೆಯುತ್ತಿಲ್ಲ. ಒಂದು ಮಾತನ್ನು ಮಾನ್ಯ ಸದಸ್ಯರ ಮೂಲಕ ರೈತ ಭಾಂಧವರಿಗೆ ಹೇಳಬಯಸುತ್ತೇನೆ. ಏಕೆಂದರೆ ಅವರು ನೀರಾವರಿ ಪಂಪುಗಳನ್ನು ಹಾಕಿಕೊಂಡಿದ್ದಾರೆ. ಅದರಲ್ಲಿ ಡೀಸಲ್ ಪಂಪುಗಳು ಇವೆ. ವಿದ್ಯುಚ್ಛಕ್ತಿಯಿಂದ ನಡೆಯುತಕ್ಕ ಪಂಪುಗಳು ಇವೆ. ಯಾರು ಸಾಲ ತೆಗೆದುಕೊಂಡು ಡೀಸಲ್ ಪಂಪ್ ಹಾಕಿ ಕೃಷಿ ಮಾಡುತ್ತಿದ್ದಾರೋ ಅವರೂ ರೈತರೇ ? ಅವರು ಒಣ ಭೂಮಿ ಸಾಗುವಳಿ ಮಾಡಿ ಕಷ್ಟದಲ್ಲಿ ಜೀವನ ಮಾಡಿದವರು. ಅವರು ಸಾಕಷ್ಟು ಉತ್ಪಾದನೆ ಮಾಡತಕ್ಕ ಪರಿಸ್ಥಿತಿಯನ್ನು ಡೀಸಲ್ ಪಂಪ್‌ಸೆಟ್‌ನಿಂದ ನಿರ್ಮಾಣ ಮಾಡಿದ್ದಾರೆ. ಅದಕ್ಕೆ ನಾವು ಯಾವುದೇ ಸಬ್‌ಸಿಡಿ ಕೊಡುತ್ತಿಲ್ಲ. ಡೀಸಲ್ ಎಣ್ಣೆಗೂ ಕೊಡುತ್ತಿಲ್ಲ. ಎಲೆಕ್ಟ್ರಿಸಿಟಿಯನ್ನು ಉಪಯೋಗಿಸಿ ಪಂಪ್‌ಸೆಟ್ ಹಾಕಿಕೊಂಡ ರೈತರು, ಲಿಫ್ಟ್ ಇರಿಗೇಷನ್ ನೀರಾವರಿ ಪ್ರಯೋಜನ ಪಡೆದ ರೈತರು ಅದಕ್ಕೆ ತಗಲಿರತಕ್ಕ ಎಲೆಕ್ಟ್ರಿಸಿಟಿ ಖರ್ಚನ್ನು ಕೊಡದಿದ್ದರೆ ಅವರಿಂದ ಬೇರೆ ಏನು ಆಗುತ್ತದೆ ? ಸರ್ಕಾರ ಮುಂದಿನ ಕಾರ್ಯಕ್ರಮವನ್ನು ಹೇಗೆ ನಡೆಸಬೇಕು ? ಎಷ್ಟೇ ಪ್ರಯತ್ನ ಮಾಡಿದರೂ ನಮ್ಮ ರಾಜ್ಯದ ಮೂರರಲ್ಲಿ ಒಂದು ಭಾಗಕ್ಕೆ ಮಾತ್ರ ನೀರು ಸಿಗುತ್ತದೆ. ಅದಕ್ಕಿಂತ ಹೆಚ್ಚು ಸಿಗುವುದಿಲ್ಲ. ಬಾಕಿ ಎರಡು ಭಾಗಕ್ಕೆ ಮಳೆಯನ್ನೇ ಅವಲಂಬಿಸಬೇಕಾಗಿದೆ. ಅದಕ್ಕಾಗಿ ನಾವು ಈ ಶುಷ್ಕ ಭೂಮಿ ಅಭಿವೃದ್ಧಿ ಯೋಜನೆಯನ್ನು ಹಾಕಿಕೊಳ್ಳಬೇಕಾಗಿದೆ. ಇದನ್ನು ೩-೪ ವರ್ಷದಿಂದ ಮಾಡುತ್ತಿದ್ದೇವೆ, ಈ ಬಗ್ಗೆ ನಾನು ಹೇಳಿದ್ದರಲ್ಲಿ ಅತಿಶಯೋಕ್ತಿ ಏನು ಇಲ್ಲ. ಸದಸ್ಯರು ಕೂಡ ಅನೇಕ ಕಡೆ ಇದನ್ನು ನೋಡಿರಬೇಕು. ಅದರಿಂದ ರೈತರಿಗೆ ಬಹಳ ಆನಂದವಾಗಿದೆ. ಇದೊಂದು ಹೊಸ ಯೋಜನೆ. ನಮ್ಮ ದೇಶದಲ್ಲಿ ಪ್ರಥಮ ಬಾರಿಗೆ ನಾವು ಮಾಡಿದಂತಹ ಯೋಜನೆ. ನನ್ನ ಭಾಷಣದಲ್ಲಿ ಹೇಳಿದ ಹಾಗೆ ಪ್ಲಾನಿಂಗ್ ಕಮೀಷನ್‌ನವರು ಮತ್ತು ಕೇಂದ್ರ ಸರ್ಕಾರದವರು ಇದನ್ನು ಒಪ್ಪಿದ್ದಾರೆ, ಮೆಚ್ಚಿದ್ದಾರೆ. ಬೇರೆ ರಾಜ್ಯಗಳಲ್ಲಿ ಕೂಡ ಇದನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ. ಇದನ್ನು ಕೇಂದ್ರದ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಇದಕ್ಕೆ ನಾವು ಹಣ ಖರ್ಚು ಮಾಡಬೇಕಾಗುತ್ತದೆ. ರೈತರಿಗೆ ಯಾವ ಭಾಗದಲ್ಲಿ ಬರ ಬರುತ್ತದೋ, ಮಳೆಯ ಅಭಾವದಿಂದ ಕ್ಷಾಮ ಬರುತ್ತದೋ ಅಲ್ಲಿಯ ರೈತರಿಗೆ ತೊಂದರೆಯಾಗುತ್ತದೆ. ಅವರ ಮಟ್ಟಿಗೆ ನೀರಾವರಿ ಫಲವನ್ನು ಪಡೆದ ರೈತರು ಸಹಾನುಭೂತಿ ತೋರಿಸದಿದ್ದರೆ ಅದು ನಮ್ಮ ಸಂಸ್ಕೃತಿಗೆ ವಿರೋಧವಾದುದ್ದು. ಅದನ್ನು ನಮ್ಮ ರೈತರು ಮಾಡುವುದಿಲ್ಲವೆಂದು ಹೇಳುವ ವಿಶ್ವಾಸ ನನಗಿದೆ. ಆ ರೀತಿಯಲ್ಲಿ ನಾವು ಸ್ವಲ್ಪ ಮಟ್ಟಿಗೆ ನೀರಾವರಿ ತೆರಿಗೆ ಮೇಲೆ ಕರವನ್ನು ಹೆಚ್ಚು ಮಾಡಿದ್ದೇವೆ ಮತ್ತು ಒಂದು ಎಕರೆಗೆ ಈಗಿರತಕ್ಕ ಮೆಯಿಂಟೆನೆನ್ಸ್ ಸೆಸ್ ಅನ್ನು ೪ ರೂಪಾಯಿಯಿಂದ ೧೦ ರೂಪಾಯಿಗೆ ಏರಿಸಿದ್ದೇವೆ. ಇದನ್ನು ರೈತರು ಒಪ್ಪಿಕೊಳ್ಳುತ್ತಾರೆಂದು ಹೇಳುವ ವಿಶ್ವಾಸ ನನಗಿದೆ.

ಶ್ರೀ ಎಸ್. ಬಂಗಾರಪ್ಪ.—ರೈತ ಸಂಘದವರು ಅಂದರೆ ಮಂಡ್ಯ ಜಿಲ್ಲೆಯ ಚೌಡಯ್ಯನವರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದನ್ನು ನೋಡಿದರೆ ಗೊತ್ತಾಗುತ್ತದೆ. ಜಾಸ್ತಿ ಮಾಡುವುದಿಲ್ಲ

ವೆಂದು ತಾವು ಭರವಸೆ ಕೊಟ್ಟಿದ್ದಿರಿ, ಆದರೂ ನೀರಿನ ಕರವನ್ನು ಜಾಸ್ತಿ ಮಾಡಿದ್ದೀರಿ. ಈಗ ರೈತರು ಚಳುವಳಿ ಹೂಡತಕ್ಕದ್ದು ಅನಿವಾರ್ಯವಾಗಿದೆ, ನೀವೇ ಕೊಟ್ಟ ಮಾತನ್ನು ನಡೆಸಿಲ್ಲವೆಂದು ಅವರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಒಂದು ರೈತ ಸಂಘದವರು ಮಾತ್ರ ಅದನ್ನು ಹೇಳಿದ್ದಾರೆ. ಮಾನ್ಯ ನಂಜುಂಡಸ್ವಾಮಿಯವರ ರೈತ ಸಂಘ ಅದು. ಅವರು ಜೈಲ್‌ಭರೋ ಚಳುವಳಿ ಮಾಡತಕ್ಕ ಕರೆ ಕೊಟ್ಟಿದ್ದು ಬಜೆಟ್ ಬಂದಮೇಲೆ ಅಲ್ಲ. ಕಳೆದ ಒಂದು ವರ್ಷದಿಂದ ಈ ಬಗ್ಗೆ ಕರೆ ಕೊಡುತ್ತಾನೇ ಇದ್ದರು. ಆದರೆ ಜನ ಬರಲಿಲ್ಲ, ಅದಕ್ಕಾಗಿ ಆ ಚಳುವಳಿಗೂ ಇದಕ್ಕೂ ಏನೂ ಸಂಬಂಧ ಇಲ್ಲ. ಮತ್ತೆ ಕಳೆದ ನಾಲ್ಕು ವರ್ಷದಲ್ಲಿ ಅನೇಕ ರೀತಿಯ ಸವಲತ್ತನ್ನು ನಾವು ರೈತರಿಗೆ ಕೊಟ್ಟಿದ್ದೇವೆ. ನಾನು ಮತ್ತೊಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದರೆ ಅದನ್ನು ರಿಪೀಟ್ ಮಾಡುತ್ತೇನೆಂದು ದಯವಿಟ್ಟು ಯಾವ ಸದಸ್ಯರೂ ತಿಳಿಯಕೂಡದು. ಹದಿನೈದು ವರ್ಷಗಳ ಒಂದು ಯೋಜನೆಯನ್ನು ನಾವು ಮಾಡಿದ್ದೇವೆ ಇದೂ ಕೂಡ ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲಬಾರಿಗೆ ಯೋಚನೆ ಮಾಡಿದ್ದೇವೆ. ಏನೆಂದರೆ. ಕಳೆದ ೫೦–೬೦ ವರ್ಷಗಳಿಂದ ಸಾಲ ತೆಗೆದುಕೊಳ್ಳುತ್ತಿದ್ದ ಕುಟುಂಬ ಇವತ್ತೂ ಸಾಲ ತೆಗೆದುಕೊಳ್ಳಬೇಕಾದರೆ ಆ ಸಾಲದ ಪ್ರಯೋಜನ ಏನೂ ಆಗಲಿಲ್ಲ ಎಂದು ಅರ್ಥವಾಗುತ್ತದೆ. ಯಾವುದೇ ಒಬ್ಬ ರೈತ ಇನ್ನು ಮುಂದೆ ಸಾಲಕ್ಕಾಗಿ ಶರಣು ಹೋಗತಕ್ಕ ಸ್ಥಿತಿಗೆ ಬರಬಾರದು. ಅಂದರೆ ಅವರ ಆರ್ಥಿಕ ಪರಿಸ್ಥಿತಿ ಅಷ್ಟರಮಟ್ಟಿಗೆ ಬರಬೇಕು ಕೇವಲ ಸಣ್ಣ ರೈತ ಅಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಸಣ್ಣ ಪುಟ್ಟ ಕಸುಬು ಮಾಡತಕ್ಕವರಿಗೂ ಸಾಲವನ್ನು ಒದಗಿಸಿ ಅವನು ಏನು ಕಸುಬು ಮಾಡುತ್ತಿದ್ದಾನೆ, ಅದರಲ್ಲಿ ಉತ್ಪಾದನೆ ಹೆಚ್ಚು ಮಾಡಬೇಕು ಎಂಬುದೇ ಅದರ ಗುರಿ ಒಣ ಭೂಮಿ ಬೇಸಾಯ ಅಭಿವೃದ್ಧಿ ಮತ್ತು ಈ ಹದಿನೈದು ವರ್ಷಗಳ ಕಾಂಪ್ರೆಹೆನ್ಸೀವ್ ಚೀಪ್ ಕ್ರೆಡಿಟ್ ಕವರೇಜ್ ಎರಡನ್ನೂ ಒಂದಕ್ಕೊಂದು ಸಂಯೋಜಿತ ಮಾಡಿಕೊಂಡು ಇದನ್ನು ಜಾರಿಗೆ ತರಬೇಕು ಎಂಬುದು ನಮ್ಮ ಉದ್ದೇಶವಾಗಿದೆ. ನಾನು ಒಂದು ಚಿತ್ರವನ್ನು ಸದನದ ಮುಂದಿಟ್ಟರೆ ಇದು ಕನಸು ಎಂದು ದಯವಿಟ್ಟು ತಿಳಿದುಕೊಳ್ಳಬೇಡಿ.

ಶ್ರೀ ಆರ್. ವೆಂಕಟರಾಮಯ್ಯ.—ಕನಸೇ ಸ್ವಾಮಿ,

ಶ್ರೀ ರಾಮಕೃಷ್ಣ ಹೆಗಡೆ.—ಅದು ನನಸು ಆಗೇ ಆಗುತ್ತದೆ. ಉದಾಹರಣೆಗೆ ಡ್ರೈ ಲ್ಯಾಂಡ್ ಪ್ರದೇಶದಲ್ಲಿ ಎರಡು ಎಕರೆ ಇದ್ದಂಥ ಒಬ್ಬರೈತ ಇರುತ್ತಾನೆ. ಆ ರೈತನಿಗೆ ಅವನ ರೈತಾಪಿ ಕೆಲಸಕ್ಕೆ ಎಷ್ಟು ಸಾಲ ಬೇಕು. ಬಾವಿ ತೆಗೆಯುವುದಕ್ಕಾಗಲಿ ಜಮೀನು ಅಭಿವೃದ್ಧಿ ಪಡಿಸುವುದಕ್ಕಾಗಲೀ ಅದನ್ನು ನೀಡಿ ಆ ಸಾಲ ಕೊಡುವುದಲ್ಲದೆ ಬೇರೆ ಸಹಾಯವನ್ನೂ ಮಾಡುತ್ತೇವೆ. ಕೇವಲ ಎರಡು ಎಕರೆ ಜಮೀನಿನಿಂದ ಅವನ ಅವಶ್ಯಕತೆಯನ್ನು ಪೂರೈಸುವುದಕ್ಕೆ ಆಗುವುದಿಲ್ಲ. ಅದರಿಂದ ಎಷ್ಟು ಉತ್ಪಾದನೆ ಬರುತ್ತದೆಯೋ ಅದರಿಂದ ಬರತಕ್ಕ ಆದಾಯ ಸಾಲದು. ಆದ್ದರಿಂದ ಅದಕ್ಕೆ ಪೂರಕವಾಗಿ ಸಣ್ಣ ಉದ್ಯೋಗಕ್ಕೆ, ಅದು ಪೌಲ್‌ಟ್ರಿ ಇರಬಹುದು, ಪಿಗರಿ ಇರಬಹುದು ಅಥವಾ ಡೈರೀಷ್ಮ ವ್ಯವಸಾಯ ಇರಬಹುದು ಅಥವಾ ಸಣ್ಣ ಪುಟ್ಟ ಉದ್ಯೋಗ ಇರಬಹುದು, ಇದನ್ನೆಲ್ಲಾ ನಾವು ಗೊತ್ತು ಮಾಡಿ ಅಷ್ಟಕ್ಕೂ ಸೇರಿ ಎಷ್ಟು ಸಾಲ ಬೇಕೋ ಅಷ್ಟನ್ನು ಅವರಿಗೆ ಕೊಡುತ್ತೇವೆ ಮತ್ತು ಅವನು ಬೆಳೆದಂಥ ಬೆಳೆಯನ್ನು ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ನಾವು ಮಾಡಬೇಕು. ಇದು ಮಾಡುವುದು ಸಾಧ್ಯವಾದರೆ ಕನಸು ನನಸಾಗುತ್ತದೆ ಎಂಬ ವಿಶ್ವಾಸ ಇದೆ. ಇನ್ನು ಹದಿನೈದು ವರ್ಷಗಳಲ್ಲಿ ಅಂದರೆ ನಾವು ೨೦೦೦ನೇ ಇಸವಿಗೆ ಪಾದಾರ್ಪಣೆ ಮಾಡುವ ಹೊತ್ತಿಗೆ...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಒಂದೊಂದು ಜಿಲ್ಲೆ ಸರ್ವೆ ಮಾಡುವುದಕ್ಕೆ ಒಂದೊಂದು ವರ್ಷ ಹಿಡಿಯುತ್ತಿದೆ. ಇದು ನಿಮ್ಮ ವರದಿ ಪ್ರಕಾರ ಗೊತ್ತಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—೫ ವರ್ಷದಲ್ಲಿ ಇಡೀ ರಾಜ್ಯದ ಸರ್ವೆ ಮುಗಿಯುತ್ತದೆ. ಅಂದರೆ ಈ ಯೋಜನೆಯನ್ನು ಪ್ರಾರಂಭ ಮಾಡುವುದಕ್ಕೆ ೫ ವರ್ಷ ಕಾಯತಕ್ಕ ಅಗತ್ಯ ಇಲ್ಲ. ಈ ವರ್ಷ ಎಲ್ಲೆಲ್ಲಿ ಸರ್ವೆ ಮುಗಿಯುತ್ತದೋ, ಆ ಸರ್ವೆ ಮುಗಿದ ತಕ್ಷಣ ಅಲ್ಲಿ ಸಾಲ ಕೊಡುವ ವ್ಯವಸ್ಥೆ ಮಾಡುತ್ತೇವೆ ಇದನ್ನು ಜಾರಿಗೆ ತರುತ್ತೇವೆ. ೫ ವರ್ಷ ಕಾಯುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಶ್ರೀ ವೀರೇಂದ್ರ ಹೆಗಡೆಯವರು ಹಳ್ಳಿಗಳನ್ನು ಅಡಾಪ್ಟ್ ಮಾಡಿಕೊಂಡು ಅಭಿವೃದ್ಧಿ ಮಾಡುತ್ತಿದ್ದಾರೆ. ಅಂತಹ ಕಡೆಗೆ ಯಾರನ್ನಾದರೂ ಕಳುಹಿಸಿ ಅದನ್ನು ನೋಡಿಕೊಂಡು ಬರಲು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಕಳುಹಿಸಿಕೊಡುತ್ತೇನೆ. ಇದರ ಬಗ್ಗೆ ಎಲ್ಲಿಂದ ಸೂಚನೆ ಬಂದರೂ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇಂಥ ಒಂದು ಒಳ್ಳೆಯ ವ್ಯವಸ್ಥೆ ಗ್ರಾಮಾಂತರ ಪ್ರದೇಶದಲ್ಲಿ ಜಾರಿ ಮಾಡಬೇಕು ಎನ್ನತಕ್ಕದ್ದು ನಮ್ಮ ಉದ್ದೇಶ.

ಶ್ರೀ ಎಸ್. ಬಂಗಾರಪ್ಪ.—ರೈತರ ಸಾಲದ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಬರಗಾಲ ಇದ್ದಾಗ ಸಾಲವನ್ನು ಕಡ್ಡಾಯವಾಗಿ ವಸೂಲು ಮಾಡುವುದಿಲ್ಲ ಎಂಬ ಮಾತನ್ನು ಹೇಳಿದ್ದೀರಿ. ಆದರೂ ಈಗ ಕಡ್ಡಾಯವಾಗಿ ವಸೂಲು ಮಾಡುತ್ತಿದ್ದಾರೆ. ಅವರ ಆಸ್ತಿಗಳನ್ನು ಹರಾಜು ಮಾಡುವುದಕ್ಕೆ ಇಸ್ತಿಹಾರ್ನಾಮೆಯನ್ನು ಸೊಸೈಟಿಯಲ್ಲಿ, ಪಂಚಾಯಿತಿಗಳಲ್ಲಿ ಅಂಟಿಸಿದ್ದಾರೆ. ಭೂಮಿ ಕಳೆದುಕೊಳ್ಳತಕ್ಕ ಅನೇಕ ಜನರು ಕೂಲಿಗೆ ಬೇರೆ ಕಡೆಗೆ ಹೋಗಿದ್ದಾರೆ. ತಾವು ಇಲ್ಲಿ ಕಡ್ಡಾಯವಾಗಿ ವಸೂಲು ಮಾಡುವುದಿಲ್ಲ, ಉಗ್ರಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದೀರಿ, ಆದರೂ ಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಕಡ್ಡಾಯವಾಗಿ ವಸೂಲು ಮಾಡುವುದಿಲ್ಲ ಎಂದು ಹೇಳಿದ್ದು ಸಣ್ಣಪುಟ್ಟ ರೈತರ ವಿಚಾರದಲ್ಲಿ. ಆದರೆ ಶ್ರೀಮಂತ ರೈತರು ಏನು ಇದ್ದಾರೆ, ಯಾರಿಗೆ ಸಾಲವನ್ನು ವಾಪಸ್ಸು ಕೊಡತಕ್ಕ ಶಕ್ತಿ ಇದೆಯೋ, ಅಂತಹವರೂ ಕೂಡ ಸಾಲವನ್ನು ಕೊಡದೇ ಇದ್ದರೆ, ಅದನ್ನು ವಸೂಲಿ ಮಾಡಲೇಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನೀರಾವರಿ ಪ್ರದೇಶದಲ್ಲಿ ಬೇಕಾದರೆ ವಸೂಲಿ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ನೀರಾವರಿ ಪ್ರದೇಶದಲ್ಲಿ ವಸೂಲಿ ಮಾಡುತ್ತೇವೆ. ಅಭಾವ ಪರಿಸ್ಥಿತಿ ಎಂದು ಎಲ್ಲಿ ಘೋಷಣೆ ಮಾಡಿದ್ದೇವೆಯೋ ಅಲ್ಲಿ ವಸೂಲಿ ಮಾಡುವುದಿಲ್ಲ. ಅಭಾವ ಪರಿಸ್ಥಿತಿ ಅಂತ ಹೇಳಿ ಯಾವ್ಯಾವ ತಾಲ್ಲೂಕಿದು ಘೋಷಣೆ ಮಾಡಿದ್ದೇವೆಯೋ ಅಲ್ಲಿ ಆ ತರಹದ ಶಕ್ತಿಯನ್ನು ಉಪಯೋಗ ಮಾಡಿ ಸಾಲವನ್ನು ವಸೂಲಿ ಮಾಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಭಾವ ಪರಿಸ್ಥಿತಿ ಎಂಬುದಾಗಿ ಕಾನೂನು ಪ್ರಕಾರ ಕರ್ನಾಟಕ ರಾಜ್ಯದ ಯಾವುದೇ ಭಾಗವನ್ನು ಕಳೆದ ವರ್ಷ ಘೋಷಣೆಯನ್ನು ಮಾಡಿಲ್ಲ. ಆ ಬಗ್ಗೆ ಶ್ರೀಮಾನ್ ಬೊಮ್ಮಾಯಿಯವರನ್ನು ಕೇಳಿದಾಗ, ಆ ಬಗ್ಗೆ ಕಾನೂನೇ ಆಗಿಲ್ಲ. ಘೋಷಣೆಯನ್ನು ಮಾಡಿಲ್ಲ ಎಂದು ಹೇಳಿದರು. ಆದ್ದರಿಂದ ಆ ರೀತಿ ಘೋಷಣೆ ಮಾಡಿದ್ದೇ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಒಂದು ಪದ್ಧತಿ ಇದೆ. ನಬಾರ್ಡಿನವರ ಒಂದು ಗೈಡ್‌ಲೈನ್ಸ್ ಇದೆ. ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆ ಎಂಬುದನ್ನು ಅಣೆವಾರು ಲೆಕ್ಕವನ್ನು ಪ್ರತಿಯೊಂದು ತಾಲ್ಲೂಕಿನ ಪ್ರತಿಯೊಂದು ಹಳ್ಳಿಗಳಲ್ಲೂ ಮಾಡಿ ಅದರ ಪ್ರಕಾರ ಅವರು ಡಿಕ್ಲೇರ್ ಮಾಡುತ್ತಾರೆ. ಅವರು ಆ ರೀತಿ ಮಾಡಿದರೆ ನಮಗೆ ಆ ಸಾಲವನ್ನು ಕನ್ವರ್ಟ್ ಮಾಡತಕ್ಕ ಒಂದು ಅವಕಾಶ ಇದೆ. ಅದನ್ನು ಬಿಟ್ಟು ಎಲ್ಲಿ ಅಭಾವ ಪರಿಸ್ಥಿತಿ ಇಲ್ಲವೋ ಅಂತಲ್ಲೂ ರೈತರು ಉದ್ದೇಶಪೂರ್ವಕವಾಗಿ ಹಣವನ್ನು ವಾಪಸ್ಸು ಕೊಡದಿದ್ದರೆ ಅದನ್ನು ವಸೂಲಿ ಮಾಡಲೇಬೇಕಾಗುತ್ತದೆ. ಅದು ಇಲ್ಲದಿದ್ದರೆ ಏನಾಗುತ್ತದೆಂದರೆ, ಬೇರೆ ಡಿಸರ್ವಿಂಗ್ ರೈತರು ಏನು ಇದ್ದಾರೆ, ಅವರಿಗೆ ಸಾಲ ಸಿಕ್ಕುವುದಿಲ್ಲ. ಸಾಲವನ್ನು ಮನ್ನಾ ಮಾಡಿದ್ದು ಒಂದು ಕಾರಣದಿಂದ. ಅದರಿಂದ ನೂರಾರು ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಿಗೆ ಪುನಃ ಜೀವ ಬಂತು. ಅದಿಲ್ಲದಿದ್ದರೆ ಆ ಬ್ಯಾಂಕುಗಳು ಸಾಲವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಕೊನೆಯ ಪಕ್ಷ ಇಂಕಿಪ್ಟ್ ಪರ್ಸೆಂಟ್ ಸಾಲವನ್ನು ವಾಪಸ್ಸು ಕೊಡದಿದ್ದರೆ ನಬಾರ್ಡಿನವರು ಆ ಒಂದು ಅನುಕೂಲವನ್ನು ಸಹ ಕೊಡುವುದಿಲ್ಲ. ಆದ್ದರಿಂದ ಕೆಲವು ಕಡೆ ಕಡ್ಡಾಯವಾಗಿ ಸಾಲವನ್ನು ವಸೂಲಿ ಮಾಡಲೇಬೇಕಾಗುತ್ತದೆ. ಆದರೆ ಬಡ ರೈತರು ಯಾರು ಇದ್ದಾರೆ, ಬರಗಾಲ ಪ್ರದೇಶದಲ್ಲಿರತಕ್ಕ ರೈತರು ಏನು ಇದ್ದಾರೆ, ಅವರ ಮೇಲೆ ಈ ಶಕ್ತಿಯನ್ನು ಉಪಯೋಗಿಸುವುದಿಲ್ಲ ಎನ್ನತಕ್ಕಂತಹ ಮಾತನ್ನು ಈಗಲೂ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಬರಗಾಲ ಪ್ರದೇಶದಲ್ಲಿರತಕ್ಕ ರೈತರ ಬಗ್ಗೆಯೇ ನಾನು ಹೇಳುತ್ತಿರುವುದು. ದೊಡ್ಡ ದೊಡ್ಡ ರೈತರು ನೀರಾವರಿ ಪ್ರದೇಶದಲ್ಲಿರತಕ್ಕ ರೈತರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ. ಎಲ್ಲಿ ಬರಗಾಲ ಇದೆ, ಎಲ್ಲಿ ಬೆಳೆ ಬಂದಿಲ್ಲ, ಎಲ್ಲಿ ಭೂಮಿಯಲ್ಲಾ ಒಣಗಿಹೋಗಿದೆ, ಊರುಗಳಲ್ಲಿ ವಾಸ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಯಾರು ಯಾರು ಊರು ಬಿಟ್ಟು ಹೋಗಿದ್ದಾರೆ, ಆ ಪ್ರದೇಶದ ಜನರ ಬಗ್ಗೆಯೇ ಹೇಳುತ್ತಿರುವುದು.

ಶ್ರೀ ರಾಮಕೃಷ್ಣ ಹೆಗಡೆ —ಆಯಿತು. ಮತ್ತೆ, ಶ್ರೀಮತಿ ನಾಗರತ್ನಮ್ಮನವರು ತಮ್ಮದೇ ಆದ ಶೈಲಿಯಲ್ಲಿ ಹೇಳಿದರು. ಅದೇನೆಂದರೆ, "ಈ ಬಡ್ಜೆಟ್ಟಿನಲ್ಲಿ ಏನಿದೆ ಎಂದರೆ ಸ್ತ್ರೀಯರಿಗೆ ಸಂಡಾಸ್ ಇದೆ" ಎಂದು ಹೇಳಿದರು. ನಮ್ಮ ದೇಶದ ಪ್ರಧಾನ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ಅವರು ಓದಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಏನು ಹೇಳಿದ್ದಾರೆಂದರೆ, ಮಲ ಎತ್ತುತಕ್ಕ ಹೀನ ಪದ್ಧತಿ ನಮ್ಮಿಂದ ಹೋಗಬೇಕು. ಅದಕ್ಕಾಗಿ ಸಂಡಾಸ್ ಹಾಗೂ ಪಬ್ಲಿಕ್ ಲ್ಯಾಟ್ರಿನ್‌ಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ

ಶ್ರೀ ಕೆ. ಎಚ್. ಪಾಟೀಲ್.—ನೀರು ಇಲ್ಲದ ಕಡೆ ಪಾಯಿಖಾನೆಗಳನ್ನು ಮಾಡಿದರೆ, ಅದರಿಂದ ಹೊಲಸು ಜಾಸ್ತಿಯಾಗುತ್ತದೆ. ಮಾನ್ಯ ಪ್ರಧಾನ ಮಂತ್ರಿಗಳು ಯಾವ ರೀತಿಯಲ್ಲಿ ಮಾಡಬೇಕೆಂದು ಹೇಳಿದ್ದಾರೋ ಆ ರೀತಿಯಲ್ಲಿ ನೀವು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ವರ್ದಾ ಪಾಯಿಖಾನೆಗೆ ಅಥವಾ ಸಂಡಾಸ್‌ಗೆ ನೀರು ಬೇಕಾಗಿಲ್ಲ. ಅದನ್ನು ಫ್ಲಸ್ ಮಾಡಬೇಕಾದುದಿಲ್ಲ. ನಾನೂ ಸ್ವಲ್ಪ ಮಟ್ಟಿಗೆ ಭಂಗಿ ಕೆಲಸವನ್ನು ಮಾಡಿದ್ದೇನೆ. ಅದನ್ನು ನೀವು ಮಾಡಿದ್ದೀರೋ ಇಲ್ಲವೋ ಗೊತ್ತಿಲ್ಲ. ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳುವುದಾದರೆ, ನಾನು ಸುಮಾರು ಒಂದೂವರೆ ವರ್ಷಗಳ ಕಾಲ ಭಂಗಿ ಕೆಲಸವನ್ನು ಮಾಡಿದ್ದೇನೆ. ಸುರ್‌ಗಾಂ ಎಂಬಲ್ಲಿ ಶ್ರೀ ವಿನೋಭಾಜಿಯವರ ಸಹಾಯಕನಾಗಿ ಆ ಕೆಲಸವನ್ನು ಮಾಡಿದ್ದೇನೆ. ೫ ಸಾವಿರ ಜನಸಂಖ್ಯೆಗಿಂತ ಹೆಚ್ಚು ಜನರು ಇರತಕ್ಕ ಹಳ್ಳಿಗಳಲ್ಲಿ ಅಂದರೆ ನಮ್ಮ ದೇಶದ ಅನೇಕ ಕಡೆ ಆ ಪದ್ಧತಿ ಇದೆ. ಬೆಳಗಾಗೆದ್ದರೆ, ಗಂಡಸರು, ಹೆಂಗಸರು ಎಲ್ಲರೂ ಊರಿನ ಹೊರಗಡೆ ಇರತಕ್ಕಂತಹ ರಸ್ತೆಯ ಪಕ್ಕದಲ್ಲಿ ಕುಳಿತುಕೊಂಡು ಮಲ ವಿಸರ್ಜನೆ ಮಾಡತಕ್ಕ ಪದ್ಧತಿ ಇವತ್ತಿಗೂ ಇದೆ. ಅಂದರೆ ಅವರಿಗೆ ಬೇರೆ ಎಲ್ಲೂ ಜಾಗ ಇಲ್ಲ. ವರ್ದಾ ಟೈಪ್, ಎಂದರೆ ಮೊಬೈಲ್ ಪೋಲೀಸ್ ನಿಲ್ಲುವ ರೀತಿಯಲ್ಲಿ. ಕೆಲವು ಕಡೆ ಹಳ್ಳಗಳನ್ನು ತೋಡುವುದು, ಮಲ ವಿಸರ್ಜಿಸಿದ ಮೇಲೆ ಅದನ್ನು ಮಣ್ಣಿನಿಂದ ಹಾಕಿ ಮುಚ್ಚುವುದು. ಪ್ರತಿ ದಿವಸ ಬೆಳಿಗ್ಗೆ ೫ ಗಂಟೆಗೆ ಹೊರಟು ಅದೇ ಕೆಲಸ ಮಾಡುವುದು. ವಿನೋಬಾಜಿಯವರ ಪೌನಾರ್ ಆಶ್ರಮದಲ್ಲಿ ಈ ಕೆಲಸಕ್ಕೆ ಬೇರೆ ಯಾರನ್ನೂ ಆರಿಸಲಿಲ್ಲ, ನನ್ನನ್ನು ಆರಿಸಿದರು. ನನ್ನ ಮನಸ್ಸಿನಲ್ಲಿ ಏನಾದರೂ ನನ್ನ ಜನ್ಮದ ಬಗ್ಗೆ ಅಹಂಕಾರ ಇದ್ದರೆ ಅದು ಹೋಗಬೇಕೆಂದು ಹೇಳಿ. ಪ್ರತಿ ದಿವಸ ಬೇರೆ ಯಾವ ಕಾರ್ಯಕ್ರಮಕ್ಕೂ ಹೋಗದೇ ಸತತವಾಗಿ ಒಂದೂವರೆ ವರ್ಷಗಳ ಕಾಲ ಬಕೆಟ್, ಗುದ್ದಲಿ ಹೊತ್ತು ಈ ಕೆಲಸ ಮಾಡಿದ್ದೇನೆ. ಗುದ್ದಲಿಯಲ್ಲಿ ಹಳ್ಳ ತೋಡುವುದು ನಂತರ ಬಕೆಟ್‌ನಲ್ಲಿ ಮಣ್ಣನ್ನು ಅಲ್ಲಿ ತುಂಬುವುದು. ನಾವು ಇದನ್ನು ಮಾಡುತ್ತಾ ಇರುವಾಗಲೇ ಜನರು ಪಕ್ಕದಲ್ಲೇ ಬಂದು ಕೂಡುತ್ತಿದ್ದರು. ಕ್ರಮೇಣವಾಗಿ ಅಲ್ಲಿನ ಜನರ ಮನಸ್ಸಿನಲ್ಲಿ ಪರಿವರ್ತನೆಯಾಯಿತು. ಆ ನಂತರ ಆ ಊರಿನ ಪ್ರತಿಯೊಬ್ಬರೂ ಪಾಯಿಖಾನೆಯಲ್ಲಿ ಕುಳಿತು ಮಲ ವಿಸರ್ಜನೆ ಮಾಡತಕ್ಕದ್ದನ್ನು ಅನುಸರಿಸಿದರು. ಯಾವ ಯಾವ ಹಳ್ಳಿಗಳು ಮತ್ತು ಸಣ್ಣಪುಟ್ಟ ಪಟ್ಟಣಗಳಲ್ಲಿ ಲೆಟ್ರಿನ್ ವ್ಯವಸ್ಥೆ ಇಲ್ಲವೋ ಅಲ್ಲಿ ಇದನ್ನು ಮಾಡಬೇಕು. ನೀರಿನ ವ್ಯವಸ್ಥೆ ಇದ್ದರೆ ಇದನ್ನು ಮಾಡೋಣ, ವರ್ದಾ ಟೈಪ್ ಮಾಡೋಣ. ಅದರಲ್ಲೂ ಮುಖ್ಯವಾಗಿ ಸ್ತ್ರೀಯರು ರಸ್ತೆ ಪಕ್ಕದಲ್ಲಿ ಕೂಡುವುದನ್ನು ತಪ್ಪಿಸುವುದೊಂದೇ ಇದರ ಉದ್ದೇಶ. ಇನ್ನು ಮಾನ್ಯ ಎಂ. ಎಸ್. ಕೃಷ್ಣನ್ ಅವರು ತಮ್ಮ ಮಾಮೂಲಿ ಭಾಷೆಯನ್ನೇ ಉಪಯೋಗಿಸಿದ್ದಾರೆ. ಈ ಬಡ್ಜೆಟ್‌ನ್ನು ಪ್ರತಿಗಾಮಿ ಎಂದು ಹೇಳಿದ್ದಾರೆ. ಇದರಲ್ಲಿ ಯಾವ ಪ್ರತಿಗಾಮಿಯನ್ನು ನೋಡಿದರೋ ಗೊತ್ತಿಲ್ಲ.

ಶ್ರೀ ಎಂ. ಎಸ್ ಕೃಷ್ಣನ್.—ಕೈಗಾರಿಕೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಕೈಗಾರಿಕೆ ಎಂದು ಹೇಳುತ್ತಾರೆ. ನಾನು ಇಲ್ಲಿ ಪ್ರತಿಯೊಂದು ಇಲಾಖೆ ಬಗ್ಗೆ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಸಂಬಂಧಪಟ್ಟ ಬೇಡಿಕೆಗಳು ಬಂದಾಗ ಆ ಖಾತೆಗಳನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳು ಉತ್ತರ ಕೊಡುತ್ತಾರೆ. ನಾನು ಒಂದು ಮಾತನ್ನು

ಹೇಳುತ್ತೇನೆ. ಕಾರ್ಮಿಕರ ಬಗ್ಗೆ ನಾನು ಒಳ್ಳೆಯ ಮೆಚ್ಚುಗೆಯನ್ನು ವ್ಯಕ್ತ ಮಾಡಿದರೆ ಅದು ತಪ್ಪು ಎಂದು ಅವರು ಹೇಳುವುದಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ವಿದ್ಯುತ್ ಅಭಾವ ಇದೆ, ಆದುದರಿಂದ ಹೊಸ ಕೈಗಾರಿಕೆಗಳನ್ನು ಆಕರ್ಷಣೆ ಮಾಡತಕ್ಕ ಒಂದು ಸಾಧನ ಏನಿತ್ತೋ ಅದು ಹೋಯಿತು. ಆದರೆ ಕೈಗಾರಿಕಾ ಶಾಂತಿ ಇದ್ದರೆ, ಅದರಿಂದ ಅನೇಕರು ಹೊರಗಡೆಯಿಂದ ಬರುವವರು ಬರುತ್ತಾರೆ. ಹಾಗೂ ನಮ್ಮವರೂ ಕೂಡಾ ಹೊಸ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಕೈಗಾರಿಕಾ ಶಾಂತಿ ಕೈಗಾರಿಕಾ ಅಭಿವೃದ್ಧಿಗೆ ಅವಶ್ಯಕ ಎಂದು ಹೇಳುವ ಮಾತು. ಅದಕ್ಕೆ ಸಹಕರಿಸಿದವರ ಬಗ್ಗೆ ನಾನು ಮಾತನಾಡಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಅವರನ್ನು ಶ್ಲಾಘನೆ ಮಾಡಿದರೆ ಸಂತೋಷ. ಆದರೆ ಬಡ್ಜೆಟ್‌ನಲ್ಲಿ ಆ ಕಾರ್ಮಿಕರ ಕಲ್ಯಾಣದ ಬಗ್ಗೆ ಒಂದು ನಯಾಪೈಸೆ ಕೂಡಾ ಜಾಸ್ತಿ ಮಾಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮದು ಸಣ್ಣ ರಾಜ್ಯವಾದರೂ ಕೂಡಾ ಸುಮಾರು ೪೫೦ ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ವಿವಿಧ ಕೈಗಾರಿಕಾ ವಲಯದಲ್ಲಿ ಸರ್ಕಾರಿ ವಲಯದಲ್ಲಿ ತೊಡಗಿಸಿದ್ದೇವೆ. ಆದರೆ ಇದರಿಂದ ಬರತಕ್ಕ ರಿಟರ್ನ್ಸ್ ಕೇವಲ ೧ ಕೋಟಿ ರೂಪಾಯಿಗಳು. ೪೫೦ ಕೋಟಿ ಬಂಡವಾಳಕ್ಕೆ ೧ ಕೋಟಿ ರೂಪಾಯಿ ಪ್ರತಿಫಲ ಸಿಕ್ಕುವುದಾದರೆ ಇದರ ಬಗ್ಗೆ ನಾವು ಯೋಚನೆ ಮಾಡತಕ್ಕ ಸಮಯ ಬಂದಿದೆ ಎಂದು ನಾನು ಹೇಳುತ್ತೇನೆ. ಇದನ್ನೇ ಭಾಷಣದಲ್ಲಿ ಹೇಳಿದ್ದೇನೆ. ವಿದ್ಯುತ್ ಅಭಾವದಿಂದ ನಷ್ಟ ಆಗತಕ್ಕದ್ದು ಒಂದು ಭಾಗವಾದರೆ, ಕೇಂದ್ರ ಸರ್ಕಾರದ ನೀತಿಯಿಂದಲೂ ನಷ್ಟವಾಗುತ್ತಿದೆ ಎಂದು ಹೇಳಿದ್ದೇನೆ. ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರವನ್ನೇ ತೋರಿಸುತ್ತೀರಿ ಎಂದು ಕೆ. ಎಚ್. ಶ್ರೀನಿವಾಸ್ ಅವರು ಹೇಳಿದರು. ಈಗ ಎಂ. ಪಿ. ಎಂ. ಅನ್ನೇ ತೆಗೆದುಕೊಳ್ಳೋಣ. ಈ ವಿಚಾರದಲ್ಲಿ ನಾಲ್ಕಲ್ಲ ಐದು ಸಲ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಚರ್ಚೆ ಮಾಡಿದ್ದೇನೆ, ಪತ್ರ ಬರೆದಿದ್ದೇನೆ. ಅಲ್ಲಿ ಇಂಪೋರ್ಟೆಡ್ ಪೇಪರ್ ಏನಿದೆ ಅದರ ಮೇಲೆ ಎಕ್ಸೈಜ್ ಡ್ಯೂಟಿ ಹೆಚ್ಚು ಹಾಕದೇ ನಮ್ಮ ಪೇಪರ್ ಮೇಲೆ ಎಕ್ಸೈಜ್ ಡ್ಯೂಟಿ ಹಾಕಿದರೆ ಮತ್ತು ಹೊರಗಡೆಯಿಂದ ಆಮದು ಮಾಡಿದರೆ ಪೇಪರಿನ ಕಿಮ್ಮತ್ತು ಕಡಿಮೆಯಾದರೆ ನಮ್ಮ ಪೇಪರ್ ಹೇಗೆ ಖರ್ಚು ಆಗುತ್ತದೆ ?
ಇವತ್ತು ಒಂದು ಟನ್‌ಗೆ ಎಂಟು ಸಾವಿರ ರೂಪಾಯಿ ಬೆಲೆ ಇದೆ. ಒಂದು ಟನ್‌ಗೆ ೧೩ ಸಾವಿರ ಆಗಬೇಕು. ಆಗ ನಾವು ಲಾಭ ಮಾಡಬಹುದು. ಅಸಿಟೇಟ್ ಫ್ಯಾಕ್ಟರಿಯನ್ನು ಕೇಂದ್ರ ಸರ್ಕಾರದ ಸಲಹೆ ಮೇರೆಗೆ ಸೂಚನೆ ಮಾಡಿದ ಮೇರೆಗೆ ನಾವು ಪ್ರಾರಭ ಮಾಡಿದ್ದು. ಆದರೆ ಹನ್ನೆರಡು ಕೋಟಿಗಿಂತಲೂ ಹೆಚ್ಚು ಇವತ್ತು ನಷ್ಟ ಆಗಿದೆ ಇನ್ನು ಸಹಕಾರ ರಂಗದಲ್ಲಿ ಇರತಕ್ಕಂಥ ಸಕ್ಕರೆ ಕಾರ್ಖಾನೆಗಳು. ನಾನು ಮೊನ್ನೆ ಮಹಾರಾಷ್ಟ್ರದಲ್ಲಿ ನೋಡಿದೆ. ಅಲ್ಲಿ ನೀರಾವರಿ ಯೋಜನೆಯೇ ಇಲ್ಲ. ಎಲ್ಲ ಭಾವಿ ಮೂಲಕವೇ. ಇದು ಕೆ. ಎಚ್. ಪಾಟೀಲರಿಗೆ ಗೊತ್ತು. ೨೫ ಸಾವಿರ ಎಕರೆ ವರೆಗೆ ನೀರಾವರಿ ಮಾಡಿದ್ದಾರೆ. ಓಪನ್ ವೆಲ್ ಮತ್ತು ಕೆಲವು ಕಡೆ ಲಿಫ್ಟ್ ಇರಿಗೇಷನ್‌ಗಳಿವೆ. ಮೂರು ಸಾವಿರ ಟನ್ ಕಬ್ಬನ್ನು ಅರೆಯತಕ್ಕಂಥ ಸಹಕಾರಿ ಕಾರ್ಖಾನೆ ಇದೆ. ಅವರು ೩೫೦ ರೂಪಾಯಿ ಕೊಡುತ್ತಾರೆ. ಅಲ್ಲಿ ಪ್ರಾಫಿಟ್ ಮೇಲೆಯೇ ನಡೆಸುತ್ತಾರೆ. ಜನತಾಪಕ್ಷದ ಒಬ್ಬ ಎಂ. ಎಲ್. ಎ. ಅದಕ್ಕೆ ಅಧ್ಯಕ್ಷರು ಅಲ್ಲಿ ಸಾಧ್ಯವಾಗುವುದಾದರೆ ಇಲ್ಲಿ ಏಕೆ ಸಾಧ್ಯವಾಗುವುದಿಲ್ಲ ? ಇದರ ಅರ್ಥ ನಡೆಸತಕ್ಕವರಲ್ಲಿ ಸರಿಯಾದ ಯೋಗ್ಯತೆ ಮತ್ತು ಕ್ಯಾರೆಕ್ಟರ್ ಇಲ್ಲವೆಂದು ಹೇಳಬೇಕಾಗುತ್ತದೆ. ರೈತರಿಗೆ ಹೆಚ್ಚು ಬೆಲೆ ಕೊಡಬೇಕು ಕೊಡಬಾರದು ಎಂದು ಹೇಳುತ್ತಿಲ್ಲ. ಸಂಕೇಶ್ವರದಲ್ಲಿ ಕೊಡುತ್ತಾರೆ. ಅವರು ಸರ್ಕಾರದ ಹಣವನ್ನು ಸಾಲವಾಗಿ ಇಟ್ಟುಕೊಂಡಿಲ್ಲ. ಬ್ಯಾಂಕಿನ ಹಣವನ್ನು ಸಾಲವಾಗಿ ಇಟ್ಟುಕೊಂಡಿಲ್ಲ. ಆದ್ದರಿಂದ ಅವರು ಹೆಚ್ಚು ದರವನ್ನು ಕೊಡಲಿಕ್ಕೆ ಸಾಧ್ಯ ಇದೆ. ಇದರ ಅರ್ಥ, ಬೇರೆ ಸಹಕಾರಿ ಸಕ್ಕರೆ ಕಾರ್ಖಾನೆಗಳು ಸಹ ಕೊಡುವುದಕ್ಕೆ ಸಾಧ್ಯ ಆಗುತ್ತದೆ. ಗೌರಿಬಿದನೂರು, ಹಿರಿಯೂರು ಇಲ್ಲಿ ನಾವು ಏನು ಮಾಡಬೇಕು ? ಆದ್ದರಿಂದ ಈ ಬಗ್ಗೆ ನಾವು ಹೊಸ ತೀರ್ಮಾನವನ್ನು ತೆಗೆದುಕೊಳ್ಳತಕ್ಕದ್ದು ಆಗತ್ಯ ಇದೆ ಎಂದು ನಾನು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಇದೇರೀತಿಯಾಗಿ ತೀರ್ಮಾನ ತೆಗೆದುಕೊಂಡರೆ ಪಬ್ಲಿಕ್ ಸೆಕ್ಟರ್ ಮೇಲೆ ವಿಶ್ವಾಸ ಹೊರಟು ಹೋಗುತ್ತದೆ. ಸರ್ವೈವಲ್ ಆಫ್ ದಿ ಫಿಟ್ಟೆಸ್ಟ್ ಆಗುತ್ತದೆ. ಅವರು ಮಾತ್ರ ಮಾಡಿಕೊಂಡು ಹೋಗುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಕೂಡ ಪಬ್ಲಿಕ್ ಸೆಕ್ಟರ್‌ನಲ್ಲಿ ಅಚಲವಾದ ವಿಶ್ವಾಸವನ್ನು ಇಟ್ಟಿರತಕ್ಕಂಥ ಒಬ್ಬ ಮನುಷ್ಯ. ಆದರೆ ನನ್ನ ವಿಶ್ವಾಸ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತಿದ್ದರೆ,

ಅದರ ಕಾರಣವನ್ನು ದಯವಿಟ್ಟು ತಿಳಿದುಕೊಳ್ಳಿ. ಪಬ್ಲಿಕ್ ಸೆಕ್ಟರ್‌ನಿಂದ ಯಾವಾಗ ಅಬ್ಜೆಕ್ಟೀವ್ಸ್ ಸಫಲವಾಗುತ್ತದೆ, ಆಗ ಸಮರ್ಪಕವಾದ ನ್ಯಾಯ ಸಿಗುತ್ತದೆ. ಸೋಶಿಯಲ್ ಆಬ್ಲಿಗೇಷನ್ ಫುಲ್‌ಫಿಲ್ ಮಾಡಿದೆಯೇ ಇವತ್ತು ಯಾವ ಯಾವ ಪಬ್ಲಿಕ್ ಸೆಕ್ಟರ್‌ಗಳು ಅಡ್ಮಿನಿಸ್ಟರ್ಡ್ ಪ್ರೈಸಸ್ ಹೆಚ್ಚೆಚ್ಚು ಮಾಡಿ ನಷ್ಟವಾಗುತ್ತಿದೆ. ಇದು ಯಾವ ಲಾಭಕ್ಕಾಗಿ ? ಫ್ರಾನ್ಸ್ ದೇಶ ತೆಗೆದುಕೊಳ್ಳಿ. ಅಲ್ಲಿಯು ಸಿಟ್ರನ್ ಕಾರು. ಅದು ಪಬ್ಲಿಕ್ ಸೆಕ್ಟರ್‌ನಲ್ಲಿದೆ. ಯಾವುದೇ ಒಂದು ಖಾಸಗಿ ರಂಗದ ಜೊತೆಗೆ ಪೈಪೋಟಿ ಮಾಡತಕ್ಕದ್ದು ಇದೆ. ಈಗ ನಮ್ಮಲ್ಲಿ ಮಾರುತಿ ಕಾರು ಕಾರ್ಖಾನೆ ಇದೆ. ಅದು ಯಾವುದೇ ಒಂದು ಪ್ರೈವೇಟ್ ಆಟೋಮೊಬೈಲ್ ಇಂಡಸ್ಟ್ರಿ ಜೊತೆ ಪೈಪೋಟಿ ಮಾಡುವ ಸಾಧ್ಯತೆ ಯಲ್ಲಿದೆ. ಪಬ್ಲಿಕ್ ಸೆಕ್ಟರ್‌ನಲ್ಲಿ ಸಾವಿರಾರು ಕೋಟಿ ಬಂಡವಾಳ ಹಾಕಿದ್ದೇವೆ. ಅದು ಯಾರ ದುಡ್ಡು ? ಜನರ ಮೇಲೆ ಭಾರ ಹಾಕಿ ಇನ್ವೆಸ್ಟ್‌ಮೆಂಟ್ ಮಾಡಿದ್ದೇವೆ. ಪ್ರಧಾನ ಮಂತ್ರಿಯವರು ಈ ವಿಚಾರ ವನ್ನು ಯೋಚನೆ ಮಾಡಿದ್ದಾರೆ. ಅವರನ್ನು ಸಮಾಜವಾದಿ ಅಲ್ಲವೆಂದು ಹೇಳುತ್ತೀರಾ ? ನಮ್ಮ ದೇಶದ ೩೫ ಸಾವಿರ ಕೋಟಿ ರೂಪಾಯಿಗಳು ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್‌ನಲ್ಲಿದೆ.

ಶ್ರೀ ಆರ್. ವೆಂಕಟರಾಮಯ್ಯ.— ಅಲ್ಲಿಗೆ ಒಳ್ಳೆಯ ಪರಿಣಿತರನ್ನು ಹಾಕಿ. ಅದು ಬಿಟ್ಟು ಐ. ಎ. ಎಸ್. ಅಧಿಕಾರಿಗಳನ್ನು ಏತಕ್ಕೆ ಹಾಕುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್.— ತಾವು ಬಂಡವಾಳ ಹಾಕುವುದು ನಿಜ, ಉತ್ಪಾದನೆ ಕಡಿಮೆ ಬರುತ್ತಿರುವುದೂ ನಿಜ. ಅದಕ್ಕೆ ಕಾರಣ ಏನು ? ಇಲ್ಲಿ ಇಂಡಿವಿಜ್ಯುಯಲ್ ಆಗಿ ನೋಡಬೇಕಾಗು ತ್ತದೆ ಅದು ಬಿಟ್ಟು ಸಾರಾಸಗಟಾಗಿ ಪಬ್ಲಿಕ್ ಸೆಕ್ಟರ್ ಎಲ್ಲಾ ಸರಿಯಾಗಿ ನಡೆಯುತ್ತಿಲ್ಲ, ಆದರಿಂದ ಎಲ್ಲವನ್ನೂ ಮುಚ್ಚಲೇಬೇಕಾಗುತ್ತದೆ ಎಂಬ ತಮ್ಮ ಧೋರಣೆ ಸರಿಯಾದುದಲ್ಲ. ತಪ್ಪುಗಳನ್ನು ಒಂದೊಂದಾಗಿ ಕಂಡುಹಿಡಿಯಿರಿ ನಾವು ಕೂಡ ಸಹಕರಿಸುತ್ತೇವೆ ಆಗ ಇವುಗಳನ್ನು ಎಷ್ಟು ದೂರ ಸಾಧ್ಯವೋ ಅಷ್ಟು ಮುಂದುವರಿಸುವುದಕ್ಕೆ ಸಾಧ್ಯತೆ ಆಗಬಹುದು. ಆದರೆ ನಿಮ್ಮ ತೀರ್ಮಾನ ಮಾತ್ರ ಸರಿಯಾದುದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಈಗ ನಾನು ನಮ್ಮ ಹತ್ತಿರದ ಸ್ನೇಹಿತರಾದಂಥ ಮಾನ್ಯ ಕೃಷ್ಣನ್‌ರವರಿಗೆ ಇಷ್ಟು ಹೇಳುವುದಕ್ಕೆ ಬಯಸುತ್ತೇನೆ. ಯಾವುದೇ ಒಂದು ತತ್ವವನ್ನು ನಾವು ಒಂದು ಡಾಗ್ಮಾ ಆಗಿ, ಕನ್‌ವರ್ಟ್ ಮಾಡಕೂಡದು. ೩೦ ವರ್ಷದ ಹಿಂದೆ ಸೋವಿಯತ್ ಯೂನಿಯನ್ ಯಾವರೀತಿ ಇತ್ತೋ, ಇವತ್ತು ಆ ರೀತಿ ಇಲ್ಲ. ಅದೇರೀತಿ ೫ ವರ್ಷದ ಹಿಂದೆ ಚೈನಾದಲ್ಲಿ ಯಾವ ರೀತಿ ಇತ್ತೊ, ಇವತ್ತು ಆ ರೀತಿ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಅಲ್ಲಿ ಮೂಲಭೂತ ಬದಲಾವಣೆ ಏನಿದೆ ?

ಶ್ರೀ ರಾಮಕೃಷ್ಣ ಹೆಗಡೆ.— ಮೂಲಭೂತ ಬದಲಾವಣೆ ಏನಿದೆ ಎಂದರೆ, ಅಮೇರಿಕಾದ ಇನ್‌ವೆಸ್ಟ್‌ಮೆಂಟ್ ಈ ಎರಡು ದೇಶಗಳಲ್ಲಿಯೂ ಆಗುತ್ತಿದೆ. ಫಿಯೆಟ್ ಕಾರ್ಖಾನೆ ರಷ್ಯಾದಲ್ಲಿಯೂ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಸೋಷಿಯಲಿಸ್ಟ್ ಎಕಾನಮಿಯಲ್ಲಿ ಟರ್ನ್‌ಕೀ ಬೇಸಿಸ್‌ನಲ್ಲಿ ಇವರು ಆ ಪ್ರಾಜೆಕ್ಟ್‌ಗಳನ್ನು, ಅಲ್ಲಿ ತೆಗೆದುಕೊಂಡರು. ಅದನ್ನು ಮೂಲಭೂತವಾಗಿ ಬದಲಾವಣೆ ಎಂದು ನೀವು ಹೇಳುತ್ತೀರಿ, ಇದು ನ್ಯಾಯವೇ ? ಟರ್ನ್‌ಕೀ ಬೇಸಿಸ್ ಮೇಲೆ ಕೊಂಡುಕೊಂಡು ಅವರ ರಾಜ್ಯದಲ್ಲಿ ಸ್ಥಾಪನೆ ಮಾಡಿಕೊಂಡರು, ಆದೇರೀತಿ ನೀವೂ ಮಾಡಿ. ನಾನು ಬೇಡ ಎನ್ನುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ನಾನು ಟೀಕೆ ಮಾಡುತ್ತಾ ಇಲ್ಲ. I am a great admirer or Comrade Gordachev. ಅವರು ನಿಮ್ಮ ಅಮೇರಿಕನ್ ಪ್ರಸಿಡೆಂಟ್‌ಗೆ ಸರಿಯಾದ ಮ್ಯಾಚಿಂಗ್ ಮ್ಯಾನ್. ಏತಕ್ಕೆ ದೃಷ್ಟಿ ಬದಲಾವಣೆ ಆಯಿತು.

ಶ್ರೀ ಬಿ. ಬಸವಲಿಂಗಪ್ಪ.— ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್ ಬಗ್ಗೆ......

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.— ಪಾಲಿಸಿ ಚೇಂಜ್ ಆಗಿಲ್ಲವೆಂದು ಹೇಳಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ — ಸೋಷಿಯಲಿಸ್ಟ್ ಎಕಾನಮಿ ಏನಿದೆ, ಅದನ್ನು ಬೇಸಿಕ್ ಆಗಿ ಚೇಂಜ್ ಮಾಡಿಲ್ಲ, ಮೊದಲು ರಿಜಿಡಿಟಿ ಇತ್ತು, ಈಗ ಅದನ್ನು ಚೇಂಜ್ ಮಾಡಿದ್ದಾರೆ, ಎರಡು ಕಡೆ ಬದಲಾವಣೆ ಮಾಡಿದ್ದಾರೆ, ಅದನ್ನು ನಾವು ತಿಳಿದುಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಮುಖ್ಯ ಮಂತ್ರಿಗಳು, ಒಂದು ಬುನಾದಿಯನ್ನು ಅಲ್ಲಾಡಿಸತಕ್ಕ ಹೇಳಿಕೆಯನ್ನು ಕೊಡುವುದಕ್ಕೆ ಹೊರಟಿದ್ದಾರೆ. ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್ ಸರಿಯಾಗಿ ಕೆಲಸ ಮಾಡದೇ ಇರುವುದಕ್ಕೆ ಕಾರಣ ಕಂಡುಹಿಡಿಯತಕ್ಕುವುದನ್ನು ಬಿಟ್ಟು, ಆ ತತ್ವ ಸರಿಯಿಲ್ಲ, ಸಿದ್ಧಾಂತ ಸರಿಯಿಲ್ಲ ಎಂದು ಹೇಳುತ್ತಾ, ಪ್ರಚಾರಕ್ಕೆ ಹೊರಟಿರುವುದು ಸರಿಯಿಲ್ಲ. ಇವರು ಎಂಗ್‌ಟರ್ಕ್ ಆಗಿದ್ದಾಗ ಪಬ್ಲಿಕ್ ಸೆಕ್ಟರ್ ಹಾಗೂ ಪ್ರೈವೇಟ್ ಸೆಕ್ಟರ್ ಬಗ್ಗೆ ಜಗಳ ಬಂದಾಗ, ನೀವು ಪಬ್ಲಿಕ್ ಸೆಕ್ಟರ್ ಬೆಳೆಯಬೇಕೆಂದು ಹೇಳಿದಿರಿ. ಈಗ ತಾವು ಅದನ್ನು ಬದಲಾಣೆ ಮಾಡುತ್ತೀದ್ದಿರಲ್ಲ......

ಅಧ್ಯಕ್ಷರು. — ಬಸವಲಿಂಗಪ್ಪನವರೇ, ಸಾಕು ಕುಳಿತುಕೊಳ್ಳಿ......

ಶ್ರೀ ಎಂ ಎಸ್. ಕೃಷ್ಣನ್.— ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಪ್ರತ್ಯೇಕವಾಗಿ ಎಲ್ಲರನ್ನೂ ಕರೆಯಿರಿ.

ಶ್ರೀ ಆರ್ ವೆಂಕಟರಾಮಯ್ಯ.— ನಿಮ್ಮ ಬಜೆಟ್ ಭಾಷಣದಲ್ಲಿ "ಈ ನಷ್ಟವನ್ನು ಶಾಶ್ವತವಾಗಿ ಸಹಿಸಲು ಸರ್ಕಾರಕ್ಕೆ ಸಾಧ್ಯವಿಲ್ಲದಿರುವುದರಿಂದ ಬಂಡವಾಳವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸಾರಾಸಾರ ವಿಚಾರ ಮಾಡುತ್ತಿದ್ದೇವೆ." ಎಂದು ಹೇಳಿದ್ದಿರಿ. ಇದನ್ನು ವಾಪಸ್ ತೆಗೆದುಕೊಳ್ಳಬೇಕು ...

ಅಧ್ಯಕ್ಷರು.— ನೀವು ಕುಳಿತುಕೊಳ್ಳಿ, ನೀವು ಹೇಳುವುದನ್ನು ಅವರು ಕೇಳಬೇಕೋ ಅಥವಾ ಅವರು ಹೇಳುವುದನ್ನು ನೀವು ಕೇಳಬೇಕೋ ?

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಮೊಯಿಲಿಯವರು ಮತ್ತೊಂದು ಮಾಹಿತಿಯನ್ನು ಈ ಸದನಕ್ಕೆ ಕೊಟ್ಟರು. ಏನೆಂದರೆ, ಹಿಂದೆ ಗ್ರಾಮ ಪಂಚಾಯ್ತಿಗಳಿಗೆ ೪೦ ರಿಂದ ೫ ಲಕ್ಷ ರೂಪಾಯಿ ಸಿಗುತ್ತಿತ್ತು ಎಂದು ಒಂದೊಂದು ಗ್ರಾಮ ಪಂಚಾಯ್ತಿಗೂ ೫ ಲಕ್ಷ ರೂಪಾಯಿ ಸಿಗುತ್ತಿತ್ತು ಎಂದು. ಒಂದು ಸಣ್ಣ ಲೆಕ್ಕ ಹಾಕಿಕೊಳ್ಳೋಣ. ನಮ್ಮಲ್ಲಿ ೧೦ ಸಾವಿರ ಗ್ರಾಮ ಪಂಚಾಯ್ತಿಗಳಿವೆ ಎಂದು ಇಟ್ಟುಕೊಂಡರೂ, ಒಂದು ಗ್ರಾಮ ಪಂಚಾಯ್ತಿಗೆ ಒಂದು ವರ್ಷಕ್ಕೆ ೫ ಲಕ್ಷ ಎಂದು ಇಟ್ಟುಕೊಂಡರೆ, ಒಟ್ಟು ೫೦೦ ಕೋಟಿ ಆಯಿತು. ಆದರೆ ಆ ಕಾಲದಲ್ಲಿ ಸ್ಟೇಟ್ ಬಜೆಟ್‌ನಲ್ಲಿ ೫೦೦ ಕೋಟಿಯೇ ಇರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.— ನಾನು ಆ ರೀತಿ ಹೇಳಿಲ್ಲ. ಎಲ್ಲಾ ಪ್ಲಾನ್‌ಗಳು, ಎಲ್ಲಾ ಸ್ಕೀಮ್ಸ್‌ಗಳದೂ ಸೇರಿ ಅಷ್ಟು ಸಿಗುತ್ತಿತ್ತು. ಬೇಕಾದರೆ ಡಿಪಾರ್ಟ್‌ಮೆಂಟ್ ಪರವಾಗಿ ತೋರಿಸುತ್ತೇನೆ. ಎನ್. ಆರ್. ಇ. ಪಿ. ಆರ್. ಎಲ್. ಇ. ಜಿ. ಪಿ. ಕಾರ್ಯಕ್ರಮಗಳು, ಪ್ಲಾನ್ ಮತ್ತು ನಾನ್ ಪ್ಲಾನ್ ಇವೆಲ್ಲಾ ಸೇರಿ, ಒಂದು ಪಂಚಾಯ್ತಿಗೆ ೫ ರಿಂದ ೧೦ ಲಕ್ಷ ಖರ್ಚು ಮಾಡಿದಂಥ ಪಂಚಾಯ್ತಿಗಳನ್ನು ಹಿಡಿದುಕೊಟ್ಟರೆ ತಾವು ಏನು ಮಾಡುತ್ತೀರಿ ? I am referring to Panchayats.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಬಜೆಟ್ ಮೇಲೆ ಪ್ರತಿಕ್ರಿಯೆ ವ್ಯಕ್ತಪಡಿಸುವಾಗ ಹೆಚ್ಚಾಗಿ, ಹೊಸದಾಗಿ ನಾವೇನು ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಪ್ರಯತ್ನ ಮಾಡಿದ್ದೇವೆ, ಅದರ ಬಗ್ಗೆ ಟೀಕೆ ಬಂದಿರತಕ್ಕಂಥದ್ದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಹೆಚ್ಚು ಕರಭಾರವನ್ನು ಹಾಕಿರಲಿಲ್ಲ. ಟರ್ನ್‌ಓವರ್ ಟ್ಯಾಕ್ಸ್ ಹೆಚ್ಚು ಮಾಡಿರುವುದರ ಬಗ್ಗೆ ವರ್ತಕರಲ್ಲಿ ಅಸಮಾಧಾನ ಇದೆ. ಆದರೆ ಇದನ್ನು ಏತಕ್ಕೆ ಮಾಡಬೇಕಾಯಿತು ? ಇದಕ್ಕೆ ಎರಡು ಕಾರಣ ಇದೆ. ಸಂಪನ್ಮೂಲವನ್ನು ಸ್ವಲ್ಪ ಹೆಚ್ಚು ಮಾಡಬೇಕೆಂಬುದು ಒಂದು. ಎರಡನೆಯದು ಹೋದಸಲ ನಾವು ಏನು ರಿಯಾಯಿತಿ ತೋರಿಸಿದ್ದೆವು, ಆ ರಿಯಾಯಿತಿಯನ್ನು ಅನೇಕ ವರ್ತಕರು ಮತ್ತು ಟ್ರೇಡರ್ಸ್ ದುರುಪಯೋಗ ಮಾಡಿಕೊಂಡರು. ಟ್ರಾನ್ಸ್‌ಫರ್ ಟರ್ನ್‌ಓವರ್ ಟ್ಯಾಕ್ಸ್ ಮಿತಿಯನ್ನು ನಾವು ೧೫ ಲಕ್ಷ ರೂಪಾಯಿಗೆ ಹೆಚ್ಚಿಸಿದ್ದೆವು. ವರ್ತಕರು ತಮ್ಮ ಟರ್ನ್‌ಓವರ್

೧೫ ಲಕ್ಷ ರೂಪಾಯಿಗಿಂತ ಸ್ವಲ್ಪ ಹೆಚ್ಚಿದರೆ, ತಮ್ಮ ಫರ್ಮ್‌ನ್ನು ತಮ್ಮ ವ್ಯವಹಾರವನ್ನು ಇಬ್ಭಾಗ ಇಲ್ಲವೇ ಮೂರು ಭಾಗ ಮಾಡುತ್ತಾರೆ, ಈ ಕಾನೂನಿಂದ ತಪ್ಪಿಸಿಕೊಳ್ಳಲಿಕ್ಕೆ. ಆದುದರಿಂದ ನಾವು ಈ ಸಲ, ಹಿಂದೆ ಕೊಟ್ಟಂತಹ ಸವಲತ್ತನ್ನು ವಾಪಸ್ ತೆಗೆದುಕೊಳ್ಳತಕ್ಕ ಪ್ರಶ್ನೆ ಬಂತು. ಸೇಲ್ಸ್ ಟ್ಯಾಕ್ಸನ್ನು ಬೇರೆ ಬೇರೆ ವಸ್ತುಗಳ ಮೇಲೆ ಹಾಕುವಾಗಲೂ ಕೂಡಾ, ಸಾಕಷ್ಟು ನಮ್ಮ ಟ್ರೇಡ್ ಡೈವರ್ಟ್ ಆಗಕೂಡದು, ಆದರಿಂದ ಬರತಕ್ಕ ಆದಾಯ ಹೆಚ್ಚಾಗಬೇಕು. ಆದರೂ ಬಡವರ ಮೇಲೆ ಹೆಚ್ಚಿನ ಭಾರ ಬೀಳಕೂಡದು, ಈ ಮೂರು ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಾವು ಈ ತೀರ್ಮಾನ ಮಾಡಿದ್ದೇವೆ. ಆದರೂ ಈ ಬಜೆಟ್‌ನಲ್ಲಿ ಏನೂ ಇಲ್ಲ ಎಂದು ಹೇಳತಕ್ಕ ಮಾತನ್ನು ಅನೇಕ ಜನ ಹೇಳಿದ್ದಾರೆ. ಅದಕ್ಕೆ ನಾನು ವಿಷಾದ ಪಡುತ್ತೇನೆ. ಈ ಬಜೆಟ್‌ನಲ್ಲಿ ಹೊಸದಾಗಿ ನಾವು ಪ್ರಾರಂಭ ಮಾಡಬೇಕೆಂದು ಹೇಳತಕ್ಕಂಥ ಅನೇಕ ಯೋಜನೆಗಳು ಇವೆ. ಒಂದು ಹೊಸ ಆರೋಗ್ಯ ವಿಮಾ ಯೋಜನೆಯನ್ನು ಮಾಡಲಾಗುವುದೆಂದು ಹೇಳಿದ್ದೇನೆ. ಇದರ ಬಗ್ಗೆ ಯಾರೊಬ್ಬರೂ ಒಂದು ಮಾತನ್ನೂ ಹೇಳಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದನ್ನು ಮಾಡುವುದರಿಂದ ಬರೀ ದುರುಪಯೋಗವಾಗುತ್ತದೆ ಎಂದು ನಾನು ಹೇಳಿದೆ. ಅದಕ್ಕಿಂತ ಮುಖ್ಯವಾಗಿ ಇವತ್ತು ಮೂತ್ರಪಿಂಡಗಳಿಗೆ, ಹೃದಯ ಚಿಕಿತ್ಸೆಗೆ ಸಂಬಂಧಪಟ್ಟಂತೆ, ಕ್ಯಾನ್ಸರ್‌ಗೆ ಸಂಬಂಧಪಟ್ಟಂತೆ ಮಾತ್ರ ವಿಮೆ ಮಾಡಿದರೆ ಅನುಕೂಲವಾಗುತ್ತದೆ. ಈ ದೇಶದಲ್ಲಿ ಶ್ರೀಸಾಮಾನ್ಯನಿಗೆ ಸಿಗುವಂತಹ ಯೋಜನೆ ಮಾಡಿ. It will be more meaningful.

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ದುರುಪಯೋಗ ಆಗದಹಾಗೆ ನೋಡಿಕೊಳ್ಳುತ್ತೇವೆ. ಒಂದು ಷರತ್ತನ್ನೂ ಕೂಡಾ ಹಾಕುತ್ತೇವೆ. ಇವರಲ್ಲಿ ಯಾರು ಉಪಯೋಗ ಪಡೆಯುತ್ತಾರೆ, ಅವರಿಗೆ ಇಂತಿಷ್ಟಕ್ಕಿಂತ ಹೆಚ್ಚು ಮಕ್ಕಳು ಇರಕೂಡದು ಎಂದು ಷರತ್ತು ಹಾಕುತ್ತೇವೆ. ಅದನ್ನು ನಾನು ಆಗಲೇ ಹೇಳಿದ್ದೇನೆ. ಆಮೇಲೆ ಫಾಡರ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡುತ್ತೇವೆಂದು...

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ಗೊತ್ತಿಲ್ಲದೆ ಮೊದಲೇ ಮಕ್ಕಳು ಜಾಸ್ತಿ ಮಾಡಿಕೊಂಡು ಬಿಟ್ಟಿದ್ದರೆ ಅವರ ಪರಿಸ್ಥಿತಿ ಏನು ?

ಶ್ರೀ ರಾಮಕೃಷ್ಣ ಹೆಗಡೆ.—ಫಾಡರ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದೇನೆ. ಇಡೀ ಭಾರತ ದೇಶದಲ್ಲಿ ಮೊಟ್ಟಮೊದಲು ಇದನ್ನು ಯೋಚನೆ ಮಾಡುತ್ತಿರುವ ರಾಜ್ಯ ನಮ್ಮದು. ಫಾಡರ್ ಬ್ಯಾಂಕ್ ಸ್ಥಾಪನೆ ಮಾಡಬೇಕೆಂದು ಹೇಳತಕ್ಕದ್ದು ಹಾಗೂ ಇನ್ನೂ ಅನೇಕ ಹೊಸ ಯೋಜನೆಗಳು ಇದ್ದರೂ ಕೂಡಾ ಅದರ ಕಡೆಗೆ ಮಾನ್ಯ ಸದಸ್ಯರು ಲಕ್ಷ್ಯ ಸಿಗದೇ ಹೋಗಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಇದನ್ನು ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಕೊಡಬಹುದು.

ಶ್ರೀ ಕೆ. ಹೆಚ್. ಪಾಟೀಲ್.—ಇನ್ನೊಬ್ಬ ಐ.ಎ.ಎಸ್. ಅಧಿಕಾರಿ ಯಾರಾದರೂ ಹೆಚ್ಚಾಗಿದ್ದಾರೆ ಎಂದರೆ ಇದಕ್ಕೆ ನೇಮಿಸುವುದಕ್ಕೆ ಅಡ್ಡಿ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಸೆಂಟರ್‌ನಲ್ಲಿ ವೇಸ್ಟ್ ಲ್ಯಾಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆಯಲ್ಲ, ಅದರ ಚೇರ್ಮನ್ ಶ್ರೀಮತಿ ಕಮಲ ಚೌಧರಿಯವರು ಇಲ್ಲಿಗೆ ಬಂದಾಗ ನಾನು ಅವರ ಜೊತೆ ಚರ್ಚೆ ಮಾಡಿದೆ. ಇದನ್ನು ಮಾಡಿದರೆ ಎರಡು ಕೋಟಿ ರೂಪಾಯಿ ಕೊಡುತ್ತೇವೆ ಎಂದು ಹೇಳಿದುದರಿಂದ ಇದನ್ನು ಸ್ಥಾಪನೆ ಮಾಡುತ್ತೇವೆ. ಇದರ ಆಗತ್ಯ ಇದೆ. ಹೋದಸಲ ಬರಗಾಲ ಬಂದಾಗ, ಹರ್ಯಾಣ, ಪಂಜಾಬ್, ಬೇರೆ ಬೇರೆ ಕಡೆಯಿಂದ ಮೇವನ್ನು ತರಿಸಿದ್ದೇವೆ. ಅದನ್ನು ತರಿಸತಕ್ಕಂಥ ಪ್ರಸಂಗ ಬಂತು. ಅಕಸ್ಮಾತ್ತಾಗಿ ಇಂತಹ ಪರಿಸ್ಥಿತಿ ಉಂಟಾದರೆ ನಮ್ಮಲ್ಲಿ ಇದ್ದಂಥ ಮೇವನ್ನು ದನಕರುಗಳಿಗೆ ಸಂಗ್ರಹಿಸಿಡಬಹುದೆಂಬುದೇ ಅದರ ಉದ್ದೇಶ. ಸಾಮಾನ್ಯವಾಗಿ ಮಾನ್ಯ ಸದಸ್ಯರು ಇವೊತ್ತಿನ ದಿವಸ ಕೇಳಿದ ವಿಷಯಗಳಿಗೆ ಉತ್ತರ ಕೊಟ್ಟಿದ್ದೇನೆ. ನಾನು ಡೀಟೈಲ್ ಆಗಿ ಉತ್ತರ ಹೇಳಿಲ್ಲ. ಏಕೆಂದರೆ ಇಲಾಖಾ ಬೇಡಿಕೆಗಳು ಈ ಸದನದ ಮುಂದೆ ಬಂದಾಗ ಸಂಬಂಧಪಟ್ಟ ಖಾತೆಗಳನ್ನು ನಿರ್ವಹಿಸತಕ್ಕಂಥ ಮಂತ್ರಿಗಳು ಮಾನ್ಯ ಸದಸ್ಯರ ಟೀಕೆಗಳಿಗೆ ಉತ್ತರ ಕೊಡುತ್ತಾರೆ ಎಂದು ನಂಬಿದ್ದೇನೆ. ಇಷ್ಟು ಹೊತ್ತಿನ ತನಕ ಸಂಯಮದಿಂದ ಹಾಗೂ ಶಾಂತಿಯಿಂದ ನನ್ನ

ಭಾಷಣವನ್ನು ಕೇಳಿದ್ದಕ್ಕಾಗಿ ತಮಗೆಲ್ಲಾ ವಂದನೆಗಳನ್ನು ಸಲ್ಲಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಏನಾದರೂ ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದರ ಬಗ್ಗೆ ಈಗ ನಾನು ಏನೂ ಹೇಳುವುದಿಲ್ಲ.

ಶ್ರೀಮತಿ ಕೆ ಎಸ್ ನಾಗರತ್ನಮ್ಮ.—ಇವರು ಇರಿಗೇಷನ್ ಬಗ್ಗೆ ಮಾತನಾಡುತ್ತಾ ಇಷ್ಟು ಕೋಟಿ ಜಾಸ್ತಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇವರು ಎಷ್ಟು ಕೋಟಿ ಜಾಸ್ತಿ ಮಾಡಿದ್ದಾರೆ. ಕಾವೇರಿ ಯೋಜನೆಯಲ್ಲಿ ೧೦೦ ಕೋಟಿ ಜಾಸ್ತಿ ಮಾಡಿದ್ದೇವೆ ಎಂದು ಹೇಳಿದರು. ಇನ್‌ಫ್ಲೇಷನ್ ಇನ್‌ಫ್ಲೇಷನ್ ಎಂದು ಹೇಳುತ್ತೀರಿ, ನಾನು ಕೇಳಿರುವುದು ಎಷ್ಟು ಪರ್ಸೆಂಟ್ ಜಾಸ್ತಿ ಆಗಿದೆ ಎಂದು ಅದನ್ನು ದಯವಿಟ್ಟು ಹೇಳಬೇಕು. ಅದೇ ಈಗ ಹೇಳಿದ್ದೆನಲ್ಲ ಶ್ರೀ ವೀರೇಂದ್ರ ಹೆಗಡೆಯವರ ಪ್ಲಾನ್ ಏನು ಅವರು ಒಬ್ಬೊಬ್ಬ ರೈತನಿಗೆ ಏನು ಏನು ಆಗಬೇಕು ಎಂದು ಸಮಗ್ರ ಸೌಭಾಗ್ಯ ನೀಡುವ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಕೆಲವು ವಿಲೇಜ್‌ಗಳನ್ನು ಇದಕ್ಕೆ ಅಳವಡಿಸಿಕೊಂಡು ಪ್ಲಾನ್‌ಗಳನ್ನು ಕ್ಯಾರಿಔಟ್ ಮಾಡುತ್ತೇವೆಂದೂ, ಅಡಾಪ್ಟ್ ಮಾಡುತ್ತೇವೆಂದು ಹೇಳಿದ್ದೀರಿ. ಐದು ವರ್ಷಗಳಿಗೆ ಪ್ಲಾನ್ ಹಾಕಿಕೊಂಡು ಈ ಯೋಜನೆಯನ್ನು ಕ್ಯಾರಿ ಔಟ್ ಮಾಡಬೇಕು. ನಿಮ್ಮ ಬಜೆಟ್ ಪ್ರಕಾರ ಇದಕ್ಕೆ ಸರ್ವೆ ಮಾಡಿ ಪ್ರೊಸೆಸ್ ಮಾಡುವುದಕ್ಕೆ ಸುಮಾರು ೧೫ ವರ್ಷಗಳು ಬೇಕಾಗುತ್ತದೆ. ಆದಷ್ಟು ಜಾಗ್ರತೆಯಾಗಿ ಮಾಡುವುದಕ್ಕೆ ನೀವು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ವಿಷಯವನ್ನು ಅನೇಕ ಜನ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಂದ ನಾವು ಏನು ನಿರೀಕ್ಷೆ ಮಾಡಿದ್ದೇವೆಂದರೆ ಬಹಳಷ್ಟು ರಿಲೀಫ್ ಕೊಡುತ್ತಾರೆ ಎಂದು, ಟೀ ಕಾಫಿ, ಸೈಕಲ್. ಟಿ.ವಿ. ಸೋಪ್ ಎಲ್.ಪಿ.ಜಿ. ಗ್ಯಾಸ್, ಎಡಿಬಲ್ ಆಯಿಲ್, ಪಲ್ಸಸ್ ಇತ್ಯಾದಿ ವಸ್ತುಗಳ ಮೇಲೆ ಟ್ಯಾಕ್ಸ್ ಜಾಸ್ತಿ ಹಾಕಿರುವುದರಿಂದ ಇದು ಬಡವರಿಗೆ ನೇರವಾಗಿ ತೊಂದರೆಯಾಗಿದೆ. ಮತ್ತು ಎಕ್ಸೈಜ್ ತೆರಿಗೆಗಳ ಹೆಚ್ಚಳದಿಂದ ಕೂಡ ಬಡವರ ಮೇಲೆ ಭಾರ ಬೀಳುತ್ತದೆ, ಇದರಿಂದ ಬಡವರ ಮೇಲೆ ಹೆಚ್ಚಿನ ಹೊಡೆತ ಬೀಳುತ್ತದೆ. ಇಂತಹ ಜನರಿಗೆ ಸಾಕಷ್ಟು ರಿಲೀಫ್ ಸಿಗುತ್ತದೆಂದು ನಾವು ನಿರೀಕ್ಷೆ ಮಾಡಿದ್ದೆವು ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ ಈ ಹೆಚ್ಚಳವನ್ನು ಕೈ ಬಿಡಿ ಎಂದು ಹೇಳಿದ್ದರು. ಆದರೆ ತಾವು ತಮ್ಮ ಉತ್ತರದಲ್ಲಿ ಇದರ ಬಗ್ಗೆ ಏನೇನೂ ಹೇಳಲಿಲ್ಲ ತಮಗೆ ಸಂಪನ್ಮೂಲಗಳು ಜಾಸ್ತಿ ಬೇಕು. ಅದಕ್ಕಾಗಿ ನಾನು ಇದನ್ನು ಹೆಚ್ಚು ಮಾಡುತ್ತೇನೆಂದು ಹೇಳಿದಿರಿ ಇದರ ಬಗ್ಗೆ ಸ್ಪಷ್ಟವಾಗಿ ರಿಲೀಫ್ ಕೊಡುವ ಬಗ್ಗೆ ಹೇಳಲಿಲ್ಲ, ಇದು ಒಂದು.

ಎರಡನೆಯದಾಗಿ, ನಿನ್ನೆ, ಮೊನ್ನೆ ಮತ್ತು ಬಜೆಟ್ ಅಧಿವೇಶನದಲ್ಲಿ ಮಾತನಾಡಿದವರೆಲ್ಲರೂ ಕೂಡ ಈ ಎಕ್ಸೈಜ್ ಡ್ಯೂಸ್ ಬಗ್ಗೆ ಪ್ರಸ್ತಾಪ ಮಾಡಿದರು. ಸುಮಾರು ೩೫–೩೭ ಕೋಟಿ ರೂಪಾಯಿಗಳು ಇವೊತ್ತಿನ ದಿವಸ ಸರ್ಕಾರಕ್ಕೆ ಬರಬೇಕಾದ ಬಾಕಿ ಇದೆ, ಯಾರಿಗೆ ಇದನ್ನು ಕೊಡತಕ್ಕ ಶಕ್ತಿ ಇದೆಯೋ ಅವರಿಂದ ವಸೂಲಿ ಮಾಡಬೇಕು. ಇವೊತ್ತಿನ ದಿವಸ ಕೊಡತಕ್ಕಂಥಹ ಶಕ್ತಿ ಇರುವವರು ಕೂಡ ಕೊಡುತ್ತಾ ಇಲ್ಲ. ಆದ್ದರಿಂದ ತಾವು ಒಂದು ಕಾರ್ಪೊರೇಷನ್ ಮಾಡಿ. ಎಕ್ಸೈಜ್ ಆಕ್ಷನ್ ಮಾಡಬೇಕು. ಆಕ್ಷನ್ ಮಾಡಿ ಇದನ್ನು ಡಿಸ್ಟ್ರಿಕ್ಟ್ ವೈಸ್. ಹಾಗೂ ತಾಲ್ಲೂಕ್ ವೈಸಾಗಿ ಬಿಡಬೇಕು. ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್‌ರವರೇ ಇದನ್ನು ಮಾಡಬಹುದು ಏಕೆಂದರೆ ಸ್ಟೇಟ್ ವೈಸ್ ಕಾರ್ಪೊರೇಷನ್ ಮಾಡಿ ಯಾರು ಇದನ್ನು ವಹಿಸಿಕೊಳ್ಳಬೇಕೋ ಅವರು ಇದನ್ನು ವಹಿಸಿಕೊಳ್ಳುವಂತೆ ಮಾಡುವುದು ಸೂಕ್ತ. ಸೌತ್ ಕೆನರಾದಲ್ಲಿ ಇರುವಂತೆ ಶಾಪ್ ವೈಸ್ ಮಾಡಬೇಕು. ಇದರಿಂದ ಹೆಚ್ಚಿನ ಇನ್‌ಕಮ್ ಬರುವುದಕ್ಕೆ ಅವಕಾಶವಾಗುತ್ತದೆ. ಡಿಸ್ಟ್ರಿಕ್ಟ್ ವೈಸ್, ತಾಲ್ಲೂಕ್ ವೈಸ್ ಕೈ ಬಿಟ್ಟು ಶಾಪ್ ವೈಸ್ ಮಾಡಿ. ಅನೇಕ ಬಡ ಜನರು ಇದರಲ್ಲಿ ಪಾರ್ಟಿಸಿಪೇಟ್ ಮಾಡುತ್ತಾರೆ. ತಮ್ಮ ತಮ್ಮ ಕೈಲಾದಷ್ಟು ಮಟ್ಟಿಗೆ ಹಣವನ್ನು ಖರ್ಚು ಮಾಡುತ್ತಾರೆ. ಇದು ಇಲ್ಲದೆ ಇದ್ದರೆ ಮಧ್ಯವರ್ತಿ ಜನರು ಇದರಿಂದ ಹೆಚ್ಚಿನ ಉಪಯೋಗ ಪಡೆಯುತ್ತಾರೆ. ಎರಡನೆಯದಾಗಿ ಇದರಿಂದ ಆದಾಯ ಕೂಡ ಕಡಿಮೆಯಾಗುತ್ತದೆ. ಶಾಪ್ ವೈಸ್, ಅರಾಕ್ ಆಕ್ಷನ್ ಮಾಡಿದರೆ ತಮಗೆ ಇದರಿಂದ ಹೆಚ್ಚಿನ ಆದಾಯ ಕೂಡ ಬರುತ್ತದೆ. ಇದರ ಬಗ್ಗೆ ಕೂಡ ತಾವು ಆಲೋಚನೆ ಮಾಡಬೇಕು.

ನಾಲ್ಕನೆಯದಾಗಿ, ಯು.ಕೆ.ಪಿ. ಮತ್ತು ಕಾವೇರಿ ಬೇಸಿನ್ ಬಗ್ಗೆ ತಾವು ಈಗಾಗಲೇ ಹೇಳಿದ್ದೀರಿ. ತಾವು ಹೇಳಿದಿರಿ, ಮತ್ತು ಮಾನ್ಯ ಮೊಯಿಲಿಯವರ ಕಾಲದಲ್ಲಿ ಇಷ್ಟು ಕೊಟ್ಟಿದ್ದರು. ನಮ್ಮ ಕಾಲದಲ್ಲಿ ಇದಕ್ಕೆ ೨೫ ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ ಎಂದು ತಾವು ಹೇಳಿಕೊಂಡಿದಿರಿ.

ತಮ್ಮ ಕಾಲದಲ್ಲಿ ನಾನ್‌ಪ್ಲಾನ್‌ನಲ್ಲಿ ೨೫ ಕೋಟಿ ರೂಪಾಯಿಗಳನ್ನು ಮತ್ತು ಪ್ಲಾನ್‌ನಲ್ಲಿ ೨೫ ಕೋಟಿ ರೂ. ಕೊಟ್ಟಿದ್ದೇವೆ. ಎನ್ನತಕ್ಕಂಥ ಮಾತನ್ನು ಇವತ್ತು ಹೇಳಿದರು. ಆದರೆ ನೀವು ಇವತ್ತು ಕೇವಲ ೨೫ ಕೋಟಿರೂ.ಗಳನ್ನು ಕೊಟ್ಟಿದ್ದೀರಿ, ನನಗೆ ಬೇಕಾದದ್ದು ಏನೆಂದರೆ ಅಪ್ಪರ್‌ಕೃಷ್ಣ ಪ್ರಾಜೆಕ್ಟ್, ಕೃಷ್ಣಾ ಬೇಸಿನ್ ಪ್ರಾಜೆಕ್ಟ್‌ಗಳಿಗೆ ಎಷ್ಟು ಹಣ ಒದಗಿಸಿದ್ದೀರಿ? ಕಾವೇರಿ ಬೇಸಿನ್ ಪ್ರಾಜೆಕ್ಟ್‌ಗಳಿಗೆ ಎಷ್ಟು ಹಣ ಒದಗಿಸಿದ್ದೀರಿ? ಅಲ್ಲಿರತಕ್ಕಂಥ ಸುಮಾರು ೧೨ ಸಾವಿರ ಕೋಟಿ ರೂಪಾಯಿಗಳಿಂದ ನೂರು ಕೋಟಿ ರೂಪಾಯಿಗಳನ್ನು ಸಮೀಪ ಸಮೀಪ ಒದಗಿಸಿದ್ದೇವೆ. ಅಲ್ಲದೆ ನಾಲ್ಕು ಸಾವಿರ ಕೋಟಿ ರೂ.ಗಳ ಯೋಜನೆಗಳಿಗೆ ತಾವು ಎಷ್ಟು ಹಣ ಕೊಟ್ಟಿದ್ದೀರಿ ಎನ್ನತಕ್ಕಂಥದ್ದನ್ನು ಹೇಳಬೇಕು. ತಾವು ಯಾವಾಗಲೂ ನೂರು ಕೋಟಿ ರೂಪಾಯಿ ಕೊಟ್ಟರೆ ೧೨೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ. ರಿಲೇಟಿವ್‌ಲಿ ಫಿಸಿಕಲ್ ಅಚಿವ್‌ಮೆಂಟ್ ಏನು ಎನ್ನುವುದು ಇಂಪಾರ್ಟೆಂಟ್. ನೂರು ಕೋಟಿ ರೂಪಾಯಿಯು ಹಿಂದಿನ ಕೆಲಸಗಳಿಗೆ ೧೮ ಕೋಟಿ ರೂಪಾಯಿ ಅಥವಾ ಇನ್ನೂರು ಕೋಟಿ ರೂಪಾಯಿ ಬೇಕಾಗಬಹುದು. ಆದರೂ ನೀವು ಕೊಟ್ಟ ನೂರು ಕೋಟಿ ರೂಪಾಯಿಗಳಲ್ಲಿ ಮಾಡಿದಂತಹ ಇಷ್ಟು ಕೆಲಸವನ್ನು ವರ್ಕ್‌ನ್ನು ತಾವು ಮಾಡುವುದಕ್ಕೆ ಸಾಧ್ಯವೇನು? ಎನ್ನುವಂಥ ನಾಲ್ಕು ಮಾತನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.— ಶ್ರೀಮತಿ ನಾಗರತ್ನಮ್ಮನವರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆ ಅವರು ಮಾಮೂಲಾಗಿ ಕೇಳಿದ್ದಾರೆ. ಅದು ನೀರಾವರಿ ಯೋಜನೆಗಳಿಗೆ ನೀವು ಹೆಚ್ಚು ಹಣ ಖರ್ಚು ಮಾಡುತ್ತೇವೆಂದು ಹೇಳುತ್ತೀರಿ. ಆದರೆ ಅದರಲ್ಲಿ ಫಿಸಿಕಲ್ ಅಚೀವ್‌ಮೆಂಟ್ ಏನೂ ಎನ್ನುವುದನ್ನು ಹೇಳಬೇಕು. ಎಂದು ಕೇಳಿದ್ದಾರೆ. ಫಿಸಿಕಲ್ ಅಚೀವ್‌ಮೆಂಟ್‌ನ ಕ್ಯುಮುಲೇಟಿವ್ ಪರಿಣಾಮ ಇಲ್ಲಿ ಇಲ್ಲ. ೧೯೮೦ನೇ ವರ್ಷದವರೆಗೆ ಎಂದರೆ ಒಟ್ಟು ನೀರಾವರಿಗೆ ತಂದಿರತಕ್ಕಂಥ ಕ್ಷೇತ್ರದ ವ್ಯಾಪಕತೆ ೧೮ ಲಕ್ಷ ೨೯ ಸಾವಿರ ಹೆಕ್ಟೇರ್ ೧೯೮೬-೮೭ನೇ ಸಾಲಿಗೆ ೨೬ ಲಕ್ಷ ೪೬ ಸಾವಿರ ಹೆಕ್ಟೇರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ.— ಮೂರು ವರ್ಷದ ಅವಧಿಯಲ್ಲಿ ಮೂರು ಪರ್ಸೆಂಟ್ ಅಂದರೆ ೧೯೮೩ರಿಂದ ಇಲ್ಲಿಯವರೆಗೆ ಲೆಕ್ಕ ಹಾಕಿದರೆ ೨.೨೯ ಬರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಅಚೀವ್‌ಮೆಂಟ್ ಬಗ್ಗೆ ನೀವು ಹೇಳುತ್ತಿದ್ದೀರಿ ಅಂದರೆ ೧೮.೨೯ ಲಕ್ಷ ಹೆಕ್ಟೇರ್‌ನಿಂದ ೮೬-೮೭ನೇ ಸಾಲಿನಲ್ಲಿ ೨೬.೪೬ ಲಕ್ಷದವರೆಗೆ ವೃದ್ಧಿಯಾಗಿದೆ. ಇದರಲ್ಲಿ ಮೊದಲನೆಯದು ೧೩½ ಲಕ್ಷ ಮೇಜರ್ ಮತ್ತು ಮೀಡಿಯಂ ಇರಿಗೇಷನ್. ೨ನೇಯದು ೧೩½ ಲಕ್ಷ ಹೆಕ್ಟೇರ್ ಮೈನರ್ ಇರಿಗೇಷನ್ ಎರಡನೆಯದು ಶ್ರೀಮತಿ ನಾಗರತ್ನಮ್ಮ ಅವರು ಮಾತನಾಡುತ್ತಾ, ಧರ್ಮಸ್ಥಳದ ಮಾನ್ಯ ವಿರೇಂದ್ರ ಹೆಗ್ಡೆಯವರು ಕಳೆದ ವರ್ಷ ಒಂದು ಹಳ್ಳಿಯಲ್ಲಿ ಐದು ವರ್ಷದ ಪ್ಲಾನ್ ಮಾಡಿದ್ದಾರೆ ಎಂದು ಹೇಳಿದರು. ಅಲ್ಲಿಗೆ ಒಬ್ಬನನ್ನು ಕಳುಹಿಸುತ್ತಿದ್ದೇವೆ. ನಮ್ಮ ಉದ್ದೇಶವಾದರೂ ಆದಷ್ಟು ಬೇಗ ಈ ಕೆಲಸವನ್ನು ಮಾಡಬೇಕು ಎನ್ನುವುದು ಮಾನ್ಯ ಖರ್ಗೆ ಅವರು ರಿಲೀಫ್ ಬಗ್ಗೆ ಏನು ಹೇಳಿಲ್ಲವೆಂದು ಹೇಳಿದರು. ರಿಲೀಫ್ ವಿಚಾರದಲ್ಲಿ ನಾನು ಉದ್ದೇಶಪೂರ್ವಕವಾಗಿ ಇಲ್ಲಿ ಪ್ರಸ್ತಾಪ ಮಾಡಲಿಲ್ಲ. ಏಕೆಂದರೆ ನಮ್ಮ ಹತ್ತಿರ ಈಗಲೂ ಜನಗಳು ಬಂದು ಭೇಟಿಯಾಗುತ್ತಿದ್ದಾರೆ, ಅಧಿಕಾರಿಗಳು ಬಂದು ಭೇಟಿಯಾಗುತ್ತಿದ್ದಾರೆ. ಏನು ಕಾಯ್ದೆಯಲ್ಲಿ ಬದಲಾವಣೆ ಮಾಡಲು ಸಾಧ್ಯವಿದೆಯೋ ಅದರಲ್ಲಿ ಇರುವಂಥದ್ದನ್ನು ಒಂದು ಅಡ್ಜಸ್ಟ್‌ಮೆಂಟ್ ಸಾಧ್ಯವಾಗುತ್ತದೆ ಅದನ್ನು ಮಾಡುತ್ತೇನೆ, ಸೇಲ್ಸ್ ಟ್ಯಾಕ್ಸ್ ಬಿಲ್ ಬರುತ್ತದೆ. ಆ ಹೊತ್ತಿನಲ್ಲಿ ನೋಡುತ್ತೇನೆ. ಎಕ್ಸೈಸ್ ವಿಚಾರದಲ್ಲಿ ಮಾತನಾಡುತ್ತಾ ೩೦ ಕೋಟಿ ರೂಪಾಯಿಗಳಷ್ಟು ಬಾಕಿ ಇದೆ. ಅದನ್ನು ವಸೂಲ್ಮಾಡಿ ಎಂದು ಹೇಳಿದ್ದಾರೆ. ನಾವು ಅನೇಕ ಸಲ ಈ ಸಭೆಯಲ್ಲಿ ಹೇಳಿದ್ದೇವೆ. ಇದರಲ್ಲಿ ಬಹಳಷ್ಟು ಕೋರ್ಟಿನ ಸ್ಟೇ ಆರ್ಡರ್‌ನಿಂದ ಬಾಕಿ ಇದೆ. ಕಳೆದ ಒಂದು ತಿಂಗಳಲ್ಲಿ ಒಂದು ಡ್ರೈವ್ ಮಾಡುತ್ತಿದ್ದೇವೆ. ಯಾವುದಾದರೂ ಕೋರ್ಟಿನ ಸ್ಟೇ ಆರ್ಡರ್ ಇಲ್ಲದಿದ್ದರೆ ಅಥವಾ ಇದ್ದರೂ ಕೂಡ ವಸೂಲು ಮಾಡಬೇಕೆಂದು ಹೇಳುತ್ತೇನೆ. ಆ ಮೇಲೆ ಒಂದು ಕಾರ್ಪೊರೇಷನ್ ಮಾಡಬೇಕೆಂದು ಹೇಳಿದ್ದಾರೆ. ಈ ಒಂದು ಕಾರ್ಪೊರೇಷನ್ ಮಾಡತಕ್ಕಂಥ ವಿಚಾರವನ್ನು ಕಳೆದ ಎರಡು ವರ್ಷಗಳಿಂದ ಯೋಚನೆ ಮಾಡುತ್ತಿದ್ದೇವೆ. ಆದರೆ ಇದಕ್ಕೆ ಸಂಬಂಧಪಟ್ಟಂಥ ಅನುಭವ ತಮಿಳ ನಾಡಿನಲ್ಲಿ, ಪಂಜಾಬ್‌ನಲ್ಲಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದು ಕೇರಳದಲ್ಲಿ....

ಶ್ರೀ ರಾಮಕೃಷ್ಣ ಹೆಗಡೆ.— ಇದು ಕೇರಳದಲ್ಲಿ ಸರಿ ಇಲ್ಲ. ಕೇರಳದವರು ಪುನಃ ಮೊದಲನೆಯ ಪದ್ಧತಿಗೆ ಹೋಗಬೇಕು ಎಂದು ಇದ್ದಾರೆ. ನಾನು ಅಲ್ಲಿನ ಅಧಿಕಾರಿಗಳನ್ನು ಏನಾಗುತ್ತಿದೆಯೆಂದು ಕೇಳಿದೆ. ಆಮೇಲೆ ಅಧಿಕಾರಿಗಳು ಇರಲಿ, ಅಧ್ಯಕ್ಷರು ಇರುತ್ತಾರೆ. ಆಫೀಸರ್ ಇರುತ್ತಾರೆ. ಈ ಬ್ರಾಂಡ್ ಖರೀದಿ ಮಾಡಬೇಕು ಎನ್ನುವ ವ್ಯವಹಾರದಲ್ಲಿ ಲಂಚ ಇರುತ್ತದೆ. ಕೋಟ್ಯಾಂತರ ರೂಪಾಯಿಗಳ ವ್ಯವಹಾರದಲ್ಲಿ ಲಂಚ ಇದ್ದೇ ಇರುತ್ತದೆ. ಆದುದರಿಂದ ಕಾರ್ಪೊರೇಷನ್ ಮಾಡಬೇಕು ಎಂದು ಏನೂ ವಿಚಾರ ಇದೆ, ಆದರ ಸಲುವಾಗಿ ಅವರ ಅನುಭವವನ್ನು ಕೇಳಿದ ಮೇಲೆ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿದ್ದೇವೆ. ಅದನ್ನು ಮಾಡಿದರೆ ಅನುಕೂಲವಾಗಬಹುದು. ಆದರೆ ಕೇರಳದಲ್ಲಿ ಇಲ್ಲಿಯವರೆವಿಗೂ ಇದ್ದಂತಹ ಪದ್ಧತಿ ಹೋಗಿದೆ. ಅಲ್ಲಿ ಬೇರೆ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಅದೇ ರೀತಿಯಲ್ಲಿ ತಮಿಳುನಾಡಿನಲ್ಲಿಯೂ ಕೂಡ ಹಳೆಯ ಪದ್ಧತಿಯಿಂದ ಲಂಚ ಜಾಸ್ತಿಯಾಗುತ್ತದೆಂದು ಹೇಳಿ ಬದಲಾವಣೆ ಮಾಡಿದ್ದಾರೆ. ಆದ್ದರಿಂದ ಈಗ ನಮ್ಮಲ್ಲಿಯೂ ಕೂಡ ಈ ಹಳೆಯ ಪದ್ಧತಿಯನ್ನು ಕೈ ಬಿಟ್ಟಿದ್ದೇವೆ. ಆ ಮೇಲೆ ಮಾನ್ಯ ಸದಸ್ಯರು ಹೇಳಿದ ಹಾಗೆ ಅಂಗಡಿವಾರು ಹರಾಜು ಮಾಡಿದರೆ ಕೆಲವರಿಗೆ ಅನುಕೂಲವಾಗಬಹುದು, ಇನ್ನು ಕೆಲವರಿಗೆ ಅನಾನುಕೂಲವಾಗಬಹದು. ಅಂಗಡಿವಾರು ಹರಾಜು ಮಾಡಬೇಕಾದರೆ ಸಾವಿರಾರು ಅಂಗಡಿಗಳ ಬಗ್ಗೆ ಹರಾಜು ಮಾಡಬೇಕಾಗುತ್ತದೆ. ಆಗ ಯಾರ್ಯಾರು ಮುಂದೆ ಬರುತ್ತಾರೆಂದು ಖಚಿತವಾಗಿ ಹೇಳುವುದಕ್ಕೆ ಆಗುವುದಿಲ್ಲ ಈಗ ತಾಲ್ಲೂಕುವಾರು ಹರಾಜು ಮಾಡಿದರೆ ನಾವು 2 ತಿಂಗಳ ರೆಂಟ್ ಫ್ರೀಯಾಗಿ ಕೊಡಬೇಕಾಗುತ್ತದೆ. ಆ ಮೇಲೆ ಒಂದೆರಡು ಮೂರು ತಿಂಗಳುಗಳ ಕಾಲ ಬ್ಯಾಂಕ್ ಗ್ಯಾರಂಟಿಯನ್ನು ಸಹ ಕೊಡಬೇಕಾಗುತ್ತದೆ. ಪಾರ್ಟಿಗಳಿಗೆ ಈ ಹಿನ್ನೆಲೆಯಲ್ಲಿ ಅನುಭವವಿದೆಯೋ ಇಲ್ಲವೋ ಅಥವಾ ಅವರಿಗೆ ಆರ್ಥಿಕ ಶಕ್ತಿ ಇದೆಯೋ ಇಲ್ಲವೋ ಎನ್ನುವುದನ್ನು ಸಹ ನೋಡಬೇಕಾಗುತ್ತದೆ. ಈ ಎಲ್ಲಾ ತೊಂದರೆಗಳು ಇದ್ದಿದ್ದರಿಂದಲೇ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ. ಇದರಿಂದ ಸರ್ಕಾರಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಈಗಿನ ಕ್ರಮವನ್ನು ಪುನರ್ವಿಮರ್ಶೆ ಮಾಡಬೇಕೆಂದು ಹೇಳಿದರೆ ಆದರಲ್ಲಿ ನನ್ನದೇನೂ ವಿರೋಧವಿಲ್ಲ. ಈಗ ಸೌತ್ ಕೆನರಾದಿಂದ ಒಂದು ಅಭಿಪ್ರಾಯ ಬಂದಿದೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಆಂಧ್ರ ಪ್ರದೇಶದಲ್ಲಿ ಕೋ-ಆಪರೇಟಿವ್ ಸೊಸೈಟಿಗಳನ್ನು ಮಾಡಿ ಅದರ ಮುಖಾಂತರ ಕೊಡುತ್ತಿದ್ದಾರೆ. ಅಲ್ಲಿ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಅಂಗಡಿವಾರು ಕೊಡುತ್ತಿದ್ದಾರೆ. ಇದರಿಂದ ಅಲ್ಲಿನ ಸರ್ಕಾರಕ್ಕೆ ಹೆಚ್ಚು ಆದಾಯವಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಅದರಿಂದ ಆದಾಯ ಜಾಸ್ತಿ ಬರಲೂ ಬಹುದು, ಹಣ ಹೋದರೂ ಹೋಗಬಹುದು. ನಾನು ನನ್ನ ಬಡ್ಜೆಟ್ ಭಾಷಣದಲ್ಲಿ ಹೇಳಿರುವುದು ಏನೆಂದರೆ, ಕೋ-ಆಪರೇಟಿವ್ ಸೊಸೈಟಿಗಳಿಗೆ ಸರಾಯಿಯನ್ನು ಮಾರಾಟ ಮಾಡಲು ಅನುಮತಿ ಕೊಡುತ್ತೇವೆಂದು ಅಲ್ಲ. ಈ ಲಿಕ್ಕರ್ ಅನ್ನು ಮಾರಾಟ ಮಾಡಲು ಯಾರಾದರೂ ಕೋ-ಆಪರೇಟಿವ್ ಸೊಸೈಟಿಯವರು ಅಂದರೆ ಜನತಾ ಬಜಾರ್‌ನವರು ಮುಂದೆ ಬಂದರೆ ಅನುಮತಿ ಕೊಡುತ್ತೇವೆಂದು ಹೇಳಿದ್ದೇವೆ...

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ ..

ಶ್ರೀ ರಾಮಕೃಷ್ಣ ಹೆಗಡೆ.— ಒಂದು ನಿಮಿಷ ನಾನು ಹೇಳಿ ಮುಗಿಸುತ್ತೇನೆ. ಜನತಾ ಬಜಾರ್ ಒಳಗಡೆ ಪರದೆಯನ್ನು ಹಾಕಿಕೊಂಡು ಈ ಲಿಕ್ಕರ್ ಮಾರಾಟ ಮಾಡಲು ಅನುಮತಿ ಕೊಡುವ ಉದ್ದೇಶ ನಮಗೆ ಇಲ್ಲ. ಈ ವಿಷಯದ ಬಗ್ಗೆ ನಾನು ಈಗಾಗಲೇ ಮಾನ್ಯ ಅಬ್ಕಾರಿ ಸಚಿವರ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಅದೇನೆಂದರೆ ಈ ಸಲ ಎಕ್ಸೈಜ್ ಹರಾಜು ಮಾಡುವುದಕ್ಕಿಂತ ಮುಂಚಿತವಾಗಿ ಸರ್ವೆಯನ್ನು ಮಾಡಿಸಬೇಕು ಎಂದು ಈ ಸರ್ವೆ ಮಾಡುವಂತಹ ಕಾಲದಲ್ಲಿ ಲಿಕ್ಕರ್ ಶಾಪ್ ಇರುವ ಕಡೆಯಲ್ಲಿ ಶಾಲೆಗಳು ಇರಬಾರದು, ಹರಿಜನ ಮತ್ತು ಗಿರಿಜನರ ಕೇರಿಗಳು ಇರಬಾರದು, ಲೇಬರ್ ಕಾಲೋನಿಗಳು ಇರಬಾರದು, ದೇವಸ್ಥಾನಗಳು ಇರಬಾರದು, ಮಸೀದಿಗಳು ಇರಬಾರದು, ಚರ್ಚ್‌ಗಳು ಇರಬಾರದು, ಪೂಜಾ ಸ್ಥಳಗಳು ಇರಬಾರದು, ಇವು ಇಲ್ಲದಿದ್ದರೆ ಮಾತ್ರ ಅನುಮತಿ ಕೊಡಬೇಕೆಂದು ಹೇಳಿ ಇದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕೆಂದು ಸಹ ಹೇಳಿದ್ದೇನೆ...

ಒಬ್ಬ ಮಾನ್ಯ ಸದಸ್ಯರು.—ಸರ್ವೆ ಮಾಡುವಂತಹ ಕಾಲದಲ್ಲಿ ಮಂಡಲ್ ಪಂಚಾಯಿತಿಗಳ ಒಪ್ಪಿಗೆಯನ್ನು ಸಹ ತೆಗೆದುಕೊಳ್ಳಬೇಕೆಂದು ತಿಳಿಸಿದ್ದರೆ ಒಳ್ಳೆಯದು.

ಶ್ರೀ ರಾಮಕೃಷ್ಣ ಹೆಗಡೆ.— ಇನ್ನು ಯುಕೆಪಿಗೆ ನಾವು ಕೊಟ್ಟಿರತಕ್ಕಂಥದ್ದು ಒಂದು ನೂರು ಕೋಟಿ ರೂಪಾಯಿಗಳು. ಆ ಭಾಗದ ಬಾಕಿ ಪ್ರಾಜೆಕ್ಟ್‌ಗಳು ಎಲ್ಲಾ ಈ ಕೃಷ್ಣ ವಲಯದಲ್ಲಿ ಬಂದಿವೆ. ಕೇವಲ ಹೈದರಾಬಾದ್ ಕರ್ನಾಟಕ ಭಾಗಕ್ಕೆ ೫೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈಗ ಕಾವೇರಿ ವಲಯದಲ್ಲಿ ಒಂದು ನೂರು ಕೋಟಿ ರೂಪಾಯಿಗಳನ್ನು ಒದಗಿಸಿ ಮತ್ತೆ ೫ ಕೋಟಿ ರೂಪಾಯಿಗಳನ್ನು ಕಾವೇರಿ ಮಾಡರ್ನೈಸೇಷನ್‌ಗೆ ಒದಗಿಸಿದ್ದೇವೆ. ಕೃಷ್ಣ ವಿಚಾರದಲ್ಲಿ ೧೫ ವರ್ಷದ ಒಂದು ಅವಧಿ ಇದೆ. ಆದರೆ ಕಾವೇರಿ ವಿಚಾರದಲ್ಲಿ ಆ ಒಂದು ಅವಧಿ ಇಲ್ಲ. ೧೯೨೪ನೇ ಅಗ್ರಿಮೆಂಟ್ ಮುಗಿದು ಹೋಗಿ ಅದು ಲ್ಯಾಪ್ಸ್ ಆಗಿರುವುದರಿಂದ, ಮತ್ತೆ ಕೇಂದ್ರಸರ್ಕಾರದವರ ಮೇಲೆ ತಮಿಳುನಾಡು ಸರ್ಕಾರದವರು ಏನೋ ಒಂದು ಒತ್ತಾಯ ಹಾಕುತ್ತಾ ಇದ್ದಾರೆ, ಆ ಒತ್ತಾಯದಿಂದಾಗಿಯೂ ಅಥವಾ ಬೇರೆ ಯಾವುದೇ ಕಾರಣದಿಂದ, ನಮ್ಮ ಕೇಂದ್ರ ಸರ್ಕಾರದವರು ಯಾವ ನಿರ್ಣಯ ತೆಗೆದುಕೊಳ್ಳುತ್ತಾರೋ ಎಂಬ ಭಯ ನಮಗೆ ಇದೆ. ಆದಕ್ಕಾಗಿ ಕಾವೇರಿ ವಲಯದಲ್ಲಿ ಈಗಾಗಲೇ ಕೈಗೊಂಡಿರತಕ್ಕ ಪ್ರತಿಯೊಂದು ಯೋಜನೆಯನ್ನು ಆದಷ್ಟು ಬೇಗ ಮುಕ್ತಾಯ ಮಾಡಬೇಕಾಗಿದೆ. ಆದಕ್ಕಾಗಿ ಎರಡರಲ್ಲೂ ಅನುಪಾತ ಒಂದೇ ರೀತಿ ಇದೆಯೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ. ಅನೇಕ ಪ್ರಶ್ನೆಗಳು ಇದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಯವರು ಪ್ರಸ್ತಾಪ ಮಾಡದಿರುವ ಗೇಣಿದಾರರ ವಿಚಾರದಲ್ಲಿ ಮಾತ್ರ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಗೇಣಿದಾರರ ವಿಚಾರದಲ್ಲಿ ಹಿಂದೆ ನಾವು ಅಧಿವೇಶನ ಸೇರಿದ್ದಾಗ ಗೇಣಿದಾರರಿಂದ ಬರಬೇಕಾದ ಕಂತುಗಳನ್ನು ವಜಾ ಮಾಡುವ ಬಗ್ಗೆ ಕೇಳಿದ್ದೆವು. ಗೇಣಿದಾರರಿಗೆ ಯಾವುದೇ ಸವಲತ್ತುಗಳು ಇಲ್ಲದೆ ಇರುವುದರಿಂದ, ಅವರು ಕೊಡಬೇಕಾದಂಥ ಕಂತುಗಳನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಅವರು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಗೇಣಿದಾರರ ಕಂತುಗಳನ್ನು ವಜಾಮಾಡತಕ್ಕ ಹೇಳಿಕೆ ಕೊಡತಕ್ಕಂಥ ಬಗ್ಗೆ ಸದನದ ಎಲ್ಲಾ ಮೂಲೆಗಳಿಂದಲೂ ಒತ್ತಾಯ ಬಂದಮೇಲೆ, ತಾವು ಗೇಣಿದಾರರ ಕಂತುಗಳನ್ನು ವಜಾಮಾಡುತ್ತೇವೆಂದು ಹೇಳಿದಿರಿ. ಮತ್ತು ಅವರಿಗೆ ಏನೇ ತೊಂದರೆ ಬಂದರೂ, ಈಗಿನ ಸರ್ಕಾರ ಗೇಣಿದಾರರ ಪರವಾಗಿ ಇದೆಯೆಂದು ಹೇಳಿದಿರಿ. ಆದರೆ ತಾವು ಇಲ್ಲಿಯವರೆಗೆ ಈ ಬಗ್ಗೆ ಸರ್ಕಾರದ ಆಜ್ಞೆಯನ್ನು ಇನ್ನೂ ಹೊರಡಿಸಿಲ್ಲ. ಈಗಾಗಲೇ ಒಂದೊಂದು ತಾಲ್ಲೂಕಿನಲ್ಲೂ ತಹಸೀಲ್ದಾರರ ಆಫೀಸ್‌ನಿಂದ ನೂರಾರು ನೋಟೀಸ್‌ಗಳನ್ನು ಹೊರಡಿಸಿದ್ದಾರೆ. ಮತ್ತು ಅಧಿಕಾರಿಗಳು ಈಗಾಗಲೇ ಹರಾಜು, ವಗೈರೆ ಮಾಡತಕ್ಕಂಥ ಕ್ರಮವನ್ನು ತೆಗೆದುಕೊಂಡಿದ್ದಾರೆ. ಇದು ಉಗ್ರವಾದಂಥ ವಿಚಾರ. ನಿಮ್ಮ ಹೇಳಿಕೆಯಲ್ಲಿ ನೀವು ಕೊಟ್ಟಿರತಕ್ಕಂಥ ವಚನಕ್ಕೆ ಬದ್ಧರಾಗಿ ಈ ಸರ್ಕಾರದ ಆಜ್ಞೆ ಹೊರಟಿಲ್ಲ. ಇದರಿಂದ ಸಾವಿರಾರು ಇಲ್ಲವೇ ಲಕ್ಷಾಂತರ ಕುಟುಂಬಗಳಿಗೆ ಅನ್ಯಾಯವಾಗಿದೆ. ಆದ್ದರಿಂದ ಈ ಬಗ್ಗೆ ಅಂದರೆ ಗೇಣಿದಾರರ ಕಂತುಗಳನ್ನು ವಜಾ ಮಾಡುವ ಬಗ್ಗೆ ಸರ್ಕಾರದಿಂದ ಆಜ್ಞೆ ಹೊರಡಿಸುತ್ತೀರೋ ಅಥವಾ ಇಲ್ಲವೋ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಭಾಷಣವನ್ನು ಪ್ರಾರಂಭ ಮಾಡಿದಾಗಲೇ, ಮೊಯಿಲಿಯವರು ತಿಳಿಯದೇ ಮಾತನಾಡಿದರೋ ಅಥವಾ ಅವರು ಮೋಸದ ಅಂಕಿಸಂಖ್ಯೆಗಳನ್ನು ಕೊಡತಕ್ಕ ರೀತಿ ಮಾತನಾಡಿದರೋ ಗೊತ್ತಿಲ್ಲ ಅಂತ ಹೇಳಿದರು. ನಾನು ನೀರಾವರಿ ಬಗ್ಗೆ ಅಂಕಿ ಸಂಖ್ಯೆಗಳ ಆಧಾರದಮೇಲೆ ಮಾತನಾಡಬಯಸುತ್ತೇನೆ. ಈಗ ಇದರಲ್ಲಿ ಪಾರ್ಟ್ ೩ರಲ್ಲಿ ೧೯೮೦–೮೭, ಏಕೆಂದರೆ ನಮಗೆ ತಾವು ಮಾಹಿತಿಯನ್ನು ತಮ್ಮ ಪುಸ್ತಕದಲ್ಲಿ ಡಾಕ್ಯುಮೆಂಟ್ಸ್‌ನ ತೆಗೆದು ಎತ್ತಿ ಹೇಳಬೇಕಾಗುತ್ತದೆ. ಹೊಸದಾಗಿ ನಾವು ನೋಡಲಿಕ್ಕೆ ಆಗುವುದಿಲ್ಲ. ಇದರಲ್ಲಿ ಏನು ಪ್ರಾಜೆಕ್ಟ್ ೧೩೮ನೇ ಎಂಟರಿಯಲ್ಲಿ ೨೧೨. ಹೇಮಾವತಿ ಪ್ರಾಜೆಕ್ಟ್‌ಗೆ ೫೪ ಕೋಟಿ ೮೭ ಲಕ್ಷ ೧೫ ಸಾವಿರ ಅಂತ ಹೇಳಿ ಎಂಟರಿ ಇದೆ, ಈಗ ಒಂದು ವೇಳೆ ೨೦೮ನೇ ಎಂಟರಿಯನ್ನು ತಾವು ಸೇರಿಸದೆ ಇದ್ದರೆ, ತಾವು ಅದರ ಬಗ್ಗೆ ಇಂಟರ್‌ಪ್ರಿಟೇಷನ್ ಮಾಡಬಹುದು. ೨೦೮ನೇ ಐಟಮ್‌ನಲ್ಲಿ ಹೇಮಾವತಿ ಪ್ರಾಜೆಕ್ಟ್ ಕೆನಾಲ್ ಜೋನ್ ತುಮಕೂರು ಎಂದು ಹೇಳಿ ತಪ್ಪು ಎಂಟರಿ ಇದೆ. ಆದರೆ ತಾವು ಹೇಳಬಹುದು ನಮಗೆ ಗೊತ್ತಿಲ್ಲ ಅಂತ. ಆದಕ್ಕೆ ಒಂದು ಸೆಪರೇಟ್ ಎಂಟರಿ ಇದೆ. ಅಲ್ಲಿ ನಾನ್ ಪ್ಲಾನ್‌ನಲ್ಲಿ ೧೦ ಲಕ್ಷ ಕೊಟ್ಟರೆ ಚೀಫ್ ಇಂಜಿನಿಯರ್ ಆಫೀಸಿನ ಎಸ್ಟಾಬ್ಲಿಷ್ ಮಾಡುತ್ತೀರಿ, ಆದರೆ ಅದರಿಂದ ಕೆಲಸವಾಗುವುದಿಲ್ಲ. ತಾವು ರೆಕಾರ್ಡ್‌ನಲ್ಲಿ ಸರಿಯಿಲ್ಲ ಎಂದು ಹೇಳಿ ತಿದ್ದುಪಡಿ ಮಾಡಿ ೨೦೫ ಮತ್ತು ೨೦೮ರ ಎಂಟರಿಗಳನ್ನು ತಾವು ಸ್ಟ್ರೈಕ್ ಔಟ್ ಮಾಡಿಬಿಟ್ಟಿದ್ದೀರಿ. ಆದರೆ ನಮಗೆ ಬೇಕಾದುದು ತುಮಕೂರು ಚಾನಲ್‌ಗೆ ಹಣ ಕೊಡಬೇಕಾದುದು ತಮ್ಮ ರೆಕಾರ್ಡ್‌ನಲ್ಲಿ ಅದು ಇಲ್ಲ, ಇದನ್ನು ತಾವು ಸದನಕ್ಕೆ ಏಕೆ ಮುಚ್ಚಿಡು

ತ್ತಿದ್ದೀರಿ ? ಅಥವಾ ನಾವು ಅದನ್ನು ಕೊಡುತ್ತೇವೆ ಎಂದು ಹೇಳುವ ಬದಲು ರೆಕಾರ್ಡ್‌ನಲ್ಲಿ ನೋಡಿ ನಮಗೆ ಬಂದು ಬಿಟ್ಟರೆ ವೈ. ಕೆ. ರಾಮಯ್ಯನವರಿಗೂ ಮತ್ತು ನಮಗೂ ಸಂತೋಷವಾಗುತ್ತದೆ. ಆದರೆ ತಾವು ಪ್ಲಾನ್ ಅಮೌಂಟನ್ನು ಇದರಲ್ಲಿ ಕಾಣಿಸಲಿಲ್ಲ.

ಇನ್ನು ಎರಡನೆಯದಾಗಿ ಅಧ್ಯಕ್ಷರೇ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ೧೯೮೬–೮೭ನೇ ವರ್ಷದಲ್ಲಿ ೫೭ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಆದರೆ ಈ ವರ್ಷ ನೀವು ೭೨ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ೧೫ ಕೋಟಿ ರೂಪಾಯಿ ಜಾಸ್ತಿ ಕೊಟ್ಟಿದ್ದೀರಿ. ಈ ಐಟಮ್‌ನಲ್ಲೂ ಕೂಡ There are four entries ಇದು ಪ್ಲಾನ್ ಅಮೌಂಟ್, ಆದರೆ ನಾನ್ ಪ್ಲಾನ್ ೨೨೭ನೇ ಐಟಮ್‌ನಲ್ಲಿದೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಡ್ಯಾಂ ಪೋರ್ಷನ್, lift Irrigation cannal come under dam portion. ಅದಕ್ಕೆ ನಾವುಕೊಡತಕ್ಕಂತಹ ಹಣ ೨೩ ಕೋಟಿ ರೂಪಾಯಿಗಳು ಅದರಲ್ಲಿ ಬರುವುದಿಲ್ಲ ಎರಡನೇ ಐಟಮ್ ೨೨೮ಅಪ್ಪರ್ ಕೃಷ್ಣಾಪ್ರಾಜೆಕ್ಟ್‌ಕೆನಾಲ್ ಜೋನ್ ನಂ.೧ಭೀಮರಾಯನ ಗುಡಿ ಅದು ಗುಲ್ಬರ್ಗದಲ್ಲಿ ಬರತಕ್ಕದು, ಗುಲ್ಬರ್ಗ ಕೆನಾಲ್ ಡಿವಿಷನ್ ಆದರೆ ತಾವು ಈ ಗುಲ್ಬರ್ಗ ಡಿವಿಜನ್‌ಗೆ ಇಟ್ಟಿರತಕ್ಕಂತಹ ಹಣವನ್ನು ಲಿಫ್ಟ್ ಇರಿಗೇಷನ್ ಬಿಜಾಪುರಕ್ಕೆ ಹೇಗೆ ಖರ್ಚು ಮಾಡು ತ್ತೀರಿ ? ಅದಕ್ಕೆ ಕೊಟ್ಟಂತಹ ಹಣ ೨೩ ಕೋಟಿ ರೂಪಾಯಿಗಳು. ಇನ್ನು ೨೨೯ನೇ ಐಟಂ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್, ಕೆನಾಲ್ ಜೋನ್ ನಂ. ೨ ಕೆಂಭಾವಿ, ಈ ಕೆಂಭಾವಿ ಕೂಡ ಲಿಫ್ಟ್ ಇರಿಗೇಷನ್ ಬಿಜಾಪುರಕ್ಕೆ ಹೇಗೆ ಕವರ್ ಆಗುತ್ತದೆ? ಅದಕ್ಕೆ ತಾವು ಕೊಟ್ಟಿದ್ದು ೨೬ ಕೋಟಿ ರೂಪಾಯಿಗಳು. ಈ ಮೂರು ಐಟಂನ್ನು ಸೇರಿಸಿದರೂ ಕೂಡ ೭೨ ಕೋಟಿ ರೂಪಾಯಿಗಳು ಮಾತ್ರ ಆಗುತ್ತದೆ. ಇನ್ನು ನಾಲ್ಕನೇ ಐಟಮ್ ಯಾವುದು ಇದೆ ಅಂದರೆ, U K P Land acquisition Resettlement and Rehabilitation. ಅದು ಕಾಡ, ಈಗ ಕಾಡ, ಸನ್ಮಾನ್ಯ ಶ್ರೀ ದೇವೇಗೌಡರು ಇರಿಗೇಷನ್ ಮಿನಿಷ್ಟರ್ ಆದಮೇಲೆ ಕಾಡ ಕೂಡ ಅವರ ಇಲಾಖೆಗೆ ಬರುತ್ತದೆ ಆದರೆ ಹಿಂದೆ ಅದು ಪ್ಲಾನಿಂಗ್ ಡಿಪಾರ್ಟ್‌ಮೆಂಟಿನಲ್ಲಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಇದ್ದದ್ದು. ಇದು ಅಗ್ರಿಕಲ್ಚರ್‌ಗೆ ಮತ್ತು ಸಾಯಿಲ್ ಕನ್ಸರ್ವೇಷನ ಮತ್ತು ಫೀಲ್ಡ್ ಚಾನಲ್‌ಗೆ ಸಂಬಂಧಪಟ್ಟಿದ್ದದು. Strictly it will not come under irrigation.

ಆದ್ದರಿಂದ ಅದಕ್ಕೆ ಕೊಟ್ಟಂತಹ ೧೨ ಕೋಟಿ ರೂಪಾಯಿಗಳನ್ನು ತಾವು ಸೇರಿಸಿ ಇನ್ನೊಂದು ೭೨ ಪ್ಲಸ್ ೧೨ ಅಂದರೆ ಒಟ್ಟು ೮೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಅಂತ ಹೇಳಿದ್ದೀರಿ. ಅದು ಸಾಧ್ಯವಾಗುವುದಿಲ್ಲ. ಆದರೆ ತಾವು ೩ನೇ ಐಟಮ್‌ಗೆ ಕೊಟ್ಟಿರುವುದು ೭೮ಕೋಟಿರೂಪಾಯಿ. ಇಲ್ಲ ಹತ್ತು ಕೋಟಿ ರೂಪಾಯಿ ಮಾತ್ರ ಜಾಸ್ತಿಯಾಗಿದೆ. ಆದ್ದರಿಂದ ತಾವು ಅದರ ಬಗ್ಗೆ ಕೂಡ ತಮ್ಮ ರೆಕಾರ್ಡ್ ಪ್ರಕಾರ, ಸರಿ ಇಲ್ಲವೆಂದು ಹೇಳಿದಿರಿ. ಆ ವಿಷಯಕ್ಕೆ ನಾನು ನಂತರ ಬರುತ್ತೇನೆ. ತಾವು ಈಗ ಏನು ಒಂದು ಸ್ಟೇಟ್‌ಮೆಂಟ್‌ನ್ನು ಓದಿದಿರಿ, ಅದರಂತೆ ಸದನಕ್ಕೆ ತಾವು ಏನು ಮಾಹಿತಿಯನ್ನು ಕೊಟ್ಟಿದ್ದೀರಿ ಅದರ ಪ್ರಕಾರ ತಾವು ಹಣ ಕೊಟ್ಟಿಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಈ Pay Commission ವಿಚಾರದಲ್ಲಿ ಆಗಲೇ ನಾನು ವಿಚಾರಿಸಿದೆ, ಏಕೆಂದರೆ, ಈಗ ಶ್ರೀ ವಿ. ಪಿ. ಸಿಂಗ್ ಅವರ ಬರೆ ಉತ್ತರ ಕೊಡಬೇಕು. ಇನ್ನು ಪೇ ಕಮಿಷನ್‌ನ್ನು under the constitution ಕಾನ್ಸ್ಟಿಟ್ಯೂಟ್ ಮಾಡಿ ಅದರ ವರದಿಯನ್ನು ಕೊಟ್ಟಿದ್ದಾರೆ. Pay Commission is an Independent Body ಅದಕ್ಕೆ ತಮ್ಮ ಅಭಿಪ್ರಾಯ ಏನಾದರೂ ಇದ್ದರೆ ತಮ್ಮ ಆಪ್ತ ಅಧಿಕಾರಿಗಳನ್ನು ಕರೆಯಿಸಿ ಅವರಿಗೆ ಒಂದು ಗೈಡ್ ಲೈನ್ಸ್ ಕೊಟ್ಟು ಅದನ್ನು ಬದಲಾವಣೆ ಗಳನ್ನು ಮಾಡಬೇಕು. ಆಮೇಲೆ over the Pay Commission ಪುನಃ ತಾವು ಡಿಸ್ಕಷನ್ ಮಾಡಬೇಕು ಎಂದು ಹೇಳಿದರೆ, what business the Union Finance Minister or Chief Minister of the State has got ಆದ್ದರಿಂದ ಇದರಲ್ಲಿ ಈ ತರಹ ಉತ್ತರ ಕೊಟ್ಟರು ಅಂತ ಹೇಳುತ್ತಿದ್ದು ಬಹುಶಃ ತಾವು ಮಾಡಬಹುದು ವೆಂಕಟಸ್ವಾಮಿ ಆಯೋಗ ಮಾಡುತ್ತೀರಿ, ಆಮೇಲೆ ಕಮಿಷನ್ ಮಾಡಿದ ಮೇಲೂ ಕೂಡ ವಿ.ಪಿ. ಸಿಂಗ್ ಅವರಿಗೆ ರಾಮಕೃಷ್ಣ ಹೆಗಡೆ ಆಗಲಿಕ್ಕೆ ಸಾಧ್ಯವಾಗುವುದಿಲ್ಲ ಈ ಕಮಿಷನ್‌ನ ಒಂದು ಪವಿತ್ರತೆ ಏನು ಇದೆ, ಆ ಪಾವಿತ್ರತೆಯನ್ನು ಕಾಯ್ದು ಕೊಳ್ಳಬೇಕಾಗಿದೆ ಈ ಪಾವಿತ್ರತೆ ಇಡೀ ಸಂವಿಧಾನಕ್ಕೆ ಕೊಡತಕ್ಕಂತಹ ಪಾವಿತ್ರತೆ, ಅದನ್ನು ತೆಗೆದು ಹಾಕಲಿಕ್ಕೆ ಹಕ್ಕು ಕೇಂದ್ರದ ಮಂತ್ರಿಗಳಿಗೂ ಇರುವುದಿಲ್ಲ, ತಮಗೂ ಕೂಡ ಇರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಆದ್ದರಿಂದ ಇದರ ಬಗ್ಗೆ ತಾವು ಹೇಳಬೇಕು. ಪೇ-ಕಮೀಷನ್‌ನ್ನು ಅವರು ಮಾಡಿರಲಿಲ್ಲವೇ? We have got to implement Pay Commission. ಅದರ ಬಗ್ಗೆ ಅಲ್ಲಿನ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿತ್ತು. If you want to insist the view which you have taken on the Central Pay Commission, you could have awaited. ಇಲ್ಲಿ ಚರ್ಚೆ ಮಾಡಬಹುದಾಗಿತ್ತು, ಇಲ್ಲಿ ಚರ್ಚೆ ಮಾಡಿ, ಜನರ ಅಭಿಪ್ರಾಯವನ್ನು ತಿಳಿದುಕೊಂಡು ಪೇ-ಕಮೀಷನ್ ವರದಿಯನ್ನು ಅನುಷ್ಠಾನ ಮಾಡಬಹುದಾಗಿತ್ತು.

ಅಧ್ಯಕ್ಷರು.—ಈಗ ಶ್ರೀ ಕೆ.ಹೆಚ್. ಪಾಟೀಲ್‌ರವರು ಏನಾದರೂ ಅನುಮಾನವಿದ್ದರೆ ಕೇಳಬಹುದು?

ಶ್ರೀ ಕೆ. ಹೆಚ್. ಪಾಟೀಲ್.—ನಾನು ವಿಶೇಷವಾಗಿ ಕೇಳಲಿಕ್ಕೆ ಇಷ್ಟಪಡುವುದಿಲ್ಲ, ರೈತಾಪಿ ಜನರ ಹಿತದ ಸಲುವಾಗಿಯಾಗಲೀ, ಅವರ ಅಭಿವೃದ್ಧಿ ಸಲುವಾಗಿಯಾಗಲೀ, ರಾಜ್ಯದ ಅಭಿವೃದ್ಧಿ ಸಲುವಾಗಿಯಾಗಲೀ ಇದು ಪ್ರಗತಿಪರವಾದ ಬಜೆಟ್ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿಗಳು, ರೈತರ ಉತ್ಪನ್ನಗಳನ್ನು ಆಧರಿಸಿ ಯಾವ ಯಾವ ಪ್ರದೇಶಗಳಲ್ಲಿ ಯಾವ ಯಾವ ಉದ್ದಿಮೆಗಳನ್ನು ಪ್ರಾರಂಭ ಮಾಡಬೇಕೆಂದು ಯೋಚನೆ ಮಾಡಿದ್ದಾರೆ ಅದನ್ನು ತಿಳಿಸಬೇಕು ಏಕೆಂದರೆ ದೊಡ್ಡ ಪ್ಲಾನಿಂಗ್ ಡಿಪಾರ್ಟ್‌ಮೆಂಟನ್ನು ಇವರು ಇಟ್ಟುಕೊಂಡು, ವಿಶೇಷ ತರಬೇತಿ ಹೊಂದಿದ ಜನವನ್ನು ಫೈನಾನ್ಸ್ ಡಿಪಾರ್ಟ್‌ಮೆಂಟನಲ್ಲಿ ಇಟ್ಟುಕೊಂಡು, ಜನತೆಯ ಕಲ್ಯಾಣಕ್ಕೆ ಹಣವನ್ನೇ ಇಲ್ಲಿ ದೊರಕಿಸಿಕೊಡದಿದ್ದರೆ ಇದು ಎಂಥ ಬಜೆಟ್ ಆಗುತ್ತದೆ? ಇನ್ನು ಎರಡನೆಯದು, ನಮ್ಮ ದೇಶದಲ್ಲಿ, ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ಪಂತದಲ್ಲಿ ಅನೇಕ ತರದ ಅಗ್ರಿಕಲ್ಚರ್ ಪ್ರೊಡ್ಯೂಸ್ ಬೆಳೆಗಳು ಇವೆ. ಈ ಅಗ್ರಿಕಲ್ಚರ್ ಪ್ರೊಡ್ಯೂಸ್ ಬೆಳೆಗಳನ್ನು ಪ್ರೋಸೆಸ್ ಮಾಡುವಂಥ ಪ್ರೋಸೆಸ್ ಯೂನಿಟ್‌ಗಳು ಹಿಂದೆ ನಾಲ್ಕೈದು ಇದ್ದವು. ಈಗ ಅವುಗಳನ್ನು ಹೆಚ್ಚು ಮಾಡುವುದಕ್ಕೆ ಏನು ಮಾಡಿದ್ದೀರಿ? ಮೂರನೆಯದಾಗಿ ಗ್ರೀನ್ ಫಾಡರ್ ಬಗ್ಗೆ ಹೇಳಿದ್ದೀರಿ. ಗ್ರೀನ್ ಫಾಡರ್ ಬಗ್ಗೆ ತಮ್ಮದೇ ಆದ ಜಿಲ್ಲೆಯಲ್ಲಿ ನಾನು ಮಂತ್ರಿಯಾಗಿದ್ದಾಗ ಒಂದು ಯೋಜನೆಯನ್ನು ಪ್ರಾರಂಭ ಮಾಡಿದ್ದೆ. ದುರ್ದೈವದಿಂದ ಮತ್ತು ಅಧಿಕಾರಿಗಳ ಅಲಕ್ಷ್ಯದಿಂದ ಅದು ಇವತ್ತಿನ ದಿವಸ ಹಾಳಾಗಿ ಹೋಗಿದೆ. ಅದನ್ನು ವಿವೇಚನೆಯುಳ್ಳಂತವಾಗಿ ಅಭಿವೃದ್ಧಿ ಮಾಡುವುದಕ್ಕಾಗಿ ಹೆಚ್ಚಿನ ದಕ್ಷತೆಯುಳ್ಳ ಅಧಿಕಾರಿಗಳನ್ನು ಹೆಚ್ಚು ಪಗಾರ ಕೊಟ್ಟು ನೇಮಿಸಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಅದು ಬಿಟ್ಟು ಇದಕ್ಕಾಗೇ ಒಂದು ಪ್ರತ್ಯೇಕ ಕಾರ್ಪೋರೇಷನ್ ಹೊಸದಾಗಿ ಮಾಡುವುದಕ್ಕೆ ಹೋಗಬಾರದೆಂದು ನಾನು ಸಲಹೆ ಮಾಡುತ್ತೇನೆ. ಗದಗ್ ತಾಲ್ಲೂಕಿನಲ್ಲಿ ನೀರಿನ ಅನುಕೂಲತೆಯನ್ನು ಕಲ್ಪಿಸುವುದಕ್ಕಾಗಿ ಕೇಂದ್ರ ಸರ್ಕಾರದಿಂದ ಮತ್ತು ಎಲ್.ಐ.ಸಿ.ಯಿಂದ ಹಣವನ್ನು ಪಡೆದಿದ್ದರೂ ಸಹ ಆ ಹಣವನ್ನು ಉಪಯೋಗ ಮಾಡಿ ನೀರಿನ ಯೋಜನೆಯನ್ನು ಜಾರಿ ಮಾಡಿಲ್ಲ. ಹೊಸದಾಗಿ ಹಣವನ್ನು ಕೊಡುವ ಬಗ್ಗೆ ಸಹ ಇದರಲ್ಲಿ ತೋರಿಸಿಲ್ಲ. ಗದಗ್ ತಾಲ್ಲೂಕಿನಿಂದ ಕೆ. ಹೆಚ್. ಪಾಟೀಲ್ ಆರಿಸಿ ಬಂದಿದ್ದಾರೆ, ಅದಕ್ಕೋಸ್ಕರ ಇದನ್ನು ಕಡೆಗಣಿಸಬೇಕು ಎನ್ನುವ ದೃಷ್ಟಿಯಿಂದ ಏನಾದರು ಮಾಡಲಿಲ್ಲವೋ ಹೇಗೆ ಎಂದು ನಾನು ಕೇಳುತ್ತಿದ್ದೇನೆ. ಇನ್ನು ಡಿಸ್ಟ್ರಿಕ್ಟ್ ಫಾರ್ಮೇಷನ್ ಸಲುವಾಗಿ ತಾವು ಒಂದು ಕಮೀಷನ್ ರಚನೆ ಮಾಡಿದ ಮೇಲೆ ಆ ಕಮೀಷನ್ನಿಂದ ವರದಿ ಬಂತು. ಮಾನ್ಯ ಬೊಮ್ಮಾಯಿಯವರು ಇದರ ಬಗ್ಗೆ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ತೀರ್ಮಾನ ಮಾಡಲಾಗುವುದೆಂದು ಹೇಳಿದ್ದರು. ಆದರೆ, ಇನ್ನೂ ಏನೂ ತೀರ್ಮಾನ ಮಾಡಿಲ್ಲ. ಈಗಲಾದರೂ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೇ ಪ್ರಶ್ನೆಯನ್ನು ಮಾನ್ಯ ಬಂಗಾರಪ್ಪನವರು ಎತ್ತಿದ್ದಾರೆ ಗೇಣಿದಾರರಿಗೆ ಮತ್ತು ಲ್ಯಾಂಡ್ ಓನರ್ಸ್‌ಗೆ ಹಣವನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಕಾಯಿದೆಯನ್ನು ಪೂರ್ವಾನ್ವಯಗೊಳಿಸಿ ರೈತರಿಗೆ ಕೊಡತಕ್ಕಂಥಾದ್ದು ಇದರಲ್ಲಿ ಇಲ್ಲ. ಯಾರು ಈಗಾಗಲೇ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡಿದ್ದಾರೋ. ಅವರು ಸಾಲವನ್ನು ಕೊಟ್ಟಿದ್ದರೆ ಅದನ್ನು ಮತ್ತೆ ವಾಪಸ್ ಕೊಡತಕ್ಕಂತಾದ್ದು ಇದರಲ್ಲಿ ಇಲ್ಲ. ಇನ್ನು ಮುಂದೆ ಯಾರು ಸಾಲವನ್ನು ಕೊಡಬೇಕಾಗಿದೆಯೋ ಅಂಥವರ ಬಗ್ಗೆ ಏನು ಮಾಡಬೇಕು ಎಂಬ ಬಗ್ಗೆ ಚರ್ಚೆಯಾಗುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಅದರ ಬಗ್ಗೆ ಆರ್ಡರ್ ಕಳುಹಿಸಿಕೊಟ್ಟಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಆರ್ಡರ್ ಕಳುಹಿಸಿಕೊಡದಿದ್ದರೆ ನಿಮಗೂ ಒಂದು ಕಾಪಿಯನ್ನು ಕಳುಹಿಸಿಕೊಡುತ್ತೇನೆ. ಆಮೇಲೆ, ಮಾನ್ಯ ಮೊಯಿಲಿಯವರು ತಂಮಂಕೂರು ತಾಲ್ಲೂಕಿನಲ್ಲಿ ಹೇಮಾವತಿ ಯೋಜನೆಗೆ ಕಾಲುವೆ ತೋಡುವ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಅವರು ತಮ್ಮ ಮನಸ್ಸಿನಲ್ಲಿ ಯಾವ ಅನುಮಾನ ಇಟ್ಟುಕೊಳ್ಳುವ ಅಗತ್ಯ ಇಲ್ಲ. ಈಗಾಗಲೇ ಅದಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಇದರಲ್ಲಿ ಚೀಫ್ ಇಂಜಿನೀಯರ್ ಆಫೀಸ್ ಸಿಬ್ಬಂದಿ ವೆಚ್ಚಕ್ಕಾಗಿ ೨ ಲಕ್ಷ ಕೊಟ್ಟಿದೆ. ಇದರಲ್ಲಿ ಎರಡು ಜೋನ್ ಇವೆ. ಮತ್ತೆ ಯು.ಕೆ.ಪಿ. ವಿಚಾರ ಹೇಳಿದರು. ಲಿಫ್ಟ್ ಇರಿಗೇಶನ್‌ನಲ್ಲಿ ಲೆಕ್ಕ ತೋರಿಸಿಲ್ಲ ಎಂದು. ಯು.ಕೆ.ಪಿ.ನಲ್ಲಿ ನಾವು ಒಟ್ಟು ೮೫ ಕೋಟಿ ರೂಪಾಯಿಗಳನ್ನು ಈ ಪ್ರಕಾರವಾಗಿ ಕೊಟ್ಟಿದ್ದೇವೆ. ಒಂದು Dam zone including—ಮುಳಬಾಗಿಲು ಲಿಫ್ಟ್ ಇರಿಗೇಶನ್ ಸ್ಕೀಮ್ ಡ್ಯಾಮ್ ಜೋನ್, ಅದನ್ನು ಸೇರಿಸಿದ್ದೇವೆ. ಅದರ ಭಾಗ ಇದು. ಇರಿಗೇಶನ್ ಸ್ಕೀಮ್‌ನಲ್ಲಿ ಅದು ಬರುತ್ತದೆ. ಕೆನಾಲ್ ಜೋನ್...

ಶ್ರೀ ಎಸ್. ಬಂಗಾರಪ್ಪ.—ವಿವರವಾದಂತಹ ಎಸ್ಟಿಮೇಟ್‌ನಲ್ಲಿ ಅದು ಬರಬೇಕಾಗಿತ್ತು. ಬರಲಿಲ್ಲ ಎಂದು ನಮಗೆ ಅನುಮಾನ...

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ವಿವರಗಳು ಈ ಪುಸ್ತಕದಲ್ಲಿ ಇರಬೇಕು. ಇಲ್ಲದಿದ್ದರೆ ಈ ಪುಸ್ತಕವನ್ನು ನಮಗೆ ಏಕೆ ಕೊಡಬೇಕು? ಒಂದು ವೇಳೆ ಇದೇ ಪುಸ್ತಕದಲ್ಲಿ ಇರದಿದ್ದರೆ, ಇನ್ನೊಂದು ಪುಸ್ತಕವನ್ನು ಹೊಸದಾಗಿ ಪ್ರಿಂಟ್ ಮಾಡಿಸಿ ಕಳುಹಿಸಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮೊಯಿಲಿಯವರು ಅರ್ಥಮಂತ್ರಿಗಳಾಗಿ ಕೆಲಸ ಮಾಡಿದ ಅನುಭವಸ್ಥರು. ನಾವುಗಳು ಬೇರೆಯವರಿಗೆ ಹೇಳುವ ರೀತಿಯಲ್ಲಿ ತನುಗೂ ಹೇಳಬಾರದು. ತಮಗೆ ಎಲ್ಲಾ ವಿಷಯಗಳು ಗೊತ್ತಿವೆ. ಪ್ರತಿಯೊಂದಕ್ಕೂ ಅಂದರೆ ಸಣ್ಣ ಸಣ್ಣ ವಿಷಯಗಳಿಗೂ ಅಕೌಂಟ್ಸ್ ಕೊಡಬೇಕಾಗಿಲ್ಲ. ಕೆರೆ ಕಟ್ಟುವಾಗ ತೂಬಿಗೆ ಒಂದು ಅಕೌಂಟ್ ಕೊಡಬೇಕಾಗಿಲ್ಲ. ಅದರಂತೆ ಬೇರೆ ಬೇರೆ ಯಾಗಿಲೆಕ್ಕ ಕೊಡಬೇಕಾಗಿಲ್ಲ. It is a component. The entire project is consisting of seven lift irrigation and flow irrigation schemes. It is one of the components. There is no need to have a separate head for that. It comes under the purview of the Dam Zone.

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು ಅದು ಯಾವುವು ಎಂದು ವಿವರಗಳನ್ನು ಕೊಡಿ. ಅದರಲ್ಲಿ ಲಿಫ್ಟ್ ಇರಿಗೇಷನ್ಸ್ ಯಾವುವು ? ಡ್ಯಾಮ್ಸ್ ಯಾವುವು ? ಇತ್ಯಾದಿ ವಿವರವಾಗಿ ಹೇಳಿದರೆ ಒಳ್ಳೆಯದು.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಇಲಾಖೆಯ ಮೇಲಿನ ಚರ್ಚೆಯ ಸಂದರ್ಭದಲ್ಲಿ ಎಲ್ಲಾ ವಿವರಗಳನ್ನು ಕೊಡುತ್ತೇನೆ........

ಶ್ರೀ ಎಂ. ವೀರಪ್ಪಮೊಯಿಲಿ.—ಇದೊಂದು ಮೋಸ, ಮಿಸ್‌ಲೀಡಿಂಗ್ ಎಸ್ಟಿಮೇಟ್. This is a misleading statement. It is highly surprising that Dam Zone lift irrigation project comes here. Where is the sanctity of the document ? What are we to do about this document ? At least the amount should be known.

(ಗೊಂದಲ)

ಅಧ್ಯಕ್ಷರು.—ಅವರಿಗೆ ತಮ್ಮ ಮಾತುಗಳನ್ನು ಆಡಿ ಮುಗಿಸಲು ಅವಕಾಶ ಮಾಡಿ.........

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೇ......

ಶ್ರೀ ಎಂ. ವೀರಪ್ಪಮೊಯಿಲಿ.—ಸರಿಯಾದ ವಿವರಗಳು ಇಲ್ಲದ ಪುಸ್ತಕವನ್ನು ನಮಗೆ ಕೊಟ್ಟರೆ, ಇದನ್ನು ನಾವು ಏನು ಮಾಡಬೇಕು ?

ಶ್ರೀ ಎಚ್. ಡಿ. ದೇವೇಗೌಡ.—ಯು.ಕೆ.ಪಿ. ಪ್ರಾಜೆಕ್ಟ್ ಏನು ಇದೆಯೋ, ಅದರಲ್ಲಿ ಫ್ಲೋ ಇರಿಗೇಷನ್, ಲಿಫ್ಟ್ ಇರಿಗೇಷನ್, ಎಲ್ಲವೂ ಸೇರಿಯೇ ಒಂದು ಯೋಜನೆಯನ್ನು ನಾವು ರೂಪಿಸಿರ

ತಕ್ಕಂಥಾದ್ದು. ಇದನ್ನು ನಾನು ಹೊಸದಾಗಿ ರೂಪಿಸಿದ್ದುದು ಅಲ್ಲ. ಹಿಂದಿನಿಂದಲೂ ಇದು ನಡೆದು ಕೊಂಡು ಬಂದಂಥಾದ್ದು. ಯು. ಕೆ. ಪಿ. ಪ್ರಾಜೆಕ್ಟ್‌ನಲ್ಲಿ ಫ್ಲೋ ಇರಿಗೇಷನ್, ಲಿಫ್ಟ್ ಇರಿಗೇಷನ್, ಅಷ್ಟನ್ನೂ ಒರಿಜನಲ್ ಪ್ಲಾನಿಂಗ್‌ನಲ್ಲಿ contemplate ಮಾಡಿದ್ದೇವೆ. ಅದನ್ನು ಸಭೆಯ ಮುಂದೆ ಬೇಕಾದರೆ ಇಡುತ್ತೇವೆ. ಈ ವಿಚಾರವನ್ನು ನಾವು ಬೇರೆಯವರಿಗಾದರೆ ಅರ್ಥವಾಗಲಿಕ್ಕಿಲ್ಲ ಎಂದು ಹೇಳಬಹುದು. ಆದರೆ ತಮಗೆ When the Government has taken a decision to construct that project seven lift irrigation schemes. ಮತ್ತು ಫ್ಲೋ ಇರಿಗೇಷನ್ ಸ್ಕೀಮ್‌ನ್ನು ಒಟ್ಟಾಗಿ ಕಾಂಪ್ರಹೆನ್ಸೀವ್ ಮಾಡಿದ್ದುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾಡಿ ತಾವುಗಳು ಮಾಡಬೇಕೆಂದು ನಾವುಗಳು ಕೇಳುತ್ತಾ ಇರುವುದು ಪ್ಲಾನಿಂಗ್ ಅಕೌಂಟ್ ಇರುವಾಗ, ಕೆನಾಲ್ ಅಕೌಂಟ್ ಇರುವಾಗ, ಲಿಫ್ಟ್ ಇರಿಗೇಷನ್‌ಗೆ should not the Dam Zone Lift Irrigation beseparated? ದಯಮಾಡಿ ಇರಿಗೇಷನ್ ಚರ್ಚೆಯ ಸಮಯದಲ್ಲಿ ವಿವರಗಳನ್ನು ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಇಲಾಖೆಯ ಮೇಲಿನ ಬೇಡಿಕೆ ಬಂದಾಗ ಬೇಕಾದಷ್ಟು ಪ್ರಶ್ನೆಗಳನ್ನು ಕೇಳಬಹುದು. ಅದಕ್ಕೆ ಅವಕಾಶ ಇದೆ.

ಅಧ್ಯಕ್ಷರು.—ಹೌದು ಅದು ಸರಿಯಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಎಸ್ಟಿಮೇಟ್‌ನಲ್ಲಿ ದೇವೇಗೌಡರದ್ದು ಒಂದು ಮತ್ತು ಮುಖ್ಯ ಮಂತ್ರಿಗಳದ್ದು ಒಂದು ಎಂದು ಇದೆಯೋ ? ಸರಕಾರದಲ್ಲಿ ಹೀಗೆ ಎರಡು ಎಸ್ಟಿಮೇಟ್ ಇದೆಯೋ ?

ಅಧ್ಯಕ್ಷರು.—ಮಾನ್ಯ ವೀರಪ್ಪಮೊಯಿಲಿಯವರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಡ್ಯಾಮ್ ಅಕೌಂಟ್ ಎಂದು ಇರುತ್ತದೆ......

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಮಾನ್ಯ ಕೆ. ಎಚ್. ಪಾಟೀಲ್‌ರವರು ಎರಡು ಸೂಚನೆ ಗಳನ್ನು ಕೊಟ್ಟಿದ್ದಾರೆ......

ಶ್ರೀ ಎಸ್. ಬಂಗಾರಪ್ಪ.—ದೇವೇಗೌಡರ ಪ್ರಕಾರ ಅದು ಆರ್‌ಟಿ ಇದ್ದರೆ ಅಡ್ಡಿಯಿಲ್ಲ ಏಕೆಂದರೆ. It leads to utter confusion. ಈ ಬಗ್ಗೆ ವಿವರವಾದಂತಹ ಉತ್ತರ ನಮಗೆ ಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಅಕೌಂಟ್ಸ್ ಸಿಸ್ಟಮನ್ನು ಬದಲಾಯಿಸಬೇಕೆಂದರೆ ಅದನ್ನು ತಾವು ಹೇಳಿ, ಇದರಲ್ಲಿ ಸ್ಯಾಂಕ್ಟಿಟಿ ಪ್ರಶ್ನೆ ಇಲ್ಲ. ಹೊಸದಾಗಿ ಯಾವುದನ್ನೂ ನಾವು ಮಾಡಲಿಲ್ಲ. ಇನ್ನೂ ಎರಡು ದಿವಸ ಟೈಮಿದೆ, ನನ್ನ ಇಲಾಖೆಯ ಬೇಡಿಕೆಗಳು 10 ಅಥವಾ 11 ರಂದು ಚರ್ಚೆಗೆ ಬರಬಹುದು. ಆಗ ವಿವರವಾಗಿ ಚರ್ಚೆ ಮಾಡೋಣ ಮಾನ್ಯ ಮೊಯಿಲಿಯವರು ತುಂಬಾ ಡೀಪಾಗಿ ಸ್ಟಡಿ ಮಾಡ್ತಾರೆ. ಅವರಿಗೆ ಬೇರೆಯವರಿಗೆ ಹೇಳಿದ ಹಾಗೆ ಹೇಳಿದರೆ ಸಾಲದು. ಯು ಕೆ.ಪಿ. ಯಲ್ಲಿ ಘಟಪ್ರಭಾ ಮಲಪ್ರಭಾ ಹೀಗೆ ಹಲವಾರಿವೆ. ಅಲ್ಲೆಲ್ಲ ಲಿಫ್ಟ್ ಇರಿಗೇಷನನ್ನು ಮೂಲ ಯೋಜನೆಯಲ್ಲೇ ಕೊಟ್ಟಿದ್ದೇವೆ. ಪ್ರತ್ಯೇಕವಾಗಿ ಎಂಟೈರ್ ಲಿಫ್ಟ್ ಇರಿಗೇಷನ್, ಫ್ಲೋ ಇರಿಗೇಷನ್‌ಗಳಿಗೆಂದು, ಅಕೌಂಟ್ಸ್ ಇಟ್ಟಿಲ್ಲ. ಮುಂದೆ ಬೇಕಾದರೆ ಈ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಸಿವಿಲ್ ಸರ್ವಿಸ್ ರೂಲ್ಸ್‌ಗಳನ್ನು ಬದಲಾವಣೆ ಮಾಡಿ ಯಾವ್ಯಾವ ಅಧಿಕಾರಿಗಳು ಲಂಚ ತಿಂದಿದ್ದಾರೋ, ಅಂಥವರನ್ನು ಜೈಲಿಗೆ ತಳ್ಳುವ ತಿದ್ದುಪಡಿ ತರುತ್ತೇ ವೆಂದು ಗೌಳಳನೇ ಇಸವಿಯ ಬಜೆಟ್‌ನಲ್ಲೇ ಹೇಳಿದ್ದಾರೆ. ಆದರೆ ಅದಕ್ಕೆ ಇದುವರೆಗೂ ಉತ್ತರ ಕೊಡಲಿಲ್ಲ. ತಾವು ಅಧಿಕಾರಕ್ಕೆ ಬಂದಾಗ ಷೆಡ್ಯೂಲ್ ಕ್ಯಾಸ್ಟ್ ಕಮೀಷನ್ಸ್ ರಿಪೋರ್ಟ್ ಅನ್ನು ಅವ ಲೋಕಿಸಿ ಕಾರ್ಯಗತ ಮಾಡಲಾಗುವುದೆಂದು ಹೇಳಿದ್ದಿರಿ. ಅದರ ಬಗ್ಗೆ ಈಗ ಹೇಳಲಿಲ್ಲ. ಹಾಗೂ ಅದನ್ನು ಜಾರಿಗೂ ಕೊಡಲಿಲ್ಲ. ಆಮೇಲೆ ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರೀಸ್ ಬಗ್ಗೆ ನಿಮ್ಮ ಭಾವನೆ ಏನೇ ಇರಲಿ, ನನ್ನ ಒಂದು ಸಜೆಷನ್ ಹೇಳುತ್ತೇನೆ, ಏನೆಂದರೆ, ಈ ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರೀಸ್‌ಗಳನ್ನು ಹಾಳು ಮಾಡುವುದಕ್ಕೆ ಹೋಗಬೇಡಿ. ಆಯಾಯ ಫ್ಯಾಕ್ಟರಿಗಳಿಗೆ ಆಯಾ ವಿಷಯಗಳಲ್ಲಿ ಎಕ್ಸ್‌ಪರ್ಟ್ ಆಗಿರುವವರನ್ನೇ ಹಾಕಿ. ಅರ್ಧಂಬರ್ಧ ಕಲಿತ ಐ.ಎ.ಎಸ್. ಅಧಿಕಾರಿಗಳನ್ನು ಕಳಿಸಿ ಅವನ್ನು ಹಾಳು ಮಾಡಬೇಡಿ ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಪ್ರಾರಂಭ ಮಾಡುವಾಗಲೇ ಮಾನ್ಯ ಬಸವಲಿಂಗಪ್ಪನವರದಕ್ಕೆ ನನ್ನನು ಸೇರಿಸುತ್ತೇನೆ. ಏನೆಂದರೆ ನೀವು ಪ್ರತಿಗಾಮಿಗಳಲ್ಲ ಎಂದು ತಾವು ಹೇಳುತ್ತೀರಿ. ಆದರೆ ಬಸವಲಿಂಗಪ್ಪನವರು ಹೇಳಿದ ಹಾಗೆ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಬಗ್ಗೆ ಕಾಳಜಿ ಇದ್ದರೆ, ಈ ರೀತಿ ಯೋಚನೆ ಮಾಡಬೇಡಿ. ಕೇಂದ್ರ ಸರ್ಕಾರದ ರಿಪೋರ್ಟ್ ತಗೊಂಡು ನೋಡಿದರೆ ಗೊತ್ತಾಗುತ್ತದೆ. ಬ್ಯೂರೋ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್‌ರವರ ರಿಪೋರ್ಟ್ ಇದೆ, ಬೇರೆ ಸರ್ವೆ ವರದಿಗಳಿವೆ, ಮೊನ್ನೆ ಮೊನ್ನೆ ಕೇಂದ್ರದ ಸಚಿವರಾದ ಶ್ರೀ ಕೆ. ಕೆ. ತಿವಾರಿಯವರು ಮಾತನಾಡಿದ್ದಾರೆ. ಇವರೆಲ್ಲ ಏನು ಹೇಳುತ್ತಾರೆಂದರೆ, ಈ ಕ್ಷೇತ್ರದಲ್ಲಿ ಲಾಸ್ ಆಗಿದೆ ನಿಜ, ಆದರೆ ಅದನ್ನು ಸರಿ ಮಾಡುವುದಕ್ಕೆ ಏನೇನು ಕಾರ್ಯಕ್ರಮ ಹಾಕಿಕೊಳ್ಳಬೇಕೋ ಅದನ್ನು ಹಾಕಿಕೊಂಡು ಇಂಪ್ಲಿಮೆಂಟ್ ಮಾಡಬೇಕು, ಉದಾಹರಣೆಗೆ ಅಲ್ಲಿ ಪ್ರೊಫೆಷನಲ್ ಮ್ಯಾನೇಜ್‌ಮೆಂಟ್ ಇರುವುದಿಲ್ಲ, ವರ್ಕರ್ಸ್ ಪಾರ್ಟಿಸಿಪೇಷನ್ ಮ್ಯಾನೇಜ್‌ಮೆಂಟ್‌ನಲ್ಲಿ ಇರುವುದಿಲ್ಲ ಹೀಗೆ ಮೂರ್ನಾಲ್ಕು ಕಾರಣ ಹೇಳುತ್ತಾರೆ. ಈ ಬಗ್ಗೆಯೆಲ್ಲಾ ನಿಮಗೇನಾದರೂ ತೊಂದರೆ ಇದ್ದರೆ ನಮ್ಮನ್ನು ಕರೆಸಿ ವಿಚಾರ ವಿನಿಮಯ ಮಾಡಿ ನಮ್ಮ ಸಂಪೂರ್ಣ ಸಹಕಾರ ನಿಮಗಿದೆ. ಹೀಗೆ ಮಾಡಲಾಗದಿದ್ದರೆ ನಿಮ್ಮ ದೃಷ್ಟಿಕೋನವನ್ನು ಪ್ರತಿಗಾಮಿ ಎಂದು ಹೇಳಬೇಕಾಗುತ್ತದೆ. ಇವಕ್ಕೆ ಸ್ಪಷ್ಟವಾಗಿ ಉತ್ತರವನ್ನು ಕೊಡಿ.

ಎರಡನೆಯದು, ಟ್ಯಾಕ್ಸೇಷನ್ ಬಗ್ಗೆ "To collect more from those who have the capacity to pay, to ensure social justice". ಎಂದು ಇಲ್ಲಿ ಒಳ್ಳೊಳ್ಳೆ ಪದಗಳನ್ನೇನೋ ಬಳಸಿದ್ದೀರಿ. ಆದರೆ ವಾಸ್ತವ ಸಂಗತಿ ಏನೆಂದರೆ, you are collecting more from those who have no capacity to pay. ಅದೂ ಸಹ ಮುಖ್ಯವಾಗಿ ಕಾಫಿ ಟೀ ಮತ್ತು ಸ್ನೇಕ್ಸ್, ಇವುಗಳ ಮೇಲಿನ ತೆರಿಗೆ ಬೇರೆ ಕಡೆಗಳಿಗೆ ಕಂಪೇರ್ ಮಾಡಿದರೆ ನಮ್ಮದು ಕಡಿಮೆ ಇತ್ತು, ಅದಕ್ಕೆ ಜಾಸ್ತಿ ಮಾಡಬೇಕಾಯಿತೆಂದು ಹೇಳಿದಿರಿ. ಆದರೆ ಈ ಮೂರನ್ನೂ ಬಳಸುವುದು ಸಾಮಾನ್ಯ ಮನುಷ್ಯರು. ಇವರ ಮೇಲೆ ತೆರಿಗೆ ಹಾಕಿದರೆ. That does not bring credit to you at all. 1983 ರಲ್ಲಿ 'We are going to abolish the Profession Tax.' ಎಂದು ಹೇಳಿದ್ದೀರಿ ಇದಕ್ಕೆ ಅಮೆಂಡ್‌ಮೆಂಟ್ ತಂದಿರಿ, ಗ್ರಾಸ್ ಸ್ಯಾಲರಿ ಮೇಲೆ ಹಾಕಬೇಕೋ ಅಥವಾ ನೆಟ್ ಸ್ಯಾಲರಿ ಮೇಲೆ ಹಾಕಬೇಕೋ ಎಂದು ಜಿಜ್ಞಾಸೆ ಬಂತು ಮತ್ತೆ ಗ್ರಾಸ್ ಸ್ಯಾಲರಿ ಎಂದು ಮಾಡಿ ಎಲ್ಲರ ಮೇಲೆ ಇದನ್ನು ಹೊರಿಸುವುದಕ್ಕೆ ಹೋದಿರಿ, ಇದರಿಂದಾಗಿ ಕಾರ್ಮಿಕರ ಮೇಲೆ ಬಹಳ ಹೊರೆ ಬೀಳುತ್ತಿದೆ. ಬೆಂಗಳೂರು, ಹುಬ್ಬಳ್ಳಿ, ದಾವಣಗೆರೆ ಮುಂತಾದ ನಗರಗಳಲ್ಲಿ ಅವರೂ ಕೂಡ ತಮಗೆ ಮತವನ್ನು ನೀಡಿದ್ದಾರೆ, ಆದುದರಿಂದ ಅವರ ವಿಶ್ವಾಸವನ್ನು ತಾವು ಗಳಿಸಬೇಕು. ಮೊದಲೇ ಅವರು ಶೋಷಣೆಗೆ ಸಿಕ್ಕಿದ್ದಾರೆ, ಅವರಿಗೆ ತಾವು ಅನುಕೂಲವನ್ನು ಮಾಡಿಕೊಡಿ. ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಮೊದಲು ಏನು ಆಶ್ವಾಸನೆ ನೀಡಿದ್ದಿರಿ, ಅದರ ಪ್ರಕಾರ ನಡೆದುಕೊಳ್ಳಿ. ವರ್ಕಿಂಗ್ ಕ್ಲಾಸ್ ಬಗ್ಗೆ ಒಳ್ಳೆಯ ಮಾತನ್ನು ಹೇಳಿದ್ದೀರಿ. I am thankful to you. Buy from 1983 to 1987 you have not brought a single enactment in regard to labour ಅಲೋಕೇಷನ್ ಬಗ್ಗೆ ಬಡ್ಜೆಟ್‌ನಲ್ಲಿ ನೋಡಿದರೆ, ಒಂದು ನಯಾಪೈಸೆಯನ್ನು ಜಾಸ್ತಿ ಮಾಡಿಲ್ಲ. ಅದರ ಬದಲಿಗೆ ನಿಮ್ಮ ನೀತಿ ಬೇರೆದಾರಿಯಲ್ಲಿ ಹೋಗುತ್ತಿದೆ ಕಾರ್ಮಿಕ ಮಂತ್ರಿಗಳು ಎಂದು ನಿಮ್ಮಲ್ಲಿ ಪ್ರತ್ಯೇಕ ಇಲ್ಲ, ರೆವಿನ್ಯೂ ಮತ್ತು ಲೇಬರ್ ಅನ್ನು ಕಂಬೈಡ್ ಮಾಡಿರುವುದರಿಂದಾಗಿ ಈ ಕಾರ್ಮಿಕ ಇಲಾಖೆ ಹಾಳಾಗಿ ಹೋಗುತ್ತಿದೆ. ಇದರ ಬಗ್ಗೆ ಒಂದು ಶಾಸನವನ್ನು ತಂದು ಕಾರ್ಮಿಕರಿಗೆ ರಕ್ಷಣೆಯನ್ನು ನೀಡಬೇಕು. From 1983 to 1987 not a single enactment is brought is regard to the labour. ಅಗ್ರಿಕಲ್ಚರ್ ಲೇಬರ್ಸ್ ಬಗ್ಗೆ ನಾವೇ ಬರೆದುಕೊಟ್ಟಿದ್ದೇವೆ ಅಗರ ಬತ್ತಿ ಲೇಬರ್ಸ್ ಬಗ್ಗೆ ನಾವೇ ಬರೆದುಕೊಟ್ಟಿದ್ದೇವೆ ಏನೂ ಆಗಿಲ್ಲ, ಅದು ನಿಮ್ಮ ಹತ್ತಿರ ಬಂದಿದ್ದರೂ ಸಹ ಅದರ ಬಗ್ಗೆ ಸೂಕ್ತ ಗಮನವನ್ನು ಹರಿಸಿಲ್ಲ. ಆದ್ದರಿಂದ ನೀವು ಹೇಗೆ ಪುರೋಗಾಮಿ ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ನಾನು ಇದನ್ನು ಬಹಳ ಅರ್ಥಗರ್ಭಿತವಾಗಿ ಹೇಳಿದ್ದೇನೆ. ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ತಾವು ತೆಗೆದುಕೊಳ್ಳುತ್ತೀರೆಂದು ನಾನು ಭಾವಿಸಿದ್ದೇನೆ. ಇನ್ನು ನಮ್ಮಲ್ಲಿರುವ ಅನೇಕ ಕೈಗಾರಿಕೆಗಳು ಇವತ್ತು ಮುಚ್ಚುತ್ತಿವೆ. ಅದರ ಬಗ್ಗೆ ಮಾನ್ಯ ಪಂಪಾಪತಿಯವರು ಬಹಳವಾಗಿ ಹೇಳಿದ್ದಾರೆ. ಇವತ್ತು ಟೆಕ್ಸ್‌ಟೈಲ್ ಇಂಡಸ್ಟ್ರೀಗಳು, ಇಂಜಿನಿಯರಿಂಗ್ ಇಂಡಸ್ಟ್ರೀಗಳು ತಮ್ಮ ಆರ್ಡರ್ಸ್

ಅನ್ನು ಫಾಲೋ ಮಾಡುತ್ತಿಲ್ಲ. The strangest thing is that the companies do not follow the orders of the Government, Alembic Glass Factory is a profit running company. ಆದರೂ ಕೂಡ ಅದು ಮುಚ್ಚಿದೆ, ಹೀಗಿರಬೇಕಾದರೆ ಇದರ ಬಗ್ಗೆ ದಿಟ್ಟವಾದ ನಿಲುವನ್ನು ತೆಗೆದುಕೊಂಡರೆ ಕಾರ್ಮಿಕ ವರ್ಗದವರಿಗೆ ಅನುಕೂಲವಾಗುತ್ತದೆ ನ್ಯಾಯ ಸಿಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಕೃಷ್ಣನ್‌ರವರ ಪ್ರಶ್ನೆಗೆ ಉತ್ತರ ಕೊಡುವುದೇನೂ ಇಲ್ಲ, ಅವರು ಸಲಹೆ ಮಾಡಿದರೆ ಅದನ್ನು ಪರಿಶೀಲನೆ ಮಾಡುತ್ತೇನೆ. ಲೇಬರ್ಸ್‌ಗೆ ಸಂಬಂಧಪಟ್ಟಂತೆ ಒಂದು ಹೊಸ ಕಾಯಿದೆ ಬರಲಿಲ್ಲವೆಂದು ಹೇಳಿದ್ದಾರೆ, ಅದು ನಮ್ಮ ಪರಿಶೀಲನೆಯಲ್ಲಿ ಇದೆ, ಅದಕ್ಕೆ ಸಂಬಂಧ ಪಟ್ಟಂತಹ ವಿವರವಾದ ಮಾಹಿತಿಯನ್ನು ಕಾರ್ಮಿಕ ಇಲಾಖೆಯ ಡಿಮ್ಯಾಂಡ್ ಬಂದಾಗ ಸಂಬಂಧಪಟ್ಟ ಮಂತ್ರಿಗಳು ಕೊಡುತ್ತಾರೆ. ಮಾನ್ಯ ಬಸವಲಿಂಗಪ್ಪನವರು ಎರಡು ವಿಚಾರವನ್ನು ಹೇಳಿದರು, ಮೊದಲನೆಯದಾಗಿ ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್‌ಗೆ ಐ.ಎ.ಎಸ್. ಅಧಿಕಾರಿಗಳನ್ನು ಹಾಕಿದ್ದೀರಿ. ಅವರಿಗೆ ಬದಲು ಎಕ್ಸ್‌ಪರ್ಟ್ಸ್ ಅನ್ನು ಹಾಕಬೇಕು ಎಂದು ಅವರು ಹೇಳಿದ್ದು ಒಪ್ಪತಕ್ಕಂತಹ ಮಾತು, ಆದರಲ್ಲಿ ಭಿನ್ನಾಭಿಪ್ರಾಯವಿಲ್ಲವೆಂದು ನನಗನ್ನಿಸುತ್ತದೆ. ಆದರೆ ಎಕ್ಸ್‌ಪರ್ಟ್ಸ್ ಅನ್ನು ಎಲ್ಲಿಂದ ಹುಡುಕಿ ತರಬೇಕು ? ಕಂಟ್ರಾಕ್ಟ್ ಮೇಲೆ ನೇಮಕ ಮಾಡಬೇಕೋ ಹೇಗೆ ? ಐ. ಎ. ಎಸ್. ಅಧಿಕಾರಿಗಳು ಡಿಸಿಪ್ಲಿನರಿ ಆಫೀಸರ್ಸ್ ಇರುತ್ತಾರೆಂಬ ಕಾರಣದಿಂದ ಹಾಕಿದ್ದೇವೆ. ಇದರ ಬಗ್ಗೆ ಚರ್ಚೆಯಾಗಿದೆ. ಕೇಂದ್ರ ಸರಕಾರದವರು ಪ್ರಯೋಗ ಮಾಡಿ ನೋಡಿದರು, ಕೆಲವು ಕಡೆ ಸಕ್ಸಸ್ ಆಯಿತು. ಇನ್ನು ಕೆಲವು ಕಡೆ ಸಕ್ಸಸ್ ಆಗಿಲ್ಲ. ನಾವು ಯಾರನ್ನು ಆರಿಸುತ್ತೇವೆ ಅವರು ಅಧಿಕಾರಿಗಳಾಗಿರಲಿ ಅಥವಾ ಹೊರಗಿನವರಾಗಿರಲಿ, ಅವರ ಯೋಗ್ಯತೆ ಮತ್ತು ಅವರ ಪ್ರಾಮಾಣಿಕತೆಯನ್ನು ಅವಲಂಬಿಸಿದೆಯೆಂದು ಹೇಳಲಿಕ್ಕೆ ಬಯಸುತ್ತೇನೆ. ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ Commission ಶಿಫಾರಸ್ಸು ಏನು ಬಂದಿದೆ, ಅದನ್ನು ಒಪ್ಪಿಕೊಂಡಿದ್ದೀರಾ ಎಂದು ಮಾನ್ಯ ಸದಸ್ಯರು ಕೇಳಿದರು. ಎಲ್ಲಾ ಶಿಫಾರಸ್ಸುಗಳನ್ನು ನಾವು ಒಪ್ಪಿಕೊಂಡು ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ವಿವರಣೆಯನ್ನು ಸಂಬಂಧ ಪಟ್ಟ ಮಂತ್ರಿಗಳು ಕೊಡುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಸನ್ಮಾನ್ಯ ಮುಖ್ಯ ಮಂತ್ರಿಗಳು ಸರ್ವೀಸ್ ರೂಲ್ಸ್ ಅನು ಅಮೆಂಡ್ ಮಾಡಿ ಲಂಚ ತೆಗೆದುಕೊಳ್ಳುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಡಿಮ್ಯಾಂಡ್ ಬಂದಾಗ ಹೇಳೋಣವೆಂದು ಇದ್ದೆ, ತಾವು ಇದನ್ನು ಎತ್ತಿದ್ದರಿಂದ ಈಗ ಹೇಳಬೇಕಾಗಿದೆ. ಲಂಚಗುಳಿತನ ಹೋಗಿಲ್ಲವೆಂದು ನಾನು ಒಪ್ಪುತ್ತೇನೆ. ಅದರ ಬಗ್ಗೆ ಸಂದೇಹ ಇಲ್ಲ. ಆದರೆ ಈ ಬಗ್ಗೆ ಕ್ರಮ ತೆಗೆದುಕೊಂಡಂತಹ ಕ್ರಮವನ್ನು ಇಲ್ಲಿ ಹೇಳಿದರೆ ಅದು ಅಪ್ರಸ್ತುತ ಆಗಲಿಕ್ಕಿಲ್ಲ. ನಮ್ಮ ಸರಕಾರ ಆಡಳಿತಕ್ಕೆ ಬಂದ ಮೇಲೆ ವಿಜಿಲೆನ್ಸ್ ಕಮಿಷನ್‌ನಿಂದ ಡಿಟೆಕ್ಟ್ ಆಗಿರತಕ್ಕಂತದ್ದು ಈ ಮೂರು ವರ್ಷಗಳಲ್ಲಿ ಎಷ್ಟು ಎಂದರೆ ಅದರ ವಿವರವನ್ನು ಇಲ್ಲಿ ಕೊಡುತ್ತೇನೆ. ಲೋಕಾಯುಕ್ತ ಬಂದು ಒಂದು ವರ್ಷವಾಯಿತು. ಈ ಮೂರು ವರ್ಷಗಳಲ್ಲಿ ಡಿಟೆಕ್ಟ್ ಆಗಿರತಕ್ಕಂತದ್ದನ್ನು ಮಾತ್ರ ಹೇಳುತ್ತೇನೆ.

ಒಟ್ಟು ೫೧೨೭ ಕೇಸ್‌ಗಳು ಈ ಲಂಚಗುಳಿತನದ್ದು ಆಗಿದೆ. ಅದರ ಮೇಲೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ನಂಬರ್ ಆಫ್ ಕೇಸಸ್ ರೆಕಮೆಂಡೆಡ್ ಟು ದಿ ಗೌರ್ನಮೆಂಟ್ ಫಾರ್ ಟೇಕಿಂಗ್ ಆ್ಯಕ್ಷನ್ ೭೨೭, ನಂಬರ್ ಆಫ್ ಕೇಸಸ್ ರೆಕಮೆಂಡೆಡ್ ಟು ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ ಫಾರ್ ಟೇಕಿಂಗ್ ಆ್ಯಕ್ಷನ್ ೬೬೦, ನಂಬರ್ ಆಫ್ ಕೇಸಸ್ ಫೈಲ್ಡ್ ಬಿಫೋರ್ ದಿ ಹೈಕೋರ್ಟ್ ೧೨೦ ಮತ್ತು ಇನ್ನಿತರೆ ೬೮೯. ಈಗ ನಾವು ಬೇರೆ ಬೇರೆ ಡಿಪಾರ್ಟ್‌ಮೆಂಟಿನಲ್ಲಿ ಅಗ್ರಿಕಲ್ಚರಲ್ ಮತ್ತು ಅನಿಮಲ್ ಹಸ್‌ಬೆಂಡ್ರಿನಲ್ಲಿ ಸಸ್ಪೆನ್ಸನ್ ಇಟ್ಟಿರತಕ್ಕಂಥ ಆಫೀಸರ್‌ಗಳು ೧೭, ಈಗ ಕಳೆದ ಮೂರು ವರ್ಷದ್ದು ಹೇಳುತ್ತೇನೆ. ಕೋ-ಆಪರೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ೩೧-ಜನರನ್ನು ಸಸ್ಪೆನ್ಸನ್‌ನಲ್ಲಿ ಇಟ್ಟಿದ್ದೇವೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ೨೪, ಫೈನಾನ್ಸ್‌ನಲ್ಲಿ ಇಲ್ಲ ಫಾರೆಸ್ಟ್‌ನಲ್ಲಿ ೨೨, ಹೆಲ್ತ್ ಮತ್ತು ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ೪೭, ಇನ್‌ಫರ್ಮೇಷನ್ ಟೂರಿಸಂ ಮತ್ತು ಯೂತ್ ಸರ್ವೀಸಸ್‌ನಲ್ಲಿ ೧೫, ಇಂಡಸ್ಟ್ರಿಯಲ್ಲಿ ೧, ಎಲ್. ಅಂಡ್ ಪಿ.ಎ. ನಲ್ಲಿ ೨, ಪಿಡಬ್ಲ್ಯೂಡಿ ನಲ್ಲಿ ೭೧, ಆ ಮೇಲೆ ಸೋಷಿಯಲ್ ವೆಲ್‌ಫೇರ್‌ನಲ್ಲಿ ೪೧, ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನಲ್ಲಿ ೪, ಡಿ.ಪಿ.ಎಲ್.ಆರ್ ನಲ್ಲಿ

೪, ಒಟ್ಟು ೩೭೬ ಆಫೀಸರ್ಸ್‌ಗಳನ್ನು ಸಸ್ಪೆನ್ಸನ್‌ನಲ್ಲಿ ಇಟ್ಟಿದ್ದೇವೆ. ಇದು ಅಪಾದನೆ ಬಂದಿದ್ದು ಮತ್ತು ಅವು ಗುರುತರವಾಗಿದ್ದುದರಿಂದ ಈ ರೀತಿ ಮಾಡಿದ್ದೇವೆ. ಆಮೇಲೆ ನಂಬರ್ ಆಫ್ ಇನ್‌ವೆಸ್ಟಿಗೇಟೆಡ ಕೇಸಸ್ ಪೆಂಡಿಂಗ್ ಅಟ್ ದಿ ಎಂಡ್ ಆಫ್ ಪ್ರೀವಿಯಸ್ ಕ್ವಾರ್ಟರ್, ಅದನ್ನು ಹೇಳತಕ್ಕಂಥ ಅಗತ ಇಲ್ಲ. ತನಿಖೆಯನ್ನು ನಡೆಸಿದಂಥದ್ದು ೮೨-೮೩ ರಲ್ಲಿ ತಾಂತ್ರಿಕ ತನಿಖಾ ಆಯೋಗದಲ್ಲಿ ೨೭೮ ಕೇಸ್‌ಗಳು ಸಾಮಾನ್ಯ ತನಿಖಾ ವಿಭಾಗದಲ್ಲಿ ೨೩೯೩ ಕೇಸ್‌ಗಳು. ಒಟ್ಟು ೨೬೭೧ ಕೇಸಸ್‌ಗಳು, ಕ್ರಮ ಕೈಗೊಂಡದ್ದು ೧೯೮೨-೮೩ ರಲ್ಲಿ ೨೬೭೧, ೧೯೮೩-೮೪ ರಲ್ಲಿ ೧೦೪೬, ೧೯೮೪-೮೫ರಲ್ಲಿ ೧೪೧೦ ಕೇಸ್‌ಗಳು ಒಟ್ಟು ೫೧೨೭ ಕೇಸ್‌ಗಳು ಇಷ್ಟರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಸಿಬ್ಬಂದಿ ವರ್ಗದಲ್ಲಿ 'ಎ' ಗುಂಪಿನಲ್ಲಿ ೪೫ ಜನ 'ಬಿ' ಗುಂಪಿನಲ್ಲಿ ೩೮ ಜನ, 'ಸಿ' ಗುಂಪಿನಲ್ಲಿ ೩೮೧ ಜನ, 'ಡಿ' ಗುಂಪಿನಲ್ಲಿ ೬೩, ಇಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಈಗ ಲೋಕಾಯುಕ್ತ, ಉಪಲೋಕಾಯುಕ್ತ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಮೇಲೆ ಹೊಸದಾಗಿ ಅನೇಕ ಕೇಸ್‌ಗಳ ಮೇಲೆ ಕ್ರಮ ಜರುಗಿಸಲಾಗುತ್ತಿದೆ. ಮಾನ್ಯ ಸದಸ್ಯರು ಲಂಚಗುಳಿತನ ನಿಗ್ರಹಿಸಲಿಕ್ಕೆ ಏನಾದರೂ ನಿರ್ದಿಷ್ಟವಾದಂಥ ಉಪಾಯವನ್ನು ಸೂಚಿಸಿದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ನಮ್ಮ ಉದ್ದೇಶವೂ ಕೂಡಾ ಲಂಚಗುಳಿತನವನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕೆಂಬುದೇ ಆಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಸೆಂಟ್ರಲ್ ಅಂಡ್ ಸ್ಟೇಟ್ ರಿಲೇಷನ್‌ಷಿಪ್ ಬಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಜಾಸ್ತಿ ಸ್ಟ್ರೆಸ್ ಮಾಡುತ್ತಿಲ್ಲ ಎಂದು ಹೇಳಿದ್ದೆ. ಎಂಟನೆಯ ಫೈನಾನ್ಸ್ ಕಮಿಷನ್ ಬಂದಮೇಲೆ ಅದಕ್ಕೆ ಮುಂಚಿತವಾಗಿಯೂ ಕೂಡಾ ಅಡ್ಮಿನಿಸ್ಟರ್ಡ್ ಪ್ರೈಸಸ್ ಎಂದು ಹೇಳಿ ಎಕ್ಸೈಜ್ ಡ್ಯೂಟಿ ಹಾಕದೆ ಈ ಮಧ್ಯದಲ್ಲಿ ಹೊಸ ನೀತಿಯನ್ನು ಅನುಸರಿಸಿ ಅಡ್ಮಿನಿಸ್ಟರ್ಡ್ ಪ್ರೈಸಸ. ಎಂದು ಜಾಸ್ತಿ ಮಾಡುತ್ತಿದ್ದಾರೆ. ಎಕ್ಸೈಜ್ ಹಾಕಿದರೂ ಅದರಲ್ಲಿ ನಮಗೆ ಬಾಕಿ ಬರುತ್ತಿತ್ತು. ಇದು ಸರಿಯಲ್ಲ ಎಂದು. ಇದನ್ನು ಎಲ್ಲಾ ರಾಜ್ಯಗಳವರು ಪ್ರೊಟೆಸ್ಟ್ ಮಾಡುತ್ತಿದ್ದಾರೆ, ನಮಗೆ ಎಕ್ಸೈಜ್ ಡ್ಯೂಟಿ ಹಾಕದೆ ಮೋಸ ಮಾಡುತ್ತಿದ್ದಾರೆ. ಏನೋ ಕೊಡುವುದನ್ನು ತಪ್ಪಿಸುವುದಕ್ಕೋಸ್ಕರ ಈ ಅಡ್ಮಿನಿಸ್ಟರ್ಡ್ ಪ್ರೈಸಸ್ ಜಾಸ್ತಿ ಮಾಡುತ್ತಿದ್ದಾರೆ, ಇದರಿಂದ ಹತ್ತಾರು ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಕೇಳಿದ್ದೆ. ಇದರ ಬಗ್ಗೆ ತಾವು ಏನನ್ನೂ ಹೇಳಿಲ್ಲ. ಇದರ ಬಗ್ಗೆ ಏನು ಎಂದು ಹೇಳಬೇಕು, ಇದು ಒಂದು.

ಎರಡನೆಯದಾಗಿ ಸ್ವಾಮಿ, ನಾನು ಓಲ್ಡ್ ಏಜ್ ಪೆನ್‌ಷನ್ ಮತ್ತು ವಿಡೋ ಪೆನ್‌ಷನ್ ಜಾಸ್ತಿ ಮಾಡಬೇಕೆಂದು ಹೇಳಿದ್ದೆ, ಈಗ ಇದು ಬಹಳ ಕಡಿಮೆ ಇದೆ; ಇದನ್ನು ಜಾಸ್ತಿ ಮಾಡಬೇಕೆಂದು ಹೇಳಿದರೆ, ಏತಕ್ಕೋ ಏನೋ ಅವರು ತಲೆ ಅಲ್ಲಾಡಿಸುತ್ತಿದ್ದಾರೆ. ಇದರ ಬಗ್ಗೆ ಗಮನ ಕೊಡುತ್ತೀರಾ ಎಂದು ಕೇಳುತ್ತೇನೆ.

ಮೂರನೆಯದಾಗಿ ಈಗ ಹಂಡ್ರೋ ಮನೆಗಳಿಗೆ ೬ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ, ಈ ರೇಟು ಬಹಳ ಹಿಂದಿನಿಂದಲೂ ಜಾರಿಯಲ್ಲಿದೆ. ಇನ್ನು ಜಾಸ್ತಿ ಮಾಡಿಲ್ಲ. ಆದುದರಿಂದ ಇನ್ನೂ ೧-೧½ ಸಾವಿರ ಜಾಸ್ತಿ ಸಿಗುವ ಹಾಗೆ ಇದನ್ನು ಏರಿಸಬೇಕು ಎಂದು ಹೇಳಿದ್ದೆ ಆ ಬಗ್ಗೆ ಉತ್ತರ ಬರಲಿಲ್ಲ.

ನಾಲ್ಕನೆಯದಾಗಿ ಒಂದು ತಾಲ್ಲೂಕಿನಲ್ಲಿ ೩೦೦ ಮನೆಗಳನ್ನು ಏನು ಕಟ್ಟುತ್ತಿದ್ದಾರೆ, ಅದನ್ನು ಒಂದು ಸಾವಿರಕ್ಕೆ ಏರಿಸಬೇಕು ಎಂದು ಹೇಳಿದ್ದೆ. ಅದರ ಬಗ್ಗೆ ಮರೆತಿದ್ದಾರೆ. ಅದರ ವಿಚಾರದಲ್ಲಿ ಏನು ಮಾಡುತ್ತೀರಾ ?

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಬರಗಾಲದ ಕಾಮಗಾರಿ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಈ ಬಗ್ಗೆ ಈ ಹಿಂದೆ ಏನು ಕಳಕಳಿ ಇತ್ತೋ, ಅದು ಈ ದಿವಸ ಇಲ್ಲ. ಹಿಂದೆ ಈ ಬರಗಾಲ ಕಾಮಗಾರಿಗಳಲ್ಲಿ ಬಹಳ ಕೆಲಸ ನಡೆದಿದೆ, ಜನಗಳಿಗೂ ಕೆಲಸ ಸಿಕ್ಕಿದೆ, ಕೆಲವು ಕೆಲಸಗಳು ಉತ್ತಮವಾಗಿ ಆಗಿವೆ. ಹೋದವರ್ಷ ಯಾವ್ಯಾವ ತಾಲ್ಲೂಕ್‌ಗಳಲ್ಲಿ ಬರಗಾಲ ಇದೆ ಅನ್ನುವುದನ್ನು ನೋಡಿಕೊಂಡು ಘೋಷಣೆ ಮಾಡಿದಿರಿ. ಉದಾಹರಣೆಗೆ, ಶಿವಮೊಗ್ಗಾದಲ್ಲಿರುವ ಒಟ್ಟು ೮೦೦-೯೦೦ ಗ್ರಾಮಗಳ ಪೈಕಿ ೮೦-೯೦ ಗ್ರಾಮಗಳಲ್ಲಿ ಬರಗಾಲ ಇದ್ದರೂ ಕೇವಲ ೩-೪ ಗ್ರಾಮಗಳಲ್ಲಿ ಕೆಲಸ ತೆಗೆದುಕೊಂಡು ಬಾಕಿ ಗ್ರಾಮಗಳಲ್ಲಿ ಕೆಲಸ ತೆಗೆದುಕೊಳ್ಳದ ಕಾರಣ ಜನಗಳು ಅಲೆದಾಡುತ್ತಿದ್ದಾರೆ. ಇದರ ಬಗ್ಗೆ ಒಂದು ಶಬ್ದ ಕೂಡ ಹೇಳಿಲ್ಲಾ. ಆ ಕಡೆಯಲ್ಲಿ ಇನ್ನೂ ಮಳೆ ಬೆಳೆ ಆಗಿಲ್ಲ. ಅಲ್ಲಿ ಕೂಲಿಗಾರರ ಪರಿಸ್ಥಿತಿ ಬಹಳ ಕೆಟ್ಟಿದೆ.

ನಾನು ತಮ್ಮಲ್ಲಿ ಕೇಳುವುದೇನೆಂದರೆ, ಯಾವ ಗ್ರಾಮಗಳನ್ನು ಬರಗಾಲ ಪ್ರದೇಶವೆಂದು ಘೋಷಣೆ ಮಾಡಿದ್ದೀರೋ, ಆ ಪ್ರದೇಶದಲ್ಲಾದರೂ ಕೂಡ ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳುವ ಹಾಗೆ ಮಾಡುತ್ತೀರಾ ? ಹಿಂದೆ ಈ ಬಗ್ಗೆ ಏನು ಕಳಕಳಿ ತೋರಿಸಿದ್ದರೋ, ಈ ಸಲವೂ ಅದೇ ಕಳಕಳಿ ತೋರಿಸಿ ಕೆಲಸ ಪ್ರಾರಂಭ ಮಾಡುತ್ತೀರಾ ?

ಇನ್ನು ನಾನು ಸಿ ಅಂಡ್ ಡಿ ಲ್ಯಾಂಡ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ನಾನು ಈ ಬಗ್ಗೆ ಹಿಂದೆಯೂ ಸಹ ಪ್ರಸ್ತಾಪ ಮಾಡಿದ್ದೇನೆ. ಸಿ ಅಂಡ್ ಡಿ ಲ್ಯಾಂಡ್ಸ್ ಅನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿ ಕಾಡನ್ನು ಬೆಳೆಸಬೇಕು ಅಂತ ಮಾಡಿದ್ದಾರೆ. ಆದರೆ ಈಗಾಗಲೇ ಕೆಲವರು ಅಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಈಗ ಅರಣ್ಯ ಇಲಾಖೆ ಅಧಿಕಾರಿಗಳು ಅಲ್ಲಿಗೆ ಹೋಗಿ ಗುಲ್ಲೆಬ್ಬಿಸುತ್ತಿದ್ದಾರೆ. ಅಲ್ಲಿಗೆ ಅವರು ಹೋಗಿ ಪ್ರವೇಶ ಮಾಡುತ್ತಿದ್ದ ಸಂದರ್ಭದಲ್ಲಿ ನಾವು ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಹೋಗಿ ಆ ಅರಣ್ಯ ಅಧಿಕಾರಿಗಳಿಗೆ ಛೀಮಾರಿ ಹಾಕಿ ಆ ಜಾಗವನ್ನು ರೈತರಿಗೆ ಬಿಡಿಸಿಕೊಟ್ಟೆವು. ಇದು ೪-೫ ತಿಂಗಳ ಹಿಂದೆ ಆದದ್ದು. ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಕೇಳುವುದೇನೆಂದರೆ, ಈ ಬಗ್ಗೆ ತನಿಖೆ ಮಾಡಿಸಿ ಯಾರು ಆ ಜಮೀನಿನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ ಅವರ ಬಗ್ಗೆ ಕ್ರಮ ಕೈಗೊಳ್ಳಬಾರದೆಂದು ಅರಣ್ಯ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ ? ಬಹಳ ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು ಬಂದಿರತಕ್ಕಂಥಾ ಆ ಕೂಲಿಗಾರರನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಮತ್ತು ಈ ಬರಗಾಲ ಕಾಮಗಾರಿ ಬಗ್ಗೆ ತಾವು ಸ್ಪಷ್ಟವಾದ ಉತ್ತರ ಕೊಡಬೇಕೆಂದು ಕೇಳುತ್ತೇನೆ

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್. ವೆಂಕಟರಾಮಯ್ಯನವರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಎಕ್ಸೈಜ್ ಸುಂಕದಲ್ಲಿ ಅನ್ಯಾಯವಾಗಿದೆ ಅನ್ನುವ ಮಾತನ್ನು ಹೇಳಿದ್ದಾರೆ, ಅದನ್ನು ನಾನು ಹೇಳುವುದಕ್ಕೆ ಬರುವುದಿಲ್ಲ. ನಾನು ಆ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ಬಡ್ಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೇನೆ, ಬೇರೆ ಯಾವುದಾದರೂ ಸಂದರ್ಭದಲ್ಲಿ ಸವಿಸ್ತಾರವಾಗಿ ಹೇಳುತ್ತೇನೆ, ಇನ್ನು ಎರಡನೇ ವಿಚಾರ ಓಲ್ಡ್ ಏಜ್ ಪೆನ್‌ಷನ್ ಮತ್ತು ವಿಡೋ ಪೆನ್‌ಷನ್ ಏನು ಇದೆ ಅದನ್ನು ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಈಗ ನಮಗೆ ಸಧ್ಯಕ್ಕೆ ಅದನ್ನು ಹೆಚ್ಚು ಮಾಡುವ ಶಕ್ತಿ ಇಲ್ಲ, ಆದುದರಿಂದ ಅದನ್ನು ಸದ್ಯಕ್ಕೆ ಹೆಚ್ಚು ಮಾಡಲಿಕ್ಕೆ ಆಗುವುದಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬಯಸುತ್ತೇನೆ. ಇನ್ನು ಮೂರನೆಯ ವಿಚಾರ, ಹೌಸಿಂಗ್ ವಿಚಾರದಲ್ಲಿ ಹೇಳಿದ್ದಾರೆ ಅದರ ಬಗ್ಗೆ ಡಿಮ್ಯಾಂಡ್ ಬಂದಾಗ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ.

ಇನ್ನು ಶ್ರೀಮಾನ್ ಬಿ. ಎಸ್. ಯಡಿಯೂರಪ್ಪನವರು ಮುಖ್ಯವಾದ ಒಂದು ವಿಚಾರ ಹೇಳಿದ್ದಾರೆ. ಬರಗಾಲ ಕಾಮಗಾರಿಗಳನ್ನು ಪುನಃ ಪ್ರಾರಂಭಿಸಬೇಕು ಎಂದು ಹೇಳಿದ್ದಾರೆ. ಅವರ ಜಿಲ್ಲೆಗೆ ಮತ್ತು ಅವರ ತಾಲ್ಲೂಕಿಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಯಿಂದ ರಿಪೋರ್ಟ್ ತರಿಸಿ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ಇನ್ನು ಅವರು ಬಗರ್ ಹುಕುಂ ಸಾಗುವಳಿ ಮಾಡತಕ್ಕಂಥಾವರಿಗೆ ಅವರಿಗೆ ಅದನ್ನು ವಾಪಸ್ಸು ಕೊಡುತ್ತೇವೆ ಎಂದು ಸರ್ಕಾರದವರು ಆಶ್ವಾಸನೆ ಕೊಟ್ಟಿದ್ದಾರೆ ಅನ್ನುವ ಮಾತನ್ನು ಹೇಳಿದ್ದಾರೆ. ಈಗ ಈ ವಿಚಾರ ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಇದೆ. ಈ ಸಿ ಅಂಡ್ ಡಿ ಕ್ಲಾಸ್ ಜಮೀನು ಏನು ಇದೆ, ಮತ್ತು ಗ್ರಾಮಠಾಣ ಏನು ಇದೆ ಅಥವಾ ಗೋಮಾಳ ಜಮೀನು ಏನು ಇದೆ ಇದು ಫಾರೆಸ್ಟ್ ಆಧೀನದಲ್ಲಿ ಬರುತ್ತದೋ ಅಥವಾ ಯಾವುದರಲ್ಲಿ ಬರುತ್ತದೋ ಅನ್ನುವುದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಸದ್ಯಕ್ಕೆ ಇದು ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಇರುವುದರಿಂದ ಅವರ ರಿಪೋರ್ಟ್ ಬರಲಿ. ಮುಂದೆ ನೋಡೋಣ.

ಶ್ರೀ ವೀರಯ್ಯ ಸ್ವಾಮಿ ಮಹಾಲಿಂಗಯ್ಯ.—ಮಾನ್ಯ ಅಧ್ಯಕ್ಷರೇ, ಈ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಗ್ರಾಂಟ್ ಹಣವನ್ನು ಯಾವ ರೀತಿಯಾಗಿ ಕೊಡುತ್ತೀರಿ? ಪಿ ಡಬ್ಲ್ಯೂಡಿಗೆ ಎಲ್ ಓ ಸಿ ಇಷ್ಯೂ ಮಾಡಿದ ಹಾಗೆ ಇವುಗಳಿಗೂ ಇಷ್ಯೂ ಮಾಡುತ್ತೀರಾ ಹೇಗೆ ?

ಎರಡನೆಯದಾಗಿ, ಜಿಲ್ಲಾ ಪರಿಷತ್‌ಗಳಲ್ಲಿ ಹಾಗೂ ಮಂಡಲ ಪಂಚಾಯತ್‌ಗಳಲ್ಲಿ ಡೆವಲಪ್‌ಮೆಂಟ್ ವರ್ಕ್ಸ್ ತೆಗೆದುಕೊಳ್ಳುವಾಗ ಆಯಾಯ ಪ್ರಜಾ ಸಂಖ್ಯೆಗನುಗುಣವಾಗಿ ತೆಗೆದುಕೊಳ್ಳುತ್ತೀರಾ ಅಥವಾ ಹಿಂದುಳಿದ ಭಾಗಗಳು ಎಂದು ಏನು ಇವೆ, ಅದನ್ನು ಪರಿಗಣನೆಗೆ ತೆಗೆದುಕೊಂಡು ಆ ಭಾಗಕ್ಕೆ ಹೆಚ್ಚು ಹಣವನ್ನು ಒದಗಿಸುತ್ತೀರಾ ? ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಎಂ. ಹಿಂಡಸಗೇರಿ.— ಮೈನಾರಿಟಿ ಕಮಿಷನ್ ಅವರು ತಮ್ಮ ರಿಪೋರ್ಟ್‌ನ್ನು ಸರ್ಕಾರಕ್ಕೆ ಸಲ್ಲಿಸಿ ಮೂರು ತಿಂಗಳಾಯಿತು. ಆ ವರದಿಯನ್ನು ನಮಗೆ ಇನ್ನೂ ಕೊಟ್ಟಿಲ್ಲ. ಈ ವರದಿಯನ್ನು ಯಾವಾಗ ಜಾರಿಗೆ ಕೊಡುತ್ತೀರಾ ಎಂಬುದನು ತಿಳಿಸಬೇಕು. ಮತ್ತೆ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ಜಾಸ್ತಿ ಹಣ ಕೊಡುವ ಬಗ್ಗೆ ಆಯವ್ಯಯ ಪತ್ರದಲ್ಲಿ ಏನೂ ಹೇಳಿಲ್ಲ. ಇದಕ್ಕೆ ಜಾಸ್ತಿ ಹಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಕರ್ನಾಟಕ ವಕ್ಫ್ ಬೋರ್ಡಿಗೆ ಕೊಟ್ಟಿರುವ ಗ್ರ್ಯಾಂಟ್ ಸಾಲದು. ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನಾದರೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಹುಬ್ಬಳ್ಳಿ ಧಾರವಾಡ ನಗರದಲ್ಲಿ ಈಗ ಕುಡಿಯುವ ನೀರಿನ ಕೊರತೆ ಇದೆ. ಈ ನೀರಿನ ತೊಂದರೆ ನೀಗಿಸಲು ಚುನಾವಣೆಯ ಸಂದರ್ಭದಲ್ಲಿ ಸರ್ಕಾರದವರು ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಾಗ ಅದನ್ನು ರೂರಲ್ ಡೆವಲಪ್‌ಮೆಂಟ್‌ಗೋಸ್ಕರ ಖರ್ಚು ಮಾಡಿದರು. ಈಗ ಅಲ್ಲಿರುವಂಥ ನೀರಿನ ಕೊರತೆಯನ್ನು ಹೋಗಲಾಡಿಸಲು ಸರ್ಕಾರದವರು ಸ್ಪೆಷಲ್ ಗ್ರ್ಯಾಂಟ್ ಎಂದು ಕೊಡಬೇಕು ಮತ್ತು ಅಲ್ಲಿಗೆ ಮಲಪ್ರಭಾ ನದಿಯಿಂದ ನೀರನ್ನು ಒದಗಿಸಲು ಎರಡನೇ ಹಂತದ ಯೋಜನೆಯನ್ನು ಕೂಡಲೇ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಸದಸ್ಯರು ಮೈನಾರಿಟಿ ಕಮಿಷನ್ ರಿಪೋರ್ಟ್‌ನ್ನು ಏತಕ್ಕೆ ಸರ್ಕಾರ ಒಪ್ಪಿಕೊಂಡಿಲ್ಲ ಎಂದು ಕೇಳಿದ್ದಾರೆ. ಈಗ ಅದು ಸರ್ಕಾರದ ಪರಿಶೀಲನೆಯಲ್ಲಿದೆ. ನೆನ್ನೆ ಕೂಡ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಸಂಬಂಧಪಟ್ಟ ಮಂತ್ರಿಗಳು ಇದೇ ವಿಚಾರ ಹೇಳಿದ್ದಾರೆ. ಮತ್ತೆ ವಕ್ಫ್ ಬೋರ್ಡಿಗೆ ಒಂದು ಕೋಟಿ ರೂಪಾಯಿ ಕೊಡಬೇಕೆಂದು ಕೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ. ಮತ್ತೆ ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ಕುಡಿಯುವ ನೀರಿನ ತಾಪತ್ರಯವನ್ನು ಹೋಗಲಾಡಿಸಲು ಅಲ್ಲಿ ಬಾವಿಗಳನ್ನು ತೆಗೆಸಲು ಚೀಫ್–ಮಿನಿಸ್ಟರ್ ರಿಲೀಫ್ ಫಂಡ್‌ನಿಂದ ೩೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಲ್ಲಿ ಮನೆಕಂದಾಯ ಮತ್ತು ನೀರಿನ ತೆರಿಗೆಯನ್ನು ಹೆಚ್ಚು ಮಾಡುವ ಬಗ್ಗೆ ಜನರ ವಿರೋಧ ಇದೆ. ಇದನ್ನು ಅಲ್ಲಿನ ಜನರು ಒಪ್ಪಿಕೊಳ್ಳದಿದ್ದರೆ ಮುಂದೆ ಅಲ್ಲಿ ನೀರನ್ನು ಪೂರೈಕೆ ಮಾಡುವುದು ಕಷ್ಟವಾಗುತ್ತದೆಂದು ತಿಳಿಸುವುದಕ್ಕೆ ಬಯಸುತ್ತೇನೆ.

ಇನ್ನು ಮಾನ್ಯ ವೀರಯ್ಯಸ್ವಾಮಿ ಅವರು ಮಂಡಲ್ ಪಂಚಾಯಿತಿಗಳಿಗೆ ಗ್ರ್ಯಾಂಟ್ ಕೊಡುವಾಗ ಎಲ್ಲಾ ಕಡೆಗೂ ಸಮನಾಗಿ ಕೊಡುತ್ತೀರೋ ಅಥವಾ ಹಿಂದುಳಿದ ಭಾಗಗಳಿಗೆ ವಿಶೇಷವಾದ ಗ್ರ್ಯಾಂಟ್ ಕೊಡುತ್ತೀರೋ ಎಂದು ಕೇಳಿದರು. ಇದರಲ್ಲಿ ಎರಡು ತರಹದ ಅನುದಾನ ಇದೆ. ಮೊದಲನೆಯದು, ಜನಸಂಖ್ಯೆ ಆಧಾರದ ಮೇಲೆ ಕೊಡುತ್ತೇನೆ, ಎರಡನೆಯದು, ಸ್ಕೀಮ್ ವೈಸ್ ಗ್ರ್ಯಾಂಟ್ ಎಂದು ಕೊಡುತ್ತೇವೆ. ಅಂದರೆ ಯಾವ ಯಾವ ಸ್ಕೀಮುಗಳನ್ನು ಯೋಜನೆಯಲ್ಲಿ ಸೇರಿಸುತ್ತೇವೋ ಆ ಸ್ಕೀಮುಗಳಿಗೆ ನಾವು ಹಣವನ್ನು ಒದಗಿಸುತ್ತೇವೆ.

ಶ್ರೀ ಮದನಗೋಪಾಲ ನಾಯಕ್.— ಕ್ರೀಡಾಪರಿಷತ್ತಿಗೆ ಹೆಚ್ಚು ಹಣ ಒದಗಿಸುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಆದರೆ ಯಾವಯಾವ ಕ್ರೀಡೆಗಳಿಗೆ ಎಷ್ಟೆಷ್ಟು ಹಣ ಒದಗಿಸುತ್ತಾರೆ ಎಂಬುದನ್ನು ಹೇಳಿಲ್ಲ. ಈ ಬಗ್ಗೆ ವಿವರಣೆ ಬೇಕು. ಮತ್ತೆ ಪ್ರತಿ ತಾಲ್ಲೂಕಿನಲ್ಲಿಯೂ ಕ್ರೀಡಾಂಗಣ ಪ್ರಾರಂಭ ಮಾಡಲು ಏನಾದರೂ ಯೋಜನೆಯನ್ನು ಹಾಕಿಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.— ಇದಕ್ಕೆ ಸಂಬಂಧಪಟ್ಟ ಡಿಮ್ಯಾಂಡ್ಸ್ ಬಂದಾಗ ಇದರ ವಿವರಗಳು ತಮಗೆ ಗೊತ್ತಾಗುತ್ತದೆ.

ಶ್ರೀ ಎಸ್. ಜಿ. ನಂಜಯ್ಯನಮಠ್ — ಈಗ ಬಜೆಟ್‌ನಲ್ಲಿ ಕಾವೇರಿ ನದಿ ಯೋಜನೆಗಳಿಗೆ ನೂರ ಕೋಟಿ ರೂಪಾಯಿಗಳನ್ನು ಮತ್ತು ಕೃಷ್ಣ ನದಿ ಯೋಜನೆಗಳಿಗೆ ೨೦೦ ಕೋಟಿ ರೂಪಾಯಿಗಳನು ಕೊಟ್ಟಿದ್ದಾರೆ. ಕಾವೇರಿಜಲಾನಯನ ಪ್ರದೇಶದಲ್ಲಿ ೫ ರಿಂದ ೬ ಲಕ್ಷ ಎಕರೆಯವರೆಗೆ ನೀರಾವರಿ ಆದರೆ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ೨೦ ರಿಂದ ೨೧ ಲಕ್ಷ ಎಕರೆಯವರೆಗೆ ನೀರಾವರಿ ಆಗುತ್ತದೆ. ಈ ಕಾರಣದಿಂದ ಇವರ ಒಂದು ಆಧಾರದ ಮೇಲೆ ಕೃಷ್ಣಾ ನದಿ ಯೋಜನೆಗಳಿಗೆ ೨೫೦ ಕೋಟಿ ರೂಪಾಯಿಗಳನ್ನು ಮತ್ತು ಕಾವೇರಿ ನದಿ ಯೋಜನೆಗಳಿಗೆ ೫೦ ಕೋಟಿ ರೂಪಾಯಿಗಳನ್ನು ಒದಗಿಸುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಮಲಪ್ರಭಾ ಯೋಜನೆಯನ್ನು ಸರಿಯಾಗಿ ಕಾರ್ಯಗತ ಮಾಡಬೇಕಾದರೆ ರಾಮತೀರ್ಥ ಮತ್ತು ಮಾದಾಯಿ ನದಿಗಳ ನೀರನ್ನು ಡೈವರ್ಟ್ ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಆ ಭಾಗದ ಎಲ್ಲ

ರೈತರಿಗೂ ನೀರು ಸಿಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು.

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ.— ಮುಖ್ಯಮಂತ್ರಿಗಳು ಭದ್ರ ಮೇಲ್ದಂಡೆ ವಿಷಯದಲ್ಲಿ ಏನು ಪ್ರಸ್ತಾಪ ಮಾಡಲಿಲ್ಲ. ಅದರ ಬಗ್ಗೆ ಸರ್ಕಾರದ ನಿಲುವು ಏನೆಂದು ಗೊತ್ತಾಗಲಿಲ್ಲ. ದಯಮಾಡಿಟ್ಟು ಅದನ್ನು ತಿಳಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಸದಸ್ಯರುಗಳಿಗೆ ಒಂದು ಅರಿಕೆಯನ್ನು ಮಾಡಿಕೊಳ್ಳಲಿಕ್ಕೆ ಬಯಸುತ್ತೇನೆ. ಏನೆಂದರೆ ವಿವಿಧ ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಪಟ್ಟ ಅಥವಾ ಅದರ ಕೆಲಸಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಈಗ ಕೇಳಿದರೆ ನಾಳೆ ಆ ಬೇಡಿಕೆಗಳ ವಿಚಾರ ಇಲ್ಲಿ ಪ್ರಸ್ತಾಪಕ್ಕೆ ಬಂದಾಗ ಏನು ಕೇಳುತ್ತಾರೆ ? ಅಪ್ಪರ್‌ಭದ್ರ ವಿಚಾರದಲ್ಲಿ ಇಷ್ಟೇ ಹೇಳುತ್ತೇನೆ. ಈ ವಿಚಾರದಲ್ಲಿ ಬಡ್ಜೆಟ್‌ನಲ್ಲಿ ಸ್ವಲ್ಪ ಹಣವನ್ನು ಪ್ರಥಮಬಾರಿಗೆ ಒದಗಿಸಿದ್ದೇವೆ. ಪ್ರಾರಂಭದಲ್ಲಿ ಅಷ್ಟೇ ಆಗುತ್ತದೆ. ಒಂದು ಸಂತೋಷದ ಸುದ್ದಿ ಏನೆಂದರೆ, ನಿನ್ನೆ ಒಂದು ಮೆಸೇಜ್ ಬಂದಿದೆ. ಅಪ್ಪರ್‌ಕೃಷ್ಣಾದ ಫಸ್ಟ್ ಸ್ಟೇಜ್ ಸೆಕೆಂಡ್ ಫೇಸನ್ನು ಈಗ ವರ್ಲ್ಡ್ ಬ್ಯಾಂಕ್‌ಗೆ ರೆಕಮೆಂಡೇಷನ್‌ಗೆ ಸಿದ್ಧವಾಗಿದೆ ನಾವು ಕಳಿಸಿ ಕೊಡುತ್ತೇವೆ ಎಂದು ಸುದ್ದಿ ಕೇಂದ್ರದಿಂದ ಬಂದಿದೆ. ಅದೇ ರೀತಿ ಕೃಷ್ಣಾ ವಲಯದಲ್ಲಿರತಕ್ಕಂಥ ಎಲ್ಲಾ ಅಂದರೆ, ಅದರಲ್ಲಿ ಅಪ್ಪರ್ ಭದ್ರ ಬಂತು, ಇದಕ್ಕೆ ಒಂದು ದೃಷ್ಟಿಯಿಂದ ಕೇಂದ್ರದ ಇರಿಗೇಷನ್ ಮಂತ್ರಾಲಯದವರು ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಆದುದರಿಂದ ಇದರ ಬಗ್ಗೆ ಅಷ್ಟೊಂದು ಕಳವಳ ಪಡತಕ್ಕ ಕಾರಣವಿಲ್ಲ. ೯-೧೦ನೇ ತಾರೀಖು ಈ ಇಲಾಖೆ ಬೇಡಿಕೆ ಬರುತ್ತದೆ ಆಗ ಮಂತ್ರಿಗಳು ವಿವರವಾಗಿ ಹೇಳುತ್ತಾರೆ. ಮಾನ್ಯ ಖರ್ಗೆಯವರು ಕೇಳಿದ ವಿಚಾರವನ್ನೇ ಪುನಃ ಶ್ರೀಮಾನ್ ನಂಜಯ್ಯನಮಠ್ ಅವರು ಕೇಳಿದ್ದಾರೆ. ಆದ್ದರಿಂದ ಇದಕ್ಕೂ ಅದೇ ಉತ್ತರ ಹೇಳಬೇಕಾಗಿದೆ.

ಶ್ರೀಮತಿ ಸುಮಾ ವಸಂತ.— ಕೇಂದ್ರ ಸರ್ಕಾರದಿಂದ ಪ್ರತಿಯೊಂದು ಮಹಿಳಾ ಸಮಾಜಕ್ಕೆ ಒಂದು ಸಾವಿರ ಬಿಡುಗಡೆ ಮಾಡಿದ್ದಾರೆ. ಅದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಕನ್‌ಕರೆನ್ಸ್ ಕೊಡುವುದಕ್ಕೆ ತಡ ಮಾಡುತ್ತಾ ಇದ್ದಾರೆ. ಆದುದರಿಂದ ಆದಷ್ಟು ಬೇಗ ಅದನ್ನು ಬಿಡುಗಡೆ ಮಾಡುವುದಕ್ಕೆ ಆದೇಶ ಹೊರಡಿಸಬೇಕು ಎಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಅವರು ಕೇಳಿರುವ ವಿಷಯದ ಬಗ್ಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಏನು ವಿಚಾರ ಎಂದು ಕೇಳಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೆ, ಒಂದು ಅನುಮಾನ ಮತ್ತು ಒಂದು ಪ್ರಶ್ನೆ ಹಾಗೂ ಒಂದು ಸಲಹೆ ಇಷ್ಟಕ್ಕೆ ತಾವು ಅವಕಾಶ ಕೊಡಬೇಕೆಂದು ಕೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಡಿಫಿಸಿಟ್ ಫೈನಾನ್ಸಿಂಗ್ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದರು. ನನಗೆ ಒಂದು ತೀವ್ರ ಅನುಮಾನ ಏನು ಬಂದಿದೆ ಅಂದರೆ, ನಿಮ್ಮದೇ ಆದಂಥ ಒಂದು ಡಿಫಿಸಿಟ್ ಫೈನಾನ್ಸಿಂಗ್ ಕ್ರಮವನ್ನು ಕಂಡುಕೊಂಡಿದ್ದೀರಿ ಎಂದು. ಒಂದು ವರ್ಷದಲ್ಲಿ ನೀವು ಏನು ಬಡ್ಜೆಟ್‌ನಲ್ಲಿ ಹಣ ತೋರಿಸಿದ್ದೀರಿ, ಆ ಕೆಲಸ ಒಂದು ವರ್ಷ ಮಾಡದೇ ಹೋದರೆ, ಅಷ್ಟು ದುಡ್ಡು ವೇಸ್ ಅಂಡ್ ಮೀನ್ಸ್‌ಗೆ ದೊರಕಿದ ಹಾಗೆ ಆಯಿತು. ನನ್ನ ಕ್ಷೇತ್ರದಲ್ಲಿ ೧೦-೧೫ ಲಕ್ಷ ಮಂಜೂರು ಮಾಡಿದರೆ ಒಂದು ಕೆಲಸವೂ ಪ್ರಾರಂಭವಾಗಿಲ್ಲ. ಅದಕ್ಕೆ ಯಾವುದೇ ತಾಂತ್ರಿಕ ಅಡಚಣೆಗಳಿಲ್ಲ, ಭೌತಿಕ ಅಡಚಣೆಗಳಿಲ್ಲ, ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಂ ಇಲ್ಲ. ಅವರೂ ಸರಳವಾದ ಕೆಲಸಗಳೂ ಪ್ರಾರಂಭವಾಗಿಲ್ಲ. ಇದೊಂದು ಪರೋಕ್ಷವಾದ ಡೆಫಿಸಿಟ್ ಫೈನಾನ್ಸಿಂಗ್. ಅದಕ್ಕೆ ನಾನು ಕೇಳಿದ್ದು, ಎಷ್ಟು ವರ್ಷಕ್ಕೆ ಸೇರಿಸಿ ಒಂದು ಬಡ್ಜೆಟ್ ಎಂದು. ಈ ವರ್ಷಕ್ಕೆ ಹೊಸದಾಗಿ ಕೆಲಸಗಳನ್ನು ತೆಗೆದುಕೊಳ್ಳುವುದಿಲ್ಲ. ಹೋದವರ್ಷದ್ದು ಕೆಲಸ ಮಾಡಲಿಲ್ಲ ಅಂದರೆ ನೀವು ತೋರಿಸಿದ್ದು ನಿಮಗೇ ಉಳಿತಾಯವಾಗಿದೆಯಲ್ಲವೇ ? ಅದಕ್ಕೆ ಏನು ಸಮಾಧಾನವೋ ಗೊತ್ತಿಲ್ಲ. ಎರಡನೆಯದು, ೩೦ ಕೋಟಿ ಜೀರೋ ಬಡ್ಜೆಟ್ ಉಳಿಯುತ್ತದೆ ಎಂದು ಹೇಳಿದಿರಿ. ಜೀರೋ ಬಡ್ಜೆಟ್‌ನ ಪ್ರಹಾರಕ್ಕೆ ತುತ್ತಾಗಿರತಕ್ಕ ಯೋಜನೆಗಳು ಯಾವುವು. ಯಾತಕ್ಕೋಸ್ಕರ ಅದು ಇದರಲ್ಲಿ ಸಿಕ್ಕಿಕೊಂಡುಬಿಟ್ಟಿದೆ. ಅದು ನಿರುಪಯುಕ್ತ ಎಂದು ಯಾವ ಕ್ರಮದಿಂದ ತೀರ್ಮಾನಕ್ಕೆ ಬಂದಿರಿ. ಮೂರನೆಯದು, ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್ ಬಗ್ಗೆ ಇಲ್ಲಿ ಹೆಚ್ಚು ಮಾತುಕತೆಯಾಯಿತು. ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ನಮ್ಮ ರಾಜ್ಯದಲ್ಲಿ ಏನಿದೆ, ಅದನ್ನು

ನೇರವಾಗಿ ನಿರ್ವಹಣೆ ಮಾಡಲು ಕೆಲವು ದಿವಸ ನೀವು ಇಟ್ಟುಕೊಂಡರೆ ಒಳ್ಳೆಯದು. ಇಂಡಸ್ಟ್ರೀಸ್ ಮಿನಿಸ್ಟರ್, ಮ್ಯಾನೇಜಿಂಗ್ ಡೈರೆಕ್ಟರ್, ಛೇರ್ಮನ್ ಎಲ್ಲಾ ಇದ್ದಾರೆ. ಆದ್ದರಿಂದ ಬ್ಯುರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸನ್ನು ಮುಖ್ಯಮಂತ್ರಿಗಳೇ ಇಟ್ಟುಕೊಂಡು ಒಂದು ವರ್ಷ ನೋಡಲಿ. ನಂತರ ಬೇರೆ ವಿಚಾರ ಮಾಡಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ತಮ್ಮ ಸಲಹೆಯನ್ನು ಅತ್ಯವಶ್ಯಕವಾಗಿ ಪರಿಶೀಲಿಸುತ್ತೇನೆ. ಇನ್ನು ಬಜೆಟ್‌ನಲ್ಲಿ ಸೇರಿದ ಕೆಲಸಗಳಿಗೆ ಹಣಕೊಡದಿದ್ದರೆ, ಆ ಹಣ ಉಳಿಯುತ್ತದೆಂದು ಹೇಳಿದ್ದಾರೆ. ವಿದ್ಯಾ ಇಲಾಖೆಯಿಂದ ಹಣ ಸೇವಾಗುತದೆ. ಯಾವುದೋ ಕಾಲದಿಂದ ನಡೆದುಕೊಂಡು ಬಂದಂಥ ಕೆಲವು ಸ್ಕೀಂಗಳು,ಯೋಜನೆಗಳು ಏನಿವೆ ಅವುಗಳಿಗೆ ಅರ್ಥ ಇಲ್ಲ,ಆದರೂ ಅವು ಹಿಂದಿನಿಂದಲೂ ನಡೆದುಕೊಂಡ ಬಂದಿವೆ. ಕೆಲವು ಬೇರೆ ಬೇರೆ ಡಿಪಾರ್ಟ್‌ಮೆಂಟುಗಳಿಗೆ ಕೊಟ್ಟಂಥ ಹಣ ಸಕಾಲಕ್ಕೆ ಕೊಡದೇ ಇರುವುದರಿಂದ, ಆ ಯೋಜನೆಗಳ ಕೆಲಸ ನಡೆಯದೇ ಹಣ ಮಾತ್ರ ಹಾಗೆ ಉಳಿಯುತ್ತದೆ, ಇದರಿಂದ ಅವರಿಗೆ ಅನುಮಾನವಾಗುತ್ತದೆಂದು ಹೇಳಿದ್ದಾರೆ. ಇದು ಡಿಸಿಫಿಟ್ ಫೈನಾನ್ ಆಗುವುದಿಲ್ಲ. ಸರ್‌ಪ್ಲಸ್ ಅಂದರೆ ರೆವಿನ್ಯೂ ಸರ್‌ಪ್ಲಸ್ ಆಗುತ್ತದೆ. ಬಜೆಟ್ಟಿನಲ್ಲಿ ಹಣ ತೊಡಗಿಸಿ ಯಾವುದೇ ಕಾರಣದಿಂದ ಖರ್ಚಾಗದೇ ಇದ್ದರೆ ಅದು ಉಳಿತಾಯವಾಗುತ್ತದೆನ್ನುವುದು ಸ್ವಯಂವೇದ್ಯ, ಆಗ ಡಿಫಿಸಿಟ್ ಫೈನಾನ್ಸ್ ಹೆಚ್ಚಾಗುವುದಿಲ್ಲ, ಕಡಿಮೆ ಆಗುತ್ತದೆ,

ಶ್ರೀ ಸಿ. ಬೈರೇಗೌಡ.—ಸ್ವಾಮಿ. ಕೃಷ್ಣಾ ಮತ್ತು ಕಾವೇರಿ ವಲಯದ ಯೋಜನೆಗಳಿಗೆ ಹೆಚ್ಚು ಕೊಡುವುದರಿಂದ ಅಲ್ಲಿನ ರೈತರಿಗೆ ಅನುಕೂಲವಾಗುತ್ತದೆ. ಆದರೆ ಎರಡು ಯೋಜನೆಗಳಿಂದ ದೂರ ವಿರುವ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ರೈತರಿಗೆ ವಿದ್ಯುಚ್ಛಕ್ತಿ ಒಂದೇ ಆಧಾರ. ಇವತ್ತು ದಿನದಲ್ಲಿ ಎರಡು ಗಂಟೆ ಕೂಡ ವಿದ್ಯುತ್ ಇರುವುದಿಲ್ಲ. ವಿದ್ಯುತ್ ತೊಂದರೆಯನ್ನು ನಿವಾರಣೆ ಮಾಡ ತಕ್ಕ ರೀತಿಯಲ್ಲಿ ಸಮಂಜಸವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಯವರು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣಹೆಗಡೆ.—ಈ ವಿಚಾರದಲ್ಲಿ ಮಾನ್ಯ ಭೈರೇಗೌಡರು ೪-೫ ದಿನಗಳಿಂದ ಪ್ರಸ್ತಾಪ ಮಾಡಿದ್ದಾರೆ. ನಾನು ಈ ವಿಚಾರವನ್ನು ವಿದ್ಯುಚ್ಛಕ್ತಿ ಮಂತ್ರಿಗಳ ಜೊತೆಯಲ್ಲೂ ಚರ್ಚೆ ಮಾಡಿದ್ದೇನೆ. ಕೋಲಾರ ಜಿಲ್ಲೆಯಲ್ಲಿ ಏನೊಂದು ತೊಂದರೆಯಾಗಿದೆ....

ಶ್ರೀಮತಿ ಕೆ. ಎಸ್, ನಾಗರತ್ನಮ್ಮ.—ಎಲ್ಲಾ ಕಡೆ ತೊಂದರೆ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಮುಖ್ಯವಾಗಿ ಕೋಲಾರ ಜಿಲ್ಲೆಯಲ್ಲಿ ಲೈನುಗಳಿಗೆ ಹೆಚ್ಚು ವಿದ್ಯುತ್ ಸರಬರಾಜು ಮಾಡುವಂಥ ಒಂದು ಶಕ್ತಿ ಇಲ್ಲ. ತಕ್ಷಣ ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ವಿದ್ಯುತ್ ಮಂತ್ರಿಗಳಿಗೆ ತಿಳಿಸಿದ್ದೇನೆ.

ಈ ವಿಚಾರದಲ್ಲಿ ಆದಷ್ಟು ಬೇಗನೆ ಕ್ರಮ ತೆಗೆದುಕೊಳ್ಳಲಾಗುವುದು. ಕಾವೇರಿ ಮತ್ತು ಕೃಷ್ಣಾ ಜಲಾನಯನ ಪ್ರದೇಶಗಳಿಗೆ ಸೇರದೇ ಇರತಕ್ಕ ಪ್ರದೇಶಗಳು ನಮ್ಮ ರಾಜ್ಯದಲ್ಲಿವೆ. ಕೋಲಾರ ಮತ್ತು ಬೆಂಗಳೂರು ಜಿಲ್ಲೆ ಅಷ್ಟೇ ಅಲ್ಲ. ಚಿಕ್ಕಮಂಗಳೂರು, ನಾರ್ತ್ ಕೆನರಾ ಹಾಗೂ ಸ್ವಲ್ಪ ಮಟ್ಟಿಗೆ ಕೊಡಗು ಜಿಲ್ಲೆಯೂ ಸೇರುತ್ತದೆ. ಅಲ್ಲಿ ಯಾವುದೇ ಒಂದು ದೊಡ್ಡ ನೀರಾವರಿ ಯೋಜನೆ ಮಾಡುವಂತಿಲ್ಲ. ಸಣ್ಣನೀರಾವರಿ ಮಾತ್ರ ಅಂದರೆ, ಸಣ್ಣ ಸಣ್ಣ ಕೆರೆಗಳನ್ನು ಮಾಡಿಕೊಳ್ಳಬಹುದು. ಆದರೂ ನಾವು ನಮ್ಮ ಬಂಧುಗಳ ಸುಖ ನೋಡಿಕೊಂಡು ಸಮಾಧಾನಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು.—ಇಲ್ಲಿಗೆ ಉತ್ತರ ಮುಗಿಯಿತು. ಈಗ ಪ್ರಶ್ನೋತ್ತರ ವೇಳೆ